ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

09 ಡಿಸೆಂಬರ್ 2015 ಪುಟ 20 ರೂ. 15/-



ಟಿಪ್ಪೂ ಚರಿತ್ರೆ ಕಾಲದ ನಾಣ್ಯ



ಬಂಟ್ವಾಳದಲ್ಲಿ ಒಂದು 'ಮಿಸ್ಟೇಕ್'

ಡಿ ನಡೆಯಲ್ಲಿ ಸ್ವಜನಪಕ್ಷಪಾತ



ಗಳೂರು: ಬೆಳಗೋಡು

ಹತ್ಯೆಯ ಸೂತ್ರಧಾರ ಯಾರು?





ಹಾವೇರಿ

ಖಾದ್ರಿಯ ಹಫ್ತಾ ಪಾಲಿಟಿಕ್ಸ್

ಐಎಸ್‌ಐಎಸ್ ಎಂಬ ‘ಮನುಕುಲದ ಅಪಾಯ’ಕ್ಕೆ ಯಾರನ್ನು ದೂರೋ



ಮಧ್ಯಪ್ರಾಚ್ಯದ ತೈಲ, ರಾಜಕೀಯ, ಮತಾಂಧತೆ, ಭಯೋತ್ಪಾದನೆ ಯಾವುದಕ್ಕೂ ಸಂಬಂಧವಿಲ್ಲದ ಸಾವಿರಾರು ಅಮಾಯಕ ಜೀವಗಳು ಸಾಯುತ್ತಿದ್ದಾರೆ. ಈ ರೀತಿ ಸಾಯುತ್ತಿರುವವರಲ್ಲಿ ಅತ್ಯಂತ ಹೆಚ್ಚು ಜನರು ಇರಾಕ್ ಮತ್ತು ಸಿರಿಯಾಗಳ ಮುಸ್ಲಿಮರಾಗಿದ್ದಾರೆ. ಅಲ್ಲಿಂದ ಹೊರಟ ಕೊಲೆಗಡುಕ ಪಡೆಗಳು ಪ್ರಪಂಚ ಬೇರೆ ಭಾಗಗಳಲ್ಲೂ ತಮ್ಮ ಕೃತ್ಯ ನಡೆಸಲಾರಂಭಿಸಿದ್ದಾರೆ. ಹೀಗಿರುವಾಗ ನಮಗೆ ಒಪ್ಪಿಗೆಯಾಗದ ಒಂದು ಗುಂಪಿನ ಮೇಲೆ ಹೊಣೆ ರವಾನಿಸಿ, ಅವರನ್ನು ದೂರಿಬಿಟ್ಟು ಸುಮ್ಮನಾಗಬಾರದು. ಹೇಗಾದರೂ ಸರಿ, ಈ ಮಾನವೀಯ ದುರಂತವನ್ನು ತಡೆಗಟ್ಟುವುದು ಇಂದಿನ ತುರ್ತುಗಳಲ್ಲಿ ಒಂದು. ಆದರೆ, ಇದು ನಮ್ಮ ಕೈನಲ್ಲಿ ಇಲ್ಲ.


ಬಹುಹಿಂದೆ, ಆಫ್ಘಾನಿಸ್ತಾನವೇ ಉಗ್ರರ ಅಡಗುತಾಣವಾಗಿರುವುದರಿಂದ, ತಾಲಿಬಾನ್ ಉಗ್ರರೇ ಅಲ್ಲಿ ದೇಶವನ್ನೂ ಆಳುತ್ತಿರುವುದರಿಂದ ಅವರನ್ನು ನಿರ್ನಾಮ ಮಾಡಿದರೆ ಉಗ್ರವಾದ ಇಲ್ಲವಾಗುತ್ತದೆಂದು ಹೇಳಲಾಗುತ್ತಿತ್ತು, ನಿರ್ನಾಮವಾಯಿತು. ಉಗ್ರವಾದ ಇಲ್ಲವಾಗಲಿಲ್ಲ, ಇದರ ಮಾಸ್ಟರ್ ಮೈಂಡ್ ಮತ್ತು ಹಣಕಾಸನ್ನು ನಿರ್ವಹಿಸುತ್ತಿದ್ದ ಬಿನ್ ಲಾಡೆನ್ ಇನ್ನೂ ಸತ್ತಿರಲಿಲ್ಲವಾದ್ದರಿಂದ, ಆಲ್‌ಕೈದಾದ ಉಗ್ರಗಾಮಿ ಚಟುವಟಿಕೆಗಳು ಮುಂದುವರೆಯುತ್ತಿವೆ; ಹಾಗಾಗಿ ಬಿನ್ ಲಾಡೆನ್‌ನನ್ನು ತೆಗೆಯಬೇಕು, ಆಗ ಇದು ಕೊನೆಯಾಗಬಹುದೆಂದು ಭಾವಿಸಲಾಯಿತು. ಬಿನ್ ಲಾಡೆನ್‌ನ ಕೊನೆಯಾಯಿತು. ಉಗ್ರಗಾಮಿ ಚಟುವಟಿಕೆಗಳು ಕೊನೆಯಾಗಲಿಲ್ಲ, ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್‌ರನ್ನು ಸೋಲಿಸಿ, ಸೆರೆಹಿಡಿದು ಗಲ್ಲಿಗೇರಿಸಲಾಯಿತು. ಉಗ್ರವಾದವನ್ನು ಇಲ್ಲವಾಗಿಸಲಾಗಲಿಲ್ಲ, ಇದರರ್ಥವೇನು? ಭಯೋತ್ಪಾದನೆಯ ಮೂಲವನ್ನು ಸರಿಯಾಗಿ ಪತ್ತೆ ಹಚ್ಚಲಾಗಿಲ್ಲವೆಂದೇ ಅಥವಾ ಅದನ್ನು ಇಲ್ಲವಾಗಿಸಲು ಸಾಧ್ಯವಿರದಷ್ಟು ಬಲಾಢ್ಯವಾಗಿ ಬೆಳೆದುಕೊಂಡಿದೆಯೆಂದೇ?

ಇವೆರಡೂ ನಿಜ. ಅದಕ್ಕಿಂತಲೂ ನಿಜವಾದ ಇನ್ನೊಂದು ಸಂಗತಿಯೂ ಇದೆ. ಒಂದನ್ನು ನಿರ್ನಾಮ ಮಾಡುತ್ತೇವೆಂದು ಹೊರಟಿರುವವರೇ ಇನ್ನೊಂದಕ್ಕೆ ಜನ್ಮ ನೀಡುತ್ತಿದ್ದಾರೆ. ಈ ದುಷ್ಟ ಹಾಗೂ ಕ್ರೂರ ಆಟದ ಎಳೆಯನ್ನು ನಾವು ಅರ್ಥಮಾಡಿಕೊಂಡರೆ, ಸಮಸ್ಯೆಯ ಇನ್ನೊಂದು - ಬಹುಮುಖ್ಯವಾದ - ಎಳೆಯನ್ನು ಅರ್ಥಮಾಡಿಕೊಳ್ಳಬಹುದು. ಅದೇನೇ ಇದ್ದರೂ, ಯಾವುದೇ ಕಾರಣಗಳಿದ್ದರೂ ಅಂತಿಮವಾಗಿ ಈ ದಾರಿಯನ್ನು ಆರಿಸಿಕೊಂಡಿರುವವರು ಐಎಸ್‌ಐಎಸ್ ಉಗ್ರರೇ ಆಗಿದ್ದಾರೆ. ಹೀಗಾಗಿ ಮೊದಲಿಗೆ ಅವರನ್ನೇ ದೂರಬೇಕು. ‘ನಿಮಗೆ ಎಂಥದ್ದೇ ಕಾರಣಗಳಿದ್ದರೂ, ಈ ಪ್ರಮಾಣದ ಹಿಂಸಾಕಾಂಡದಿಂದ ಸಾಧಿಸಿದ್ದೇನು? ಇವೆಲ್ಲವೂ ನಿಮ್ಮ ‘ಇಸ್ಲಾಮಿಕ್ ಸ್ಟೇಟ್’ಗೆ ಏನು ಒಳ್ಳೆಯದು ಮಾಡಲು ಸಾಧ್ಯ? ನೀವು ಮಾಡುತ್ತಿರುವುದಕ್ಕೂ ಇಸ್ಲಾಮಿಗೂ ಎತ್ತಣಿಂದೆತ್ತ ಸಂಬಂಧ? ಈ ಕೃತ್ಯಗಳ ತಕ್ಷಣದ ಹಾಗೂ ದೀರ್ಘಕಾಲದ ಪರಿಣಾಮಗಳ ಹೊಣೆಗಾರಿಕೆಯಿಂದ ನೀವು ತಪ್ಪಿಸಿಕೊಳ್ಳಲಾರಿರಿ. ಅಲ್ಲಾ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲ’ ಶ್ರದ್ಧಾವಂತ ಮುಸ್ಲಿಂ ಮೌಲ್ವಿಯೊಬ್ಬರ ಈ ಮಾತುಗಳು ಈ ನಿಟ್ಟಿನಲ್ಲಿ ಹೇಳಬಹುದಾದ ಬಹುಮುಖ್ಯ ಅಂಶಗಳನ್ನು ಹೇಳುತ್ತವೆ.

ಐಎಸ್‌ಐಎಸ್ ಉಗ್ರರ ಬಗ್ಗೆ ತೀವ್ರ ವಿರೋಧ ಹೊಂದಿರುವವರಿಗೂ ಅದು ಇಂದು ಒಂದು ದೊಡ್ಡ ಭೂಭಾಗದ ಆಳ್ವಿಕೆಯನ್ನು ನಡೆಸುತ್ತಿದೆ ಎಂಬುದು ತಿಳಿದಿಲ್ಲ, ಇರಾಕ್‌ನ ವಾಯುವ್ಯ ಭಾಗ ಮತ್ತು ಸಿರಿಯಾದ ಉತ್ತರ ಹಾಗೂ ಈಶಾನ್ಯ ಭಾಗದ ಸಾಕಷ್ಟು ಪ್ರದೇಶವನ್ನು ಅದು ತನ್ನ ಅಂಕೆಯಲ್ಲಿಟ್ಟುಕೊಂಡಿದೆ. ಅದರದ್ದೇ ಆಳ್ವಿಕೆ ಅಲ್ಲಿ ನಡೆಯುತ್ತಿದೆ. ಕೆಲವು ವರ್ಷಗಳ ಕೆಳಗೆ ನಾವು ಹೆಸರೇ ಕೇಳಿರದ ಗುಂಪೊಂದು ಇಷ್ಟೊಂದು ಬಲಾಢ್ಯವಾಗಿದ್ದು ಹೇಗೆ? ಇದು ಹುಟ್ಟಿದ್ದು ಹೇಗೆ? ಯಾವಾಗ? ಮತ್ತು ಅದನ್ನು ಹುಟ್ಟಿಸಿದವರು ಯಾರು? ಈ ಪ್ರಶ್ನೆಗಳೂ ಮುಖ್ಯ

ಈ ನವೆಂಬರ್ 13ರ ಶುಕ್ರವಾರ ಪ್ಯಾರಿಸ್‌ನಲ್ಲಿ ನಡೆದ ದಾಳಿಯ ನಂತರವೇ ಐಎಸ್‌ಐಎಸ್ ಎಲ್ಲೆಡೆ ಚರ್ಚೆಯ ವಸ್ತುವಾಗಿಲ್ಲ, ಈ ಹಿಂದೆಯೂ ಅದು ಹಲವು ಪೈಶಾಚಿಕವೆನ್ನಬಹುದಾದ ದಾಳಿಗಳನ್ನು ನಡೆಸಿದೆ. ಆ ಮೂಲಕ ಮುಸ್ಲಿಮರನ್ನು ಬಯ್ಯಲು, ಇನ್ನಷ್ಟು ದುಷ್ಟರನ್ನಾಗಿಸಲು ಹಲವರಿಗೆ ಸರಕನ್ನು ಒದಗಿಸಿದೆ. ತುಂಬಾ ಸಮತೋಲಿತವಾಗಿ ಪ್ರತಿಕ್ರಿಯಿಸುವವರೂ ಸಹ, ನೋಡಿ, ಪ್ರಪಂಚದಲ್ಲಿ ಇವರು ಮಾತ್ರವೇ ಏಕೆ ಭಯೋತ್ಪಾದಕರಾಗಿದ್ದಾರೆ ಎಂದು ಕೇಳತೊಡಗಿದ್ದಾರೆ. ಹೀಗಾಗಿ ಐಎಸ್‌ಐಎಸ್ ಈ ರೀತಿ ಬೆಳೆದುನಿಂತಿದ್ದು ಯಾರಿಂದ ಎಂಬುದನ್ನು ಇನ್ನೊಮ್ಮೆ ನೆನೆದುಕೊಳ್ಳುವುದು ಅಗತ್ಯವಾಗಿದೆ.

ಮೊದಲಿಗೆ 1993ರ ಬ್ರಿಟನ್‌ನ ಇಂಡಿಪೆಂಡೆಂಟ್ ಪತ್ರಿಕೆಯಲ್ಲಿ ಬಂದ ಬರಹದತ್ತ ನಿಮ್ಮ ಗಮನ ಸೆಳೆಯಬೇಕಿದೆ. ಅದರಲ್ಲಿ ಬಿನ್‌ಲಾಡೆನ್‌ನ ದೊಡ್ಡ ಫೋಟೋದೊಂದಿಗೆ ‘ಶಾಂತಿಗಾಗಿ ತನ್ನ ಸೈನ್ಯವನ್ನು ಇಳಿಸಿದ ಸೋವಿಯತ್ ವಿರೋಧಿ ಯೋಧ’ ಎಂದು ಬರೆಯಲಾಗಿದೆ. ಹೌದು. ಅಮೆರಿಕ, ಬ್ರಿಟನ್‌ಗಳ ಪಾಲಿಗೆ ಆತ ಯೋಧ ಮಾತ್ರವೇ ಆಗಿರಲಿಲ್ಲ, ‘ಸ್ವಾತಂತ್ರ್ಯ ಹೋರಾಟಗಾರ’ನೂ ಆಗಿದ್ದ. ಅದು ಅರ್ಥವಾಗಲು ನಾವು ಇನ್ನೂ ಹಿಂದಕ್ಕೆ ಹೋಗಬೇಕು: ಅಮೆರಿಕದ ಅಧ್ಯಕ್ಷ ರೊನಾಲ್ಡ್ ರೇಗನ್ ತನ್ನ ಶ್ವೇತಭವನದಲ್ಲೇ ನಡೆಸಿದ ಸಭೆಯೊಂದರ ಚಿತ್ರ ನೋಡಿ. ಈ ಸಭೆ ನಡೆಯಲು ಒಂದು ಹಿನ್ನೆಲೆಯಿದೆ.



1980ರ ದಶಕದಲ್ಲಿ ಸೋವಿಯತ್ ಒಕ್ಕೂಟವು ಆಫ್ಘಾನಿಸ್ತಾನವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದಾಗ, ಅಮೆರಿಕದ ಪಾಲಿಗೆ ಅದು ‘ದುಷ್ಟ ಆಡಳಿತ (evil regime)’ ಆಗಿತ್ತು, ಅದರ ವಿರುದ್ಧ ಯುದ್ಧ ನಡೆಸಲು ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರಿ ಜಿಯಾ ಉಲ್ ಹಕ್‌ರನ್ನು ಬೆಂಬಲಿಸಿದಂತೆಯೇ ಅಮೆರಿಕವು, (ಆಪರೇಷನ್ ಸೈಕ್ಲೋನ್) ‘ಜಿಹಾದ್’ ನಡೆಸುವವರಿಗಾಗಿ ಇಡೀ ಮಧ್ಯಪ್ರಾಚ್ಯದಲ್ಲಿ ತನ್ನ ಏಜೆಂಟರನ್ನು ಕಳಿಸಿ ಹುಡುಕಿಸಿತು. ಆಗ ಅವರಿಗೆ ಸಿಕ್ಕಿದ್ದೇ ಸೌದಿ ಅರೇಬಿಯಾದ ಶ್ರೀಮಂತ ಒಸಾಮಾ ಬಿನ್ ಲಾಡೆನ್. ಅದಕ್ಕೂ ಮುಂಚೆ ಮುಸ್ಲಿಮರಲ್ಲಿ ಮೂಲಭೂತವಾದಿಗಳಿರಲಿಲ್ಲವೆಂದಲ್ಲ,



ಅಮೆರಿಕದ ಕಟ್ಟಾ ನಿಷ್ಠ ದೇಶ ಸೌದಿ ಅರೇಬಿಯಾದ ಆಡಳಿತವು ಆಗಲೂ ಮೂಲಭೂತವಾದಿಯಾಗಿತ್ತು. ಆದರೆ ಮುಸ್ಲಿಂ ರಾಷ್ಟ್ರಗಳಲ್ಲಿ ಉದಾರವಾದೀ ಮನೋಭಾವವುಳ್ಳ ದೇಶಗಳು, ಸಂಘಟನೆಗಳು ಮತ್ತು ಆಡಳಿತಗಳೂ ಸಾಕಷ್ಟಿದ್ದವು. ಆದರೆ, ಅಲ್ಲಿಂದ ಮುಂದಕ್ಕೆ ಇವರ ಪ್ರಭಾವ ತಗ್ಗುತ್ತಾ ಹೋಯಿತು. ಅಮೆರಿಕದ ನೇರ ಕುಮ್ಮಕ್ಕಿನೊಂದಿಗೆ ಆಫ್ಘಾನಿಸ್ತಾನದಲ್ಲಿ ನಡೆದ ಜಿಹಾದಿ ಯುದ್ಧದಲ್ಲಿ ಲಾಡೆನ್ ಮತ್ತು ತಾಲಿಬಾನ್‌ಗಳು ವಿಜಯಿಯಾದರು. 1989ರಲ್ಲಿ ಸೋವಿಯತ್ ಸೈನ್ಯ ಹಿಂದೆಸರಿಯಿತು. ಆಗ ಈ ಮಾಜಿ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ತಮ್ಮಲ್ಲಿ ಅಧಿಕಾರಕ್ಕಾಗಿ ಆಂತರಿಕ ಯುದ್ಧ ನಡೆಸಿದರು. ಆ ಯುದ್ಧದಲ್ಲಿ ತಾಲಿಬಾನ್ ಮೇಲುಗೈ ಸಾಧಿಸಿತು. ಆ ನಂತರವೂ ಅಮೆರಿಕ ಮತ್ತು ಲಾಡೆನ್‌ನ ಈ ಮೈತ್ರಿ ಮುಂದುವರೆಯಿತು. ಇಂತಹದೊಂದು ಯುದ್ಧ ನಡೆಯುವ ಸಂದರ್ಭದಲ್ಲಿ ಅಮೆರಿಕದ ಭಾಗೀದಾರಿಕೆ ಕದ್ದುಮುಚ್ಚಿ ನಡೆಯುತ್ತಿರಲಿಲ್ಲ, ಅಮೆರಿಕದ ಅಧ್ಯಕ್ಷ ರೇಗನ್ ‘ಕೈನಲ್ಲಿ ಹಿಡಿಯುವ ಸರಳ ಆಯುಧಗಳಿಂದ ಆಧುನಿಕ ಯುದ್ಧೋಪಕರಣಗಳನ್ನು ಎದುರಿಸುವ ಆಫ್ಘನ್ ಸ್ವಾತಂತ್ರ್ಯ ಹೋರಾಟಗಾರರ ಕದನವನ್ನು ನೋಡುವುದು, ಎಲ್ಲಾ ಸ್ವಾತಂತ್ರ್ಯ ಪ್ರೇಮಿಗಳಿಗೆ ಸ್ಫೂರ್ತಿ’ ಎಂದು ಬಹಿರಂಗವಾಗಿಯೇ ಘೋಷಿಸಿದ್ದ.

ವಾಸ್ತವದಲ್ಲಿ ವಿವಿಧ ಮುಸ್ಲಿಂ ರಾಷ್ಟ್ರಗಳಿಂದ ನೇಮಕಗೊಂಡು ಬಂದಿದ್ದ ಈ ‘ಹೋರಾಟಗಾರ’ರಿಗೂ ಅಮೆರಿಕ ಆಧುನಿಕ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿತ್ತು. ಈ ರೀತಿ ನೇಮಕಗೊಳ್ಳುವವರಿಗೆ ನೀಡಲಾದ ಕಾರಣವೇನೆಂದರೆ, ಸದರಿ ಯುದ್ಧವು ‘ದೇವರಿಲ್ಲದ ಕಮ್ಯುನಿಸಂ’ನ ವಿರುದ್ಧ ನಡೆದ ಮುಸ್ಲಿಂ ಯುದ್ಧವಾಗಿತ್ತು. ಇದರ ಹುಟ್ಟಿನಲ್ಲಿ ಅಮೆರಿಕದ ನೇರಾನೇರ ಪಾತ್ರವಿತ್ತು. ತಾನು ನಡೆಸುತ್ತಿರುವ ನೇರ ಅಥವಾ ಪರೋಕ್ಷ ಯುದ್ಧದಲ್ಲಿ ಎದುರಿಗಿರುವ ಇದ್ದುದರಲ್ಲಿ ಪ್ರಗತಿಪರವಾದ ಶಕ್ತಿಯನ್ನು ಎದುರಿಸಲು ಸಾಧ್ಯವಾಗದಾಗ ತನ್ನ ಅನುಕೂಲಕ್ಕಾಗಿ ಒಂದು ಪ್ರತಿಗಾಮಿ ಶಕ್ತಿಯನ್ನು ಬೆಳೆಸುವುದನ್ನು ಇನ್ನೂ ಹಲವರು ಮಾಡಿದ್ದಾರೆ.

ಇಂದಿನ ಹಮಾಸ್‌ಅನ್ನು ಸ್ವತಃ ಇಸ್ರೇಲ್ ಬೆಳೆಸಿತು. ಸಮಾನತೆಯನ್ನೂ, ಮತಧರ್ಮ ನಿರಪೇಕ್ಷತೆಯನ್ನೂ ಪ್ರತಿಪಾದಿಸುತ್ತಿದ್ದ ಮತ್ತು ಜನಪ್ರಿಯವಾಗಿದ್ದ ಪ್ಯಾಲೇಸ್ಟೇನ್ ವಿಮೋಚನಾ ಸಂಘಟನೆಯನ್ನು ಮಟ್ಟ ಹಾಕುವುದಕ್ಕೆ. ಅದೇ ರೀತಿ, ಮತಧರ್ಮ ನಿರಪೇಕ್ಷತೆಯನ್ನೂ, ಪ್ರಜಾತಂತ್ರವನ್ನೂ ಪ್ರತಿಪಾದಿಸುತ್ತಿದ್ದ ಮತ್ತು ಪಾಕಿಸ್ತಾನದ ವಶದಲ್ಲಿದ್ದ ಕಾಶ್ಮೀರದಲ್ಲೂ ಸಂಘಟನೆ ಹೊಂದಿದ್ದ ಜೆಕೆಎಲ್‌ಎಫ್‌ಅನ್ನು ಮಟ್ಟ ಹಾಕುವುದಕ್ಕೆ, ಭಾರತ ಸರ್ಕಾರವೂ ಮೂಲಭೂತವಾದಿ ಇಸ್ಲಾಮಿಕ್ ಶಕ್ತಿಗಳು ಬೆಳೆಯಲು ಅವಕಾಶ ಮಾಡಿಕೊಟ್ಟಿತು.

ಇರಾನ್ ಮತ್ತು ಇರಾಕ್ ಯುದ್ಧದಲ್ಲೂ ಸಾಪೇಕ್ಷವಾಗಿ ಪ್ರಗತಿಪರವಾಗಿದ್ದ ಇರಾನ್‌ನ ವಿರುದ್ಧ ಸದ್ದಾಂ ಹುಸೇನ್‌ಗೆ ಎಲ್ಲಾ ಬಗೆಯ ನೆರವನ್ನು ಅಮೆರಿಕವು ನೀಡಿತು. ಆ ನಂತರ ತನ್ನ ವಿರುದ್ಧವೇ ತಿರುಗಿ ಬಿದ್ದ ಇರಾಕ್‌ಅನ್ನು ಬಗ್ಗುಬಡಿಯಲು ರಾಸಾಯನಿಕ ಅಸ್ತ್ರಗಳನ್ನು ಸದ್ದಾಂ ಇಟ್ಟುಕೊಂಡಿದ್ದ ಎಂಬ ನೆಪವನ್ನು ಬಳಸಲಾಯಿತು. ಈ ರಾಸಾಯನಿಕ ಅಸ್ತ್ರಗಳನ್ನು ಅಮೆರಿಕಕ್ಕೆ ತಿಳಿದಿದ್ದಂತೆಯೇ ಬ್ರಿಟನ್‌ನ ಕಾರ್ಪೋರೇಟ್ ಕಂಪೆನಿಗಳು ಸದ್ದಾಂಗೆ ಮಾರಿದ್ದವು. ಅದನ್ನು ಇರಾನ್‌ನ ಜನತೆಯ ಮೇಲೂ, ಖುರ್ದ್ ಹೋರಾಟಗಾರರ ಮೇಲೂ ಸದ್ದಾಂ ಬಳಸುವವರೆಗೆ ಅಮೆರಿಕಕ್ಕೆ ಯಾವ ತಕರಾರೂ ಇರಲಿಲ್ಲ.

ಇವೆಲ್ಲದರ ಕುರಿತು ಬೆನ್ ನಾರ್ಟನ್ ಎಂಬ ಬರಹಗಾರ ಬರೆದಿರುವ ಬರಹದ ಕೆಲವು ಅಂಶಗಳನ್ನು ಇಲ್ಲಿ ನಿಮ್ಮ ಮುಂದಿಟ್ಟಿದ್ದೇನೆ. ಇಸ್ಲಾಂ ಎಂದರೆ ಮೂಲಭೂತವಾದವೆಂತಲೂ, ಅದರ ವಿರುದ್ಧದ ಹೋರಾಟದಲ್ಲಿ ಅಮೆರಿಕ ಮತ್ತು ಯುರೋಪ್ ಬಹಳ ತೊಂದರೆ ತೆಗೆದುಕೊಳ್ಳುತ್ತಿವೆಯೆಂತಲೂ ಭಾವಿಸುವವರಿಗೆ ಷಾಕ್ ಆಗುವ ಹಲವು ವಿವರಗಳನ್ನು ಬೆನ್ ಬರೆದಿದ್ದಾರೆ. ‘ಇಂದಿಗೂ ಮಿಲಿಟೆಂಟ್ ಸುನ್ನಿ ಇಸ್ಲಾಮಿಸಂಅನ್ನು ಪ್ರಬಲವಾಗಿ ಪ್ರತಿಪಾದಿಸುವವರ ಕೇಂದ್ರ, ಸೌದಿ ಅರೇಬಿಯಾವೇ ಆಗಿದೆ. ಆದರೆ, ಒಬಾಮಾ ಆಡಳಿತಕ್ಕೂ ಅದು ಪರಮಾಪ್ತ ದೇಶವಾಗಿ ಮುಂದು... ಐದು ವರ್ಷಗಳಲ್ಲಿ ಅಮೆರಿಕವು ಸೌದಿಗೆ 1... ಡಾಲರ್‌ಗಳಷ್ಟು ಯುದ್ಧ ಸಾಮಗ್ರಿಗಳನ್ನು... ಮಾಡಿದೆ. ಮೊನ್ನೆಯ ಪ್ಯಾರಿಸ್ ದಾಳಿಯ... ಅಮೆರಿಕ 1.3 ಬಿಲಿಯನ್ ಡಾಲರ್... ಬಾಂಬ್‌ಗಳನ್ನು ಸರಬರಾಜು ಮಾಡಿದೆ. ... ಮೇಲೆ ದಾಳಿ ನಡೆಸಲು ಹಾತೊರೆಯು... ಅರೇಬಿಯಾಕ್ಕೆ ಅನುಕೂಲ ಮಾಡಿಕೊಡಲಿದೆ... ಈಗಾಗಲೇ ನಡೆಯುತ್ತಿರುವ ಮಾರಣಹೋ... ಮತ್ತಷ್ಟು ಹೆಚ್ಚಿಸಲಿದೆ. ಆ ಮೂಲಕ ಅಲ್ಲಿಯ... ಅಥವಾ ಐಎಸ್‌ಐಎಸ್‌ನಂತಹ ಶಕ್ತಿಗಳು... ಕಾರಣವಾಗುತ್ತದೆ.’

ಇರಾಕ್‌ನಂತಹ ... ರಾಷ್ಟ್ರದಲ್ಲಿದ್ದ ಆಡಳಿತವನ್ನು ... ಅಮೆರಿಕವು ಒಂದು ... ಸೃಷ್ಟಿಸಿತು. ಸುಮಾರು 1... ಸಾವಿಗೆ ಆ ದಾಳಿ ಕಾರಣ... ವಿರುದ್ಧದ ‘ಸ್ಥಳೀಯರ... ಅಮೆರಿಕವೇ ಶಸ್ತ್ರಾಸ್ತ್ರ ನೀಡಿ... ಸದ್ದಾಂನ ವಿರೋಧಿಗ... ಹೋರಾಟಗಾರರು, ಮು... ಗಳು ಎಲ್ಲರೂ ಇದ್ದರು... ಉಂಟಾದ ಅತಿರೇಕದ ... ಐಎಸ್‌ಐಎಸ್‌ನ ಹು... ವಾಯಿತು. ಇದನ್ನು ... ಮಿಲಿಟರಿ ಮುಖ್ಯಸ್ಥರೇ ... ಅದರ ಸೆಂಟ್ರಲ್ ಕಮ್ಯಾಂಡ್‌ನ ಇಂಟೆಲಿ... ಮುಖ್ಯಸ್ಥ ಲೆ.ಜ.ಮೈಕೇಲ್ ಟಿ. ಫ್ಲಿನ್ ಹೇಳ... ಮೇಲೆ ನಡೆಸಿದ ದಾಳಿಯು ಸಲಫಿ ಉಗ್ರ... ಅಲ್ ಖೈದಾಗಳನ್ನು ಬಲಪಡಿಸಿತು. ನ... ಮೇಲೆ ತುಪ್ಪ ಸುರಿದೆವು’.

ಸರ್ಕಾರದ ಮೇಲೆ ಕಣ್ಣಿಟ್ಟಿರುವ ‘ಜ್ಯುಡಿ... ನ್ಯಾಯಾಲಯದ ಮುಖಾಂತರ ಪಡೆದ... ಅಮೆರಿಕದ ಮಿಲಿಟರಿ ಮತ್ತು ವಿದೇಶಾಂ... ದಾಖಲಾತಿಗಳನ್ನು ಇತ್ತೀಚೆಗೆ ಬಹಿರಂಗಗೊ... ಸ್ಪಷ್ಟವಾಗಿ ನಮೂದಾಗಿರುವಂತೆ ‘ಸಿರಿಯ... ಭಾಗದಲ್ಲಿ ನೆಲೆಗೊಳ್ಳುತ್ತಿರುವ ಐಎಸ್‌ಐಎಸ್... ನಮಗೆ ಬಹಳ ಮುಖ್ಯವಾಗಿದೆ ಮತ್ತು ... ಬೆಂಬಲಿಸಬೇಕು. ಆ ಮೂಲಕ ಸಿರಿಯಾದ... ಅಸ್ಸಾದ್‌ರನ್ನು ಕೆಳಗಿಳಿಸಬಹುದು’. ಇನ್ನೂ ... 2012ರಲ್ಲಿ ಜೋರ್ಡಾನ್‌ನಲ್ಲಿ ಇದೇ ... ಉಗ್ರರಿಗೆ ಅಮೆರಿಕವೇ ತರಬೇತಿಯನ್ನೂ ... ಬಗ್ಗೆ ಸಂದೇಹಕ್ಕೆ ಎಡೆಯಿಲ್ಲದ ಸಾಕ್ಷ್ಯಗಳಿವೆ... ಸಮರ್ಥನೆ ಏನೆಂದರೆ, ಅಸ್ಸಾದ್‌ನ ಆಡ... ಇರುವ ಅಲ್ಲಿನ ಶಕ್ತಿಗಳು ಇದನ್ನು ಬಯಸಿ... ಈ ಸಂದರ್ಭದಲ್ಲಿ ಕೆಲವು ಅಮೆರಿ... ಅಧಿಕಾರಿಗಳು ಮುಂದೆ ಇದು ಆ ಭಾಗ... -2ರ ಉಗಮಕ್ಕೆ ಕಾರಣವಾಗಬಹು... ಎಚ್ಚರಿಸಿದ್ದರು.

ಈ ಹೊತ್ತಿಗೆ ಲಿಬ್ಯಾದಲ್ಲಿ ಆಳ್ವಿ... ಗಡ್ಡಾಫಿಯನ್ನೂ ಅಮೆರಿಕ ಭಾಗೀದಾ... ಕೆಳಗಿಳಿಸಿಯಾಗಿತ್ತು. ಅಲ್ಲಿಂದ ಆಗಸ್ಟ್ 20... ಪ್ರಮಾಣದ ಶಸ್ತ್ರಾಸ್ತ್ರಗಳು ಐಎಸ್‌ಐಎಸ್‌ಗೆ ... ಅಮೆರಿಕಕ್ಕೆ ಗೊತ್ತಿತ್ತು. ಈ ಕುರಿತ ಒಂ... ಅಕ್ಟೋಬರ್ 2012ರಂದು ಅಮೆರಿ... ವಲಯದಲ್ಲಿ ಓಡಾಡಿದ್ದು, ಈಗ ಬಹಿರಂಗ... ಮೊದಲು ಇರಾಕ್‌ನಲ್ಲಿ, ನಂತರ ಲಿ... ಯೆಮೆನ್‌ನಲ್ಲಿ ಸೃಷ್ಟಿಯಾಗುತ್ತಿರುವ ... ಉಗ್ರಗಾಮಿಗಳು ತಮ್ಮಂತೆ ತಾವೇ ಬ... ಎಂಬುದು ಮಾತ್ರ ನಿಜವಲ್ಲ. ಅದನ... ಅಮೆರಿಕದ ನೇರ ಪಾತ್ರವಿತ್ತು. ... ಐಎಸ್‌ಐಎಸ್‌ನ ಸೃಷ್ಟಿಯನ್ನು ... ವರ್ಷಗಳಲ್ಲಿ ವಿವಿಧ ಇಸ... ಸೃಷ್ಟಿಯಂತೆಯೇ - ಸ್ವತ... ಮಾಡಿದೆ.

ಹೀಗಿದ್ದರೂ ನಾವು ಐ... ಮನುಕುಲದ ಮೇಲೆ ... ದಾಳಿಗಾಗಿ ಖಂಡಿಸಲೇಬೇ... ಹಿಂಜರಿಯಬಾರದು. ಆದ... ಅಮೆರಿಕ ಸರ್ಕಾರ ... ಮನುಕುಲದ ಅಪಾಯ ... ಬದಲಿಸಿಕೊಳ್ಳುವುದಿಲ್ಲವೋ ... ಉಗ್ರವಾದವನ್ನು ತ... ಅಸಾಧ್ಯವಾಗಿದೆ.


10 / INTERNATIONAL


THE INDEPENDENT

Anti-Soviet warrior puts his army on the road to peace

ಸಹಿಷ್ಣುತೆ ಹೆಚ್ಚಾಗಿದೆ ಎಂದು ತೋರಿದ ಸಂಘಿಗಳು

ಚೆಗೆ ಬಾಲಿವುಡ್ ನಟ ಶಾರುಖ್ ಖಾನ್
ಅಸಹಿಷ್ಣುತೆ ಹೆಚ್ಚಾಗುತ್ತಿದೆ ಎಂಬ
ವ್ಯಕ್ತಪಡಿಸಿದಾಗ ಸಂಘಿಗಳು ಆತನ
ಬಿದ್ದಿದ್ದರು. ಮೊನ್ನೆ ಮತ್ತೋರ್ವ ನಟ
ಖಾನ್ ಕೂಡ ಅಂತಹದ್ದೇ ಅಭಿಪ್ರಾಯವನ್ನು
ಮತ್ತೊಮ್ಮೆ ಸಂಘಿಗಳು ಆತನ
ಕೆಂಡಕಾರುತ್ತಿದ್ದಾರೆ. ಅವರಿಬ್ಬರೂ ಈ
ಹಲವಾರು ಬಾರಿ ಭಾರತದ ಬಗ್ಗೆ ಹೆಮ್ಮೆ
ಕಾಳಜಿಯನ್ನು ವ್ಯಕ್ತಪಡಿಸಿದ್ದರೂ
ರಿಬ್ಬರನ್ನು ದೇಶದ್ರೋಹಿಗಳೆಂದು ಚಿಡ್ಡಿ
ಖಂಡಿಸುತ್ತಿದ್ದಾರೆ.

ಮಟ್ಟಕ್ಕೆಂದರೆ ಕನ್ನಡದ 'ರಿಯಲ್ ಸ್ಟಾರ್'
ಕೂಡ ಇವತ್ತು "ಆಮಿರ್ ಖಾನ್ ಬಗೆಗಿದ್ದ
ಯೆಲ್ಲ ಈಗ ಖಾಲಿಯಾಗಿದೆ. ದೇಶದ
ಆತಂಕ ಇದ್ದರೆ ಇಲ್ಲೇ ಇದ್ದು ಅದನ್ನು
ಕೆ ಹೊರತು ದೇಶ ಬಿಟ್ಟು
ಮು ಸರಿಯಲ್ಲ" ಎಂದು ಟ್ವೀಟ್
ಪಾಪ ಉಪೇಂದ್ರರಿಗೆ ಎಲ್ಲಿಯೂ



ಖಾನ್ ಭಾರತದಲ್ಲಿ ಹೆಚ್ಚುತ್ತಿರುವ
ಯಿಂದಾಗಿ ತಾನು ದೇಶ
ತ್ತೇನೆಂದು ಹೇಳಿಲ್ಲ ಎಂಬುದೇ
ನ್ನು ಕೆಲವು ಬಿಜೆಪಿ ನಾಯಕರು "ಆಮಿರ್
ಲ್ಲಿರುವುದು ಅಸಾಧ್ಯವಾಗಿದ್ದರೆ ಆತ
ಹೋಗಲಿ" ಎಂದು ಹೇಳುವ ಮೂಲಕ
ನ ತಿಕ್ಕಲು ಬುದ್ಧಿಯನ್ನು ಪ್ರದರ್ಶಿಸಿದ್ದಾರೆ.

ನಮ್ಮ ಟಿವಿ ನ್ಯೂಸ್ ಚಾನಲ್‌ಗಳ
ರದಿರುವುದೇ ವಾಸಿ. ಯಾರು ಏನನ್ನೇ
ಅವರ ಪೂರ್ಣ ಮಾತನ್ನು ಲೆಕ್ಕಕ್ಕೆ
ದೆ ತಮಗೆ ಬೇಕಾದ ಚುಟುಕನ್ನು ಮಾತ್ರ
ಡು ಅದನ್ನೇ ಮತ್ತೆಮತ್ತೆ ಸುರುಳಿಯಂತೆ
ದೀ ವಿಷಯವನ್ನೇ ತಿರುಚುತ್ತವೆ.

ಗಿ ಆಮಿರ್ ಖಾನ್ ಹೇಳಿದ್ದೇನು?
ರಾಮನಾಥ್ ಗೋಯೆಂಕಾ
ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ
ದ್ದರ ಪೂರ್ಣಪಾಠ ಇಲ್ಲಿದೆ ನೋಡಿ:
ಕ ಜನರಿಗೆ ತಮ್ಮ ಅಭಿಪ್ರಾಯವನ್ನು
ದು ಮುಖ್ಯವಾಗಿರುತ್ತದೆ. ಇತ್ತೀಚೆಗೆ
ಗಳಲ್ಲಿ ಕ್ರಿಯಾಶೀಲರಾಗಿರುವ ಜನರಿಗೆ
ರು, ವಿಜ್ಞಾನಿಗಳು, ಇತರರಿಗೆ - ತಮ್ಮ
ವ್ಯಕ್ತಪಡಿಸಬೇಕೆಂಬ ಒತ್ತಡ ಹೆಚ್ಚಾಗಿದೆ
ಕ್ರಿಯಾಶೀಲರಾಗಿರುವವರು ತಮ್ಮ
ನ್ನು ಮತ್ತು ನಿರಾಶೆಯನ್ನು ವ್ಯಕ್ತಪಡಿಸಲು
ವಾಪಸ್ ಮಾಡುವ ಮಾರ್ಗವನ್ನು
ಹಾಗೆ ಮಾಡುವ ಮೂಲಕ ಅವರು
ಗಳನ್ನು ವ್ಯಕ್ತಪಡಿಸಿದ್ದಾರೆ ಅನ್ನಿಸುತ್ತದೆ.
ರೋಧ ಅಹಿಂಸಾತ್ಮಕವಾಗಿದ್ದರೆ ಅದಕ್ಕೆ
ದ್ದೇ ಇರುತ್ತದೆ. ಎಲ್ಲರಿಗೂ
ದೆಯದೆ, ಹಿಂಸೆಯನ್ನು ಅನುಸರಿಸದೆ,
ಕೊಳ್ಳದೆ ತಮ್ಮ ವಿರೋಧವನ್ನು
, ಇದ್ದೇ ಇದೆ.
ಇದು ಉತ್ತಮ ಮಾರ್ಗವಾಗಿದೆ.

ಕ್ರಿಯಾಶೀಲರಿಗೆ ತಮ್ಮ ಸುತ್ತಲೂ ಹೆಚ್ಚುತ್ತಿರುವ ಅಸಹಿಷ್ಣುತೆ, ಅಭದ್ರತೆಯ ವಿರುದ್ಧ ತಮ್ಮ ಅಸಮಾಧಾನವನ್ನು ತೋರಲು, ಸಾಮಾಜಿಕ ಸ್ಥಿತಿಗತಿ ಸರಿಯಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಲು ಅವರು ಈ ಮಾರ್ಗ ಅನುಸರಿಸಿದರು ಅನ್ನಿಸುತ್ತೆ.

ಈ ದೇಶದಲ್ಲಿ ಏನೇನಾಗುತ್ತಿದೆ ಎಂದು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ, ಟಿವಿಯಲ್ಲಿ ನೋಡುತ್ತಿರುತ್ತೇವೆ. ನಾನು ಓರ್ವ ವ್ಯಕ್ತಿಯಾಗಿ, ಈ ದೇಶದ ಪ್ರಜೆಯಾಗಿ ನನಗೂ ಆತಂಕ ಆಗಿದೆ. ಇಲ್ಲಿ ನಡೆದಿರುವ ಹಲವಾರು ಪ್ರಕರಣಗಳಿಂದ ನನಗೆ ಆತಂಕ ಆಗಿಲ್ಲ ಎಂದು ನಾನು ಹೇಳಲಾರೆ. ಯಾವುದೇ ಸಮಾಜಕ್ಕೆ ಭದ್ರತೆ ಮುಖ್ಯವಾಗಿರುತ್ತದೆ. ಭಯೋತ್ಪಾದಕ ಪ್ರಕರಣಗಳು ವಿವಿಧ ಕಾರಣಗಳಿಗಾಗಿ ಜಗತ್ತಿನ ವಿವಿಧ ಕಡೆಗಳಲ್ಲಿ ಸಂಭವಿಸುತ್ತಿರುತ್ತವೆ. ಆದರೆ ನಮಗೆ ಭಾರತೀಯರಾಗಿ ಒಂದೆರಡು ಅಂಶಗಳು ಮುಖ್ಯ ಅನಿಸುತ್ತವೆ. ಮೊದಲನೆಯದಾಗಿ, ತಮಗೆ ನ್ಯಾಯ ಸಿಗುತ್ತದೆ ಎಂಬ ಭರವಸೆ. ಉದಾಹರಣೆಗೆ ಯಾರೊಬ್ಬರು ಅಪರಾಧ ಎಸಗಿದ್ದರೆ ಅವರಿಗೆ ಸೂಕ್ತ ಶಿಕ್ಷೆ ಆಗುತ್ತದೆ ಎಂಬ ಭರವಸೆ ಸಾಮಾನ್ಯ ಜನರಿಗೆ ಬೇಕಿರುತ್ತದೆ. ಎರಡನೆಯದಾಗಿ, ಯಾರನ್ನು ನಾವು ನಮ್ಮ ಜನಪ್ರತಿನಿಧಿಯಾಗಿ, ನಮ್ಮ ಹಿತವನ್ನು ಕಾಪಾಡಲು ಐದು ವರ್ಷದ ಅವಧಿಗೆ ಆರಿಸಿರುತ್ತೇವೋ - ಅವರು ರಾಜ್ಯಮಟ್ಟದಲ್ಲೋ ಅಥವಾ ರಾಷ್ಟ್ರಮಟ್ಟದಲ್ಲೋ ಜನಪ್ರತಿನಿಧಿಗಳಾಗಿದ್ದರೂ- ಜನರು ಕಾನೂನನ್ನು ತಮ್ಮ ಕೈಗೆತ್ತಿಕೊಂಡರೆ ಜನಪ್ರತಿನಿಧಿಗಳು ಗಟ್ಟಿಯಾಗಿ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆಂದೂ, ನ್ಯಾಯ ಪ್ರಕ್ರಿಯೆಯನ್ನು ತೀವ್ರಗೊಳಿಸುತ್ತಾರೆಂದೂ ಜನ ನಿರೀಕ್ಷಿಸುತ್ತಾರೆ ಮತ್ತು ಹಾಗೆ ಆದಾಗ ಜನರಲ್ಲಿ ಭದ್ರತೆಯ ಭಾವ ನೆಲೆಗೊಳ್ಳುತ್ತದೆ. ಆದರೆ ಹಾಗೆ ಆಗದಿದ್ದಾಗ ಜನರಲ್ಲಿ ಅಭದ್ರತೆ ಹೆಚ್ಚಾಗುತ್ತದೆ.

ಯಾವ ಪಕ್ಷ ಅಧಿಕಾರದಲ್ಲಿದೆ ಎಂಬುದು ಮುಖ್ಯವಲ್ಲ, ಯಾಕೆಂದರೆ ಇಂತಹ ಕೃತ್ಯಗಳು ಬಹಳ ದಶಕಗಳಿಂದ ನಡೆದುಕೊಂಡು ಬಂದಿದೆ. ಉದಾಹರಣೆಗೆ ನಾವು ಟಿವಿಗಳನ್ನು ನೋಡುತ್ತಿರುತ್ತೇವೆ: ಇತ್ತೀಚೆಗೆ ನಡೆದಿರುವ ಹಲವು ಕೃತ್ಯಗಳಿಗೆ ಸಂಬಂಧಿಸಿದಂತೆ ಈಗ ಅಧಿಕಾರದಲ್ಲಿರುವ ಬಿಜೆಪಿ ಪಕ್ಷವನ್ನು ಜನ ಆರೋಪಿ ಸ್ಥಾನದಲ್ಲಿ ನಿಲ್ಲಿಸಿದಾಗ, ಅವರು "1984ರ ಬಗ್ಗೆ ಏನು ಹೇಳುತ್ತೀರ?" ಎಂದು ಪ್ರಶ್ನಿಸುತ್ತಾರೆ. ಆದರೆ ಆಗ ನಡೆದ ತಪ್ಪನ್ನು ಹಿಡಿದುಕೊಂಡು ಈಗ ಸಂಭವಿಸುತ್ತಿರುವ ತಪ್ಪುಗಳನ್ನು ಸಮರ್ಥಿಸಿಕೊಳ್ಳುವುದು ಸರಿಯಲ್ಲ, 1984ರಲ್ಲಿ ನಡೆದದ್ದೂ ದುರ್ಘಟನೆಯೆ. ಅದಾದಮೇಲೆ ನಡೆದಿರುವುದೆಲ್ಲವೂ ದುರ್ಘಟನೆಗಳೇ. ಯಾವ ಕಾಲದಲ್ಲೇ ಆಗಲಿ, ಗಲಭೆಗಳಾಗಿ ಒಬ್ಬ ಅಮಾಯಕ ವ್ಯಕ್ತಿಯೋ ಅಥವಾ ಹಲವಾರು ಅಮಾಯಕರ ಕೊಲೆಯೋ, ಯಾವುದೇ ಆದರೂ ಅದು ದುರದೃಷ್ಟವೇ. ಅಂತಹ ಸಮಯಗಳಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಜನನಾಯಕರು ಗಟ್ಟಿಯಾಗಿ ಹೇಳಿಕೆಗಳನ್ನು ಇಡಲಿ, ಗಟ್ಟಿಯಾಗಿ ಇಂಥವುಗಳನ್ನು ವಿರೋಧಿಸಲಿ ಎಂದು ನಾವು ಎದುರುನೋಡುತ್ತೇವೆ.

ಕಳೆದ ಆರು-ಎಂಟು ತಿಂಗಳಲ್ಲಿ ಹತಾಶ ಭಾವನೆ ಹೆಚ್ಚಾಗುತ್ತಿದೆ ಎಂದೆನಿಸುತ್ತದೆ. ಕಿರಣ್ ಮತ್ತು ನಾನು ನಮ್ಮ ಜೀವಮಾನವಿಡೀ ಭಾರತದಲ್ಲೇ ವಾಸಿಸಿರುವವರು. ಆದರೆ ನಾನು ಮನೆಯಲ್ಲಿ ಕಿರಣ್‌ಳ ಜೊತೆ ಮಾತನಾಡುತ್ತಿದ್ದಾಗ ಆಕೆ 'ನಾವು ಈ ದೇಶ ಬಿಟ್ಟುಹೋಗೋಣವೇ?' ಎಂದು ಕೇಳಿದಳು. ನನಗೆ ಆಕೆ ಹಾಗೆ ಹೇಳಿದ್ದೇ ದೊಡ್ಡ ಆಪತ್ತಿನ ಮಾತು. ಆಕೆ ತನ್ನ ಮಗು ಬಗ್ಗೆ ಆತಂಕಗೊಂಡಿದ್ದಾಳೆ; ತನ್ನ ಸುತ್ತಲಿನ ವಾತಾವರಣವನ್ನು ಕಂಡು ಆತಂಕಗೊಂಡಿದ್ದಾಳೆ. ಆಕೆ ದಿನಪತ್ರಿಕೆಯನ್ನು ತೆಗೆದು ಓದುವುದಕ್ಕೆ ಭಯಪಡುತ್ತಾಳೆ. ಅದರಿಂದಲೇ ಎಲ್ಲೆಡೆ ಅಶಾಂತಿ, ಹತಾಶೆ ಮತ್ತು ಭೀತಿ ಹೆಚ್ಚಾಗುತ್ತಿದೆ ಎಂದೂ ಮತ್ತು ಇದೆಲ್ಲ ಯಾಕೆ ಆಗುತ್ತಿದೆ ಎಂದೂ ನಿರಾಶೆಯಾಗುತ್ತದೆ.


ನನ್ನ ಪ್ರಕಾರ ಯಾವುದೇ ಭಯೋತ್ಪಾದಕ ಕೃತ್ಯಕ್ಕೂ ಯಾವುದೇ ಧರ್ಮಕ್ಕೂ ಸಂಬಂಧವಿಲ್ಲ. ಯಾವುದೇ ವ್ಯಕ್ತಿ ಇಸ್ಲಾಮ್ ಹೆಸರಲ್ಲಿ ಭಯೋತ್ಪಾದನೆಯಲ್ಲಿ ತೊಡಗಿದ್ದರೆ ಆತ ಇಸ್ಲಾಮ್ ಧರ್ಮನನ್ನು ಅನುಸರಿಸುತ್ತಿಲ್ಲ ಎಂಬುದು ನನ್ನ ಅನಿಸಿಕೆ. ಹಾಗೆಯೇ ಯಾರೋ ಹಿಂದೂ ಓರ್ವ ಧರ್ಮದ ಹೆಸರಲ್ಲಿ ಅಹಿಂಸೆಯಲ್ಲಿ ತೊಡಗಿದ್ದರೂ ಆತ ಹಿಂದೂ ಧರ್ಮವನ್ನು ಪಾಲಿಸುತ್ತಿಲ್ಲ ಎಂಬುದು ನನ್ನ ಅಭಿಪ್ರಾಯ. ಯಾವ ಧರ್ಮವೂ ಅಮಾಯಕರ ಕೊಲೆಯನ್ನು ಸಮರ್ಥಿಸುವುದಿಲ್ಲ. ಯಾವುದೇ ಭಯೋತ್ಪಾದಕನನ್ನು ನಾವು ಕ್ರಿಶ್ಚಿಯನ್ ಭಯೋತ್ಪಾದಕ, ಮುಸ್ಲಿಮ್ ಭಯೋತ್ಪಾದಕ, ಹಿಂದೂ ಭಯೋತ್ಪಾದಕ ಎಂದು ನೋಡದೆ ಆತನನ್ನು ಬರೀ ಭಯೋತ್ಪಾದಕ ಎಂದು ಮಾತ್ರ ನೋಡಬೇಕು. ಯಾಕೆಂದರೆ ಅವರು ಯಾರೂ ತಮ್ಮ ಧರ್ಮದ ಆಶಯವನ್ನು ಪಾಲಿಸುತ್ತಿಲ್ಲ.

ಮುಸ್ಲಿಮ್ ಸಮುದಾಯದಲ್ಲಿ ಬಹುಸಂಖ್ಯಾತರಾಗಿರುವ ಸೌಮ್ಯವಾದಿಗಳು ಈಗ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಕಳವಳಗೊಂಡಿದ್ದಾರೆ, ಗಾಬರಿಗೊಂಡಿದ್ದಾರೆ. ಈಗ ಹಲವಾರು ಮುಸಲ್ಮಾನ ಸಂಘಟನೆಗಳು ಬಹಿರಂಗವಾಗಿಯೇ ಐಎಸ್‌ಐಎಸ್ ವಿರುದ್ಧ ಮಾತನಾಡುತ್ತಿವೆ.

ನನಗೆ ಆಧುನಿಕ ಮುಸಲ್ಮಾನರ ಪರವಾಗಿ ಮಾತನಾಡು ಎಂದರೆ ನನಗೆ ಕಸಿವಿಸಿಯಾಗುತ್ತದೆ. ಯಾಕೆಂದರೆ ಮೊದಲನೆಯದಾಗಿ ನಾನು ಯಾಕೆ ಯಾರ ಪ್ರತಿನಿಧಿಯಾಗಿ ಮಾತನಾಡಬೇಕು? ಎರಡನೆಯದಾಗಿ ನಾನು ಯಾರದೋ ಪ್ರತಿನಿಧಿಯಾಗಿ ಮಾತನಾಡಬೇಕಾದರೆ ನಾನು ಯಾಕೆ ಎಲ್ಲರ ಪ್ರತಿನಿಧಿಯಾಗಿ ಮಾತನಾಡಬಾರದು? ಯಾಕೆ ನಾನು ನಿರ್ದಿಷ್ಟವಾಗಿ ಮುಸ್ಲಿಮ್ ಸಮುದಾಯದ ಪರವಾಗಿ ಮಾತ್ರ ಮಾತನಾಡಬೇಕು? ನಾನು ಒಬ್ಬ ವ್ಯಕ್ತಿಯಾಗಿ ನನ್ನ ದೇಶ ಅಥವಾ ಸಮಾಜವನ್ನು ಪ್ರತಿನಿಧಿಸಿ ಮಾತನಾಡಬೇಕಾದರೆ ನಾನು ಎಲ್ಲರ ಪರವಾಗಿ ಮಾತನಾಡಲು ಇಚ್ಛಿಸುತ್ತೇನೆಯೇ ಹೊರತು ಯಾವುದೇ ಒಂದು ಸಮುದಾಯದ ಪ್ರತಿನಿಧಿಯಾಗಲ್ಲ, ನಾನು ಒಂದು ಮುಸ್ಲಿಮ್ ಕುಟುಂಬದಲ್ಲಿ ಜನಿಸಿದ್ದರೂ ನಾನು ಮಾತನಾಡಿದರೆ ಎಲ್ಲರ ಪರವಾಗಿ ಮಾತನಾಡಲು ಇಚ್ಛಿಸುತ್ತೇನೆ. ಹಲವಾರು ಸಂದರ್ಭಗಳಲ್ಲಿ ಹಲವಾರು ಸೆಲೆಬ್ರಿಟಿಗಳು ಭಯೋತ್ಪಾದನೆ ವಿರುದ್ಧ ದನಿ ಎತ್ತಿದ್ದಾರೆ. ಆದ್ದರಿಂದ ನಾವು ಇಂತಹವುಗಳ ಬಗ್ಗೆ ಮಾತನಾಡುತ್ತಿಲ್ಲ ಎಂದು ನನಗೆ ಅನ್ನಿಸುವುದಿಲ್ಲ.

ಭಯೋತ್ಪಾದನೆಯಲ್ಲಿ ತೊಡಗಿರುವವನೊಬ್ಬ ತನ್ನ ಕೈಯಲ್ಲಿ ಕುರ್‌ಆನ್ ಹಿಡಿದಿದ್ದ ಮಾತ್ರಕ್ಕೆ ಅವನನ್ನು ಇಸ್ಲಾಮ್ ಭಯೋತ್ಪಾದಕ ಎಂದು ಕರೆಯುವುದರ ಬಗ್ಗೆ ನನಗೆ ಸಮ್ಮತಿ ಇಲ್ಲ, ಯಾಕೆಂದರೆ ಆತ ಕುರ್‌ಆನ್ ಅನ್ನು ಹಿಡಿದಿದ್ದರೂ ಸ್ವತಃ ಓರ್ವ ಮುಸಲ್ಮಾನನಾದ ನನಗೆ ಆತ ಇಸ್ಲಾಮ್ ಧರ್ಮಕ್ಕೆ ಅನುಗುಣವಾಗಿ ವರ್ತಿಸಿದ್ದಾನೆ ಎಂದ ಅನ್ನಿಸುವುದಿಲ್ಲ, ಅಮಾಯಕರನ್ನು ಕೊಲ್ಲುವವರು ನನ್ನ ಪ್ರಕಾರ ಮುಸಲ್ಮಾನರಲ್ಲ, ಆತ ತಾನು ಮುಸಲ್ಮಾನ ಎಂದು ಹೇಳಿಕೊಂಡರೂ ಆತ ನಿಜವಾದ ಮುಸಲ್ಮಾನನಲ್ಲ, ಆತ ಒಬ್ಬ ಭಯೋತ್ಪಾದಕ ಎಂದಷ್ಟೇ ನಾವು ಅವನನ್ನು ಗುರುತಿಸಬೇಕು.

ಬರೀ ಐಎಸ್‌ಐಎಸ್ ಕುರಿತು ನನ್ನ ತಕರಾರಿಲ್ಲ,



• ಗೌರಿ ಲಂಕೇಶ್
litorlankesh@gmail.com

ಕಂಡಹಾಗೆ

ನನ್ನ ತಕರಾರಿರುವುದು ಅಂತಹ ಚಿಂತನಾ ಕ್ರಮಗಳ ವಿರುದ್ಧ, ನನಗೆ ಭಯ ಇರುವುದೇ ಅಂತಹ ಚಿಂತನಾ ಕ್ರಮಗಳ ಕುರಿತು. ಇವತ್ತು ಐಎಸ್‌ಐಎಸ್ ಇರಬಹುದು, ನಾಳೆ ಇನ್ನೊಂದು ಸಂಘಟನೆ ಇರಬಹುದು... ಆದ್ದರಿಂದ ಇಂತಹ ಉಗ್ರವಾದಿ ಚಿಂತನಾ ಕ್ರಮದ ಬಗ್ಗೆಯೇ ನನಗೆ ಆತಂಕ ಇರುವುದು. ಯಾಕೆಂದರೆ ಇಂತಹ ಉಗ್ರ ಚಿಂತನಾ ಕ್ರಮ - ಅದು ಎಲ್ಲಿಂದಲೇ ಉದಯಿಸಿರಲಿ, ಯಾವುದೇ ಧರ್ಮದಲ್ಲಾಗಲಿ - ಅದು ಅಪಾಯಕಾರಿ ಮತ್ತು ವಿನಾಶಕಾರಿ."

ಆಮಿರ್ ಖಾನ್ ಹೇಳಿರುವುದರಲ್ಲಿ ತಪ್ಪೇನಿದೆ? ಆತ ವ್ಯಕ್ತಪಡಿಸಿರುವ ಆತಂಕಗಳು ನಮ್ಮೆಲ್ಲರ ಆತಂಕಗಳೂ ಆಗಿವೆ.

ಆದರೆ ಚೆಡ್ಡಿಗಳ ಬುದ್ಧಿ ಎಂತಹದ್ದು ಎಂದರೆ ಮೋದಿ ಭಕ್ತರಲ್ಲಿ ಒಬ್ಬನಾದ ಮತ್ತು ಈಗ ಬಿಜೆಪಿಯ ಸಂಸದೆ ಆಗಿರುವಾಕೆಯ ಪತಿರಾಯನೂ ಆಗಿರುವ ಅನುಪಮ್ ಖೇರ್ "ಇಂಕ್ರೆಡಿಬಲ್ ಇಂಡಿಯಾದ ರೂವಾರಿ ಆಗಿದ್ದ ಆಮಿರ್‌ಗೆ ಭಾರತ ಯಾವಾಗ ಅಸಹಿಷ್ಣುತೆ ದೇಶವಾಯಿತು?" ಎಂದು ಪ್ರಶ್ನಿಸಿದ್ದಾನೆ. ನಮ್ಮ ದೇಶದ ಬಗ್ಗೆ ಹೆಮ್ಮೆ ಮತ್ತು ಕಾಳಜಿ ಇರುವುದರಿಂದಲೇ ಇಲ್ಲಿ ಆಗುವ ಅನಾಹುತಗಳ ಬಗ್ಗೆಯೂ ನಮಗೆ ಆತಂಕವಾಗುವುದು ಸಹಜ ಎಂಬುದೇ ಖೇರ್ ತರಹದವರಿಗೆ ಅರ್ಥವಾಗುವುದಿಲ್ಲ.

ಖೇರ್ ತರಹವೇ ಆಮಿರ್ ಖಾನ್ ವಿರುದ್ಧ ಕೆಂಡಕಾರಿರುವಾತ ಈಗ ಬಾಲಿವುಡ್‌ನಲ್ಲಿ ಚಲಾವಣೆ ಕಳೆದುಕೊಂಡು ಸದ್ಯದಲ್ಲೇ ಸ್ಯಾಂಡಲ್‌ವುಡ್‌ನಲ್ಲಿ 'ಕಿಲ್ಲಿಂಗ್ ವೀರಪ್ಪನ್' ಎಂಬ ಚಿತ್ರದ ಮೂಲಕ ಅಸ್ತಿತ್ವ ಕಂಡುಕೊಳ್ಳಲು ಯತ್ನಿಸುತ್ತಿರುವ ನಿರ್ದೇಶಕ ರಾಮ್‌ಗೋಪಾಲ್ ವರ್ಮ. ಈ ವರ್ಮ "ಆಮಿರ್, ಸಲ್ಮಾನ್ ಮತ್ತು ಶಾರುಖ್ ಖಾನ್‌ಗಳು ಮುಸಲ್ಮಾನರಾಗಿದ್ದರೂ ಈ ದೇಶದ ಸೂಪರ್ ಸ್ಟಾರ್‌ಗಳಾಗಿರುವುದೇ ಈ ದೇಶ ಎಷ್ಟು ಸಹಿಷ್ಣುತೆ ದೇಶ ಎಂದು ತೋರುತ್ತದೆ" ಎಂದಿದ್ದಾನೆ. ಅಲ್ಲಾ ವರ್ಮ ಮಹಾಶಯ, ಆ ಮೂವರು ಖಾನ್‌ಗಳು ಬಾಲಿವುಡ್‌ನಲ್ಲಿ ಗೆದ್ದಿರುವುದು ತಮ್ಮ ಪ್ರತಿಭೆ ಮತ್ತು ಶ್ರಮದಿಂದಲೇ ಹೊರತು ಮುಸಲ್ಮಾನರು ಎಂಬ ಕಾರಣಕ್ಕಲ್ಲ, ಅಷ್ಟಾಗಿಯೂ ಸಿನಿಮಾ ಪ್ರೇಕ್ಷಕರು ಅವರನ್ನೆಲ್ಲ ಮೆಚ್ಚುವುದು ಅವರು ಭಾರತೀಯರು ಎಂಬ ಕಾರಣಕ್ಕೆ.

ಅದೇನೇ ಇರಲಿ, ಆಮಿರ್ ಮತ್ತು ಶಾರುಖ್ ಖಾನ್ ಅವರಿಬ್ಬರೂ ಭಾರತದಲ್ಲಿ ಅಸಹಿಷ್ಣುತೆ ಹೆಚ್ಚಾಗುತ್ತಿದೆ ಎಂದಿದ್ದರಿಂದ ಅವರನ್ನು ಕೆಂಡಮಂಡಲವಾಗಿ ವಿರೋಧಿಸುತ್ತಿರುವವರು ನಿಜವಾಗಲು ಅವರಿಬ್ಬರು ಆಡಿರುವ ಮಾತು ಅದೆಷ್ಟು ಸತ್ಯ ಎಂಬುದನ್ನು ಸಾಬೀತುಪಡಿಸಿದ್ದಾರೆ. ಜೊತೆಗೆ ನಮ್ಮ ದೇಶದಲ್ಲಿ ಬಹುಸಂಖ್ಯಾತರ ಧರ್ಮಾಂಧತೆ ಹೆಚ್ಚಾಗುತ್ತಿದೆ ಎಂಬುದನ್ನೂ ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ. ■

ಕೊಡಗು: ಸಂಘಿಗಳ ಹಿಂಸ್ರಾ ವಿನೋ

ನರೇಂದ್ರ ಮೋದಿ ವಿದೇಶದಲ್ಲಿ ಅಂತಾರಾಷ್ಟ್ರೀಯ ಭಯೋತ್ಪಾದನೆಯ ಬಗ್ಗೆ ಮಾತನಾಡುತ್ತಾರೆ. ಆದರೆ ಅವರು ಮತ್ತು ಅವರ ಶಿಷ್ಯಂದಿರು ದೇಶದ ಒಳಗೆ ಮಾಡುತ್ತಿರುವುದನ್ನು ಗಮನಿಸಿದರೆ 'ಭೂತದ ಬಾಯಲ್ಲಿ ಭಗವದ್ಗೀತೆ' ಎಂಬ ಮಾತು ನೆನಪಿಗೆ ಬರುತ್ತದೆ. ಕಳೆದ ಎರಡು ವಾರ ಟಿಪ್ಪು ಜನ್ಮ ದಿನಾಚರಣೆ ವಿರೋಧಿಸಿ ಕೊಡಗಿನಲ್ಲಿ ಸಂಘ ಪರಿವಾರ ಮಾಡಿದ ಅವಾಂತರಗಳನ್ನು ಕುರಿತು ಪತ್ರಿಕೆಯಲ್ಲಿ ಬರೆಯಲಾಗಿತ್ತು, ಆದರೆ ಅವುಗಳನ್ನು ಮೀರಿ ಸಂಘ ಪರಿವಾರದವರು ಕೆಲವು ಕಡೆ ಮಾಡಿದ ಕೃತ್ಯಗಳು ಭಯಾನಕವಾಗಿದ್ದವು.

ಸೋಮವಾರಪೇಟೆ ತಾಲೂಕು ಕೊಡಗಿನಲ್ಲಿ ಚೆಡ್ಡಿಗಳ ಪ್ರಯೋಗಾಲಯ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಈ ಹಿಂದೆ ಸೋಮವಾರಪೇಟೆಯ ಮಸೀದಿಯೊಂದರ ಮೇಲೆ ಹಾರಿಸಲ್ಪಟ್ಟ ಬಾವುಟವನ್ನು ಪಾಕಿಸ್ತಾನದ ಧ್ವಜ ಎಂದು ಚೆಡ್ಡಿಗಳು ಆರೋಪಿಸಿ ಕೊಡಗಿನಲ್ಲಿ ಗಲಭೆ ಎಬ್ಬಿಸಿದ್ದರು. ಆಗ ಅಲ್ಪಸಂಖ್ಯಾತ ವರ್ಗದವರ ಮೇಲೆ ದಾಂಧಲೆ ನಡೆಸಿ, ಆ ಮಸೀದಿಯ ಸಮಿತಿಯವರನ್ನೆಲ್ಲಾ ಬಂಧಿಸುವಂತೆ ಮಾಡಿದ್ದರಲ್ಲದೆ, ಈ ಪ್ರಕರಣದಲ್ಲಿ ಯಾವ ವಕೀಲರೂ ಮುಸ್ಲಿಮರ ವಕಾಲತ್ತು ವಹಿಸಬಾರದೆಂದು ಒತ್ತಡವನ್ನು ತಂದಿದ್ದರು. ಆ ಸಂದರ್ಭದಲ್ಲಿ ವಕಾಲತ್ತನ್ನು

ಗಲಭೆಯಿಂದಾಗಿ ಕೆ.ಜಿ.ಬೋಪಯ್ಯ ಶಾಸಕರಾದರು. ಸೋಮವಾರಪೇಟೆಯಲ್ಲಿ ಇಂತಹ ಪ್ರಯೋಗವನ್ನು ಮತ್ತೊಮ್ಮೆ ನಡೆಸಿದರು.

10ರಂದು ಟಿಪ್ಪು ಜನ್ಮದಿನೋತ್ಸವವನ್ನು ಆಚರಿಸಲಾಯಿತು. ಆದರೆ, ಅದರ ಹಿಂದಿನ ರಾತ್ರಿ, ಅಂದರೆ 9ರಂದು, ಅಲ್ಲಿಯ ಕೊಡವ ಸಮಾಜದ ಅಧ್ಯಕ್ಷ ಹಾಗು ಅಪ್ಪಚ್ಚು ರಂಜನ್ ಸೇರಿ ಕಾರ್ಯಕ್ರಮವನ್ನು ಬುಡಮೇಲು ಮಾಡುವುದು ಹೇಗೆ ಎಂಬ ಸಭೆಯನ್ನು ನಗರದ ಪ್ರಮುಖ ಸ್ಥಳದಲ್ಲಿ ನಡೆಸಿದರು. ಚೆಡ್ಡಿಗಳು ನಡೆಸಿದ ಈ ಸಭೆ ಪಾಪ ಪೊಲೀಸರ ಗಮನಕ್ಕೆ ಬರಲೇ ಇಲ್ಲ, ಪೊಲೀಸರು ಕಣ್ಣು ಮುಚ್ಚಿ ನಿದ್ರಿಸುತ್ತಾ ಮುಂದಿನ ದಿನದ ಸಿದ್ಧತೆಯನ್ನು ಮಾಡುತ್ತಿದ್ದರು. ರಾತ್ರಿ ಚೆಡ್ಡಿಗಳೆಲ್ಲಾ ಸೇರಿ ಸೋಮವಾರಪೇಟೆಗೆ ಪ್ರವೇಶಿಸುವ ಮೂರೂ ಭಾಗಗಳಲ್ಲಿ ಮರಗಳನ್ನು ಕಡಿದು ಬೀಳಿಸಿ ಹೊರಗಿನಿಂದ ಯಾರೂ ಪ್ರವೇಶಿಸದಂತೆ ತಡೆಯಲು ಯತ್ನಿಸಿದರು. ಈ ಕಾರ್ಯಾಚರಣೆಯೂ ಪೊಲೀಸರ ಗಮನಕ್ಕೆ ಬರಲಿಲ್ಲ, ಅಂತಹ ಕುಂಭಕರ್ಣ ನಿದ್ರೆ. ಬೆಳಗ್ಗೆ ಪೊಲೀಸರಿಗೆ ಸಾರ್ವಜನಿಕರು ತಿಳಿಸಿದ ನಂತರ ಮರವನ್ನು ತೆರವುಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸುವವರಿಗೆ ಯಾವುದೇ ವ್ಯವಸ್ಥೆಗಳು ಇರಲಿಲ್ಲ, ಬಸ್ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು.

ಪರಿವಾರದ ಮುಖಂಡ ಹಾಗೂ ಸೋಮವಾರಪೇಟೆ ಕೊಡವ ಸಮಾಜದ ಅಧ್ಯಕ್ಷ ಅಭಿಮನ್ಯು ಕುಮಾರ್ ಸೇರಿದಂತೆ ಹಲವರು ಸಭಾಂಗಣದೊಳಗೆ ಬಲವಂತವಾಗಿ ಪ್ರವೇಶಿಸಿದರು. ಅವರನ್ನು ಗಟ್ಟಿಯಾಗಿ ತಡೆಯುವ ಯತ್ನವನ್ನು ಪೊಲೀಸ್ ಇಲಾಖೆ ಮಾಡಲೇ ಇಲ್ಲ, ಅದನ್ನು ಕೆಲವು ಪ್ರಮುಖರು ಪ್ರಶ್ನಿಸಿದ ನಂತರ, ಡಿ.ವೈ.ಎಸ್.ಪಿ. ಪೂವಯ್ಯ ಸಭಾಂಗಣದೊಳಗೆ ಬಂದು ಅಭಿಮನ್ಯು ಕುಮಾರ್‌ರವರನ್ನು ಹೊರಗೆ ಕಳುಹಿಸುವ ನಾಟಕವನ್ನೂ ಆಡಿದರು. ನೀವೇ ಕರೆಸಿ ನಮ್ಮನ್ನು ಅವಮಾನಿಸುತ್ತಿದ್ದಿರಿ ಎಂದು ಟಿಪ್ಪು ಜಯಂತಿಯನ್ನು ಬಹಿರಂಗವಾಗಿ ವಿರೋಧಿಸಿದ ಅಭಿಮನ್ಯು ಕುಮಾರ್, ಪೊಲೀಸರ ಮೇಲೆ ಹಾರಾಡಿದರು. ಇದು ನೀನು ಅತ್ತಂತೆ ಮಾಡು, ನಾನು ಸತ್ತಂತೆ ಮಾಡುತ್ತೇನೆ ಎನ್ನುವಂತಿತ್ತು.

ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ ಬಲವಂತವಾಗಿ ಸಂಘ ಪರಿವಾರದ ಕಾರ್ಯಕರ್ತರು ಸಭಾಂಗಣದ ಒಳಗೆ ಪ್ರವೇಶಿಸಿದರು. ಅಲ್ಲಿ ಸ್ವಾಗತ ಭಾಷಣ ನಡೆಯುತ್ತಿತ್ತು, ವೇದಿಕೆಗೆ ನುಗ್ಗಿ ಅಲ್ಲಿ ಹಾಕಿದ್ದ ಬ್ಯಾನರನ್ನು ಕಿತ್ತು ಹಾಕಿದರು. ಕಿರುಚಾಡಲು ತೊಡಗಿದರು. ಪೊಲೀಸರು ಅಸಹಾಯಕರಂತೆ ನೋಡುತ್ತಾ ನಿಂತಿದ್ದರು. ಒಳಗೆ ಕಾರ್ಯಕ್ರಮಕ್ಕಾಗಿ ಬಂದವರನ್ನು ಅಟ್ಟಾಡಿಸಿದರು. ಟಿಪ್ಪುವಿನ ಫೋಟೋ


ತಾಲೂಕು ಪಂಚಾಯಿತಿ ಕಚೇರಿಗೆ ... ವಿರುದ್ಧ ಇಲ್ಲಿಯವರೆಗೆ ಅಲ್ಲಿಯ ಕಾರ್ಯ ನಿ... ದೂರು ನೀಡಿಲ್ಲ, ಇನ್ನು ಸಾರ್ವಜನಿಕರು ... ನೀಡುತ್ತಾರೆ ಎಂಬುದು ಪ್ರಶ್ನೆಯಾಗಿ... ಕಾರ್ಯಕ್ರಮವನ್ನೇ ಬಿಜೆಪಿಯವರು ... ಮಾಡಿದ್ದರು. ಇದರ ವಿರುದ್ಧವೂ ಪು... ಇವೆಲ್ಲವೂ ವ್ಯವಸ್ಥಿತವಾಗಿ ನಡೆದಂತಹ ...

ಕೇವಲ ಸಭಾಂಗಣಕ್ಕೆ ತಮ್ಮ ಪ್ರತಾ... ಪರಿವಾರದವರು ಸ್ಥಗಿತಗೊಳಿಸಲಿಲ್ಲ, ... ಪೊಲೀಸ್‌ಗಿರಿಯ ಜೊತೆಯಲ್ಲಿ ಅಲ್ಪಸಂ... ಹಲ್ಲೆ ಮತ್ತು ಬೆದರಿಸುವ ಪ್ರಯತ್ನ ನಡೆ...

ಮೊಬೈಲ್ ಕಿತ್ತುಕೊಂಡ -ಪ್ಯಾಂಟ್ ಬಿಚ್ಚಿದರು

ಸಂಘಿಗಳ ರಾಕ್ಷಸಿ ಪ್ರವೃತ್ತಿ ಎಷ್ಟಿತ್ತು ಎ... ಸುತ್ತಾಡುತ್ತಿದ್ದ ಅಲ್ಪಸಂಖ್ಯಾತ ಯುವಕರನ್... ಅವರ ಕೈಯಲ್ಲಿ ಇರುವಂತಹ ... ಕಿತ್ತುಕೊಳ್ಳುವಂತಹ ಕಾರ್ಯವನ್ನು ಮಾಡು... ಕಡೆ ಐವರು ಯುವಕರ ತಂಡವೊಂದು ... ಯುವಕನ ಕೈಯಲ್ಲಿ ಒಂದು ಉತ್ತಮವಾ...







ಎಲ್ಲಾ ಪ್ರತಿರೋಧಗಳ ನಡುವೆ ವಹಿಸಿದವರು ಎ.ಕೆ.ಸುಬ್ಬಯ್ಯ. ಇದಾಗಿ ಈಗ ಸುಮಾರು ಎರಡು ದಶಕಗಳೇ ಆಗಿದ್ದರೂ, ಆ ಪ್ರಕರಣದ ಆರೋಪಿಗಳು ಖುಲಾಸೆಗೊಂಡಿದ್ದರೂ, ಈಗಲೂ ಸಂದರ್ಭ ಸಿಕ್ಕಾಗಲೆಲ್ಲಾ ಎ.ಕೆ.ಸುಬ್ಬಯ್ಯನವರನ್ನು ದೇಶದ್ರೋಹಿ ಎಂದು ಸಂಘ ಪರಿವಾರದವರು ಜರೆಯುತ್ತಾರೆ.

ಆ ನಂತರವೂ ಸೋಮವಾರಪೇಟೆಯಲ್ಲಿ ಇಂತಹ ಸಾಕಷ್ಟು ಪ್ರಯೋಗಗಳನ್ನು ಸಂಘ ಪರಿವಾರದವರು ಮಾಡಿದ್ದಾರೆ. ಇದನ್ನು ಪ್ರತೀ ಬಾರಿಯೂ ಎ.ಕೆ.ಸುಬ್ಬಯ್ಯ ಹಾಗೂ ವಿ.ಪಿ.ಶಶಿಧರ್‌ರವರು ಸಂಘ ಪರಿವಾರದ ಕುತಂತ್ರ ಎಂದು ಸಾಬೀತು ಮಾಡಿದ್ದಾರೆ. ಆದರೂ ಅವರು ಇಂತಹ ಕೃತ್ಯಗಳನ್ನು ನಿಲ್ಲಿಸಿಲ್ಲ, ಟಿಪ್ಪು ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಸೋಮವಾರಪೇಟೆಯಲ್ಲಿ ಮಾತ್ರವಲ್ಲ, ಸುತ್ತಮುತ್ತಲಿನ ಪ್ರದೇಶಗಳಲ್ಲೂ ಭಯಾನಕವಾಗಿ ನಡೆದುಕೊಂಡಿದ್ದಾರೆ. ಅವರ ವರ್ತನೆಗಳು ನಾಗರಿಕ ಸಮಾಜ ತಲೆತಗ್ಗಿಸುವಂತಹದ್ದಾಗಿತ್ತು.

ಶನಿವಾರಸಂತೆ ಎಂಬ ಪ್ರದೇಶದಲ್ಲಿ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷರೂ, ಛಲವಾದಿ ಸಂಘಟನೆಯ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಮುಖಂಡೆ ಹೆಚ್.ಬಿ.ಜಯಮ್ಮನವರ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ. ಕಾರ್ಯಕ್ರಮಕ್ಕೆ ತೆರಳದಂತೆ ತಡೆಯಲು ಯತ್ನಿಸಿದ್ದಾರೆ. ಅಲ್ಲಿ ಅಂಗಡಿಗಳನ್ನು ಬಲವಂತವಾಗಿ ಮುಚ್ಚಿಸಲು ಯತ್ನಿಸಿದಾಗ ಜಯಮ್ಮ ಪ್ರತಿರೋಧಿಸಿದ್ದರು. ಆಗ ಸಂಘಿಗಳು ಪೊಲೀಸರ ಸಮ್ಮುಖದಲ್ಲಿಯೇ ಅವರ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ. ಮಹಿಳೆಯನ್ನು ಮಾತೆ ಎಂದು ಸಂಭೋದಿಸುವವರ ಕೃತ್ಯವಿದು. ಅವರು ಸೋಮವಾರಪೇಟೆಗೆ ತೆರಳದಂತೆ ತಡೆಯಲು ಯತ್ನಿಸಿದ್ದಾರೆ. ಆದರೆ ಅದ್ಯಾವುದನ್ನೂ ಲೆಕ್ಕಿಸದೇ ಜಯಮ್ಮ ಸೋಮವಾರಪೇಟೆಯಲ್ಲಿ ಸರಕಾರದ ವತಿಯಿಂದ ನಡೆದ ಕಾರ್ಯಕ್ರಮಕ್ಕೆ ಬಂದಿದ್ದಾರೆ.


ಸೋಮವಾರಪೇಟೆ ಚೆಡ್ಡಿಗಳ ಆಡಂಬೊಲ

ಸೋಮವಾರಪೇಟೆಯ ಶಾಸಕ ಅಪ್ಪಚ್ಚು ರಂಜನ್‌ರವರ ಕಾರಸ್ಥಾನ. ಇಲ್ಲಿ ನಡೆಯುವಷ್ಟು ಚೆಡ್ಡಿಗಳ ಹಾವಳಿ ಬೇರೆ ಎಲ್ಲಿಯೂ ನಡೆಯುವುದಿಲ್ಲ, ಹೊಸ ಹೊಸ ಪ್ರಯೋಗಗಳು ರಾಜ್ಯದಲ್ಲಿ ಮೊದಲು ಪ್ರಯೋಗಿಸಲ್ಪಡುವುದೇ ಸೋಮವಾರಪೇಟೆಯಲ್ಲಿ, ಪಾಕಿಸ್ತಾನ ಧ್ವಜದ ಪ್ರಯೋಗ ಇಲ್ಲಿಯೇ ನಡೆದು ಅಪ್ಪಚ್ಚು ರಂಜನ್ ಶಾಸಕರಾದರು. ಆ ನಂತರದ ಪ್ರಯೋಗ ಬಾಬಾಬುಡನ್‌ಗಿರಿಯಾಗಿತ್ತು, ಇದರಿಂದ ಸಿ.ಟಿ.ರವಿ ಶಾಸಕರಾದರು. ಪಾಲೂರು ದೇವಾಲಯದ

ಸೋಮವಾರಪೇಟೆಯ ಜವಾಬ್ದಾರಿಯನ್ನು ಡಿ.ವೈ.ಎಸ್.ಪಿ. ಪೂವಯ್ಯನವರಿಗೆ ವಹಿಸಲಾಗಿತ್ತು. ಅವರು ಎಲ್ಲಿಯೂ ಸರಕಾರದ ಪರವಾಗಿ ಕಾರ್ಯ ನಿರ್ವಹಿಸಿದ ಮಾಹಿತಿ ಟಿಪ್ಪು ಉತ್ಸವಕ್ಕೆ ಸಂಬಂಧಪಟ್ಟಂತೆ ಸಿಗುತ್ತಿಲ್ಲ. ಅಷ್ಟರಮಟ್ಟಿಗೆ ಅವರು ಬಿಜೆಪಿ ಪರ ವಾಲಿದ್ದರು. ಕಾರ್ಯಕ್ರಮವನ್ನು ಸೋಮವಾರಪೇಟೆಯ ತಾಲೂಕು ಪಂಚಾಯತಿ ಕಚೇರಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಅದರ ಸುತ್ತ 300ರಿಂದ 500ರಷ್ಟು ಸಂಘ ಪರಿವಾರದ ಕಾರ್ಯಕರ್ತರು ಜಮಾಯಿಸಿದ್ದರು. ಹಾಗಾಗಿ ಯಾರೂ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಹೋಗುವಂತೆ ಇರಲಿಲ್ಲ, ಕೇವಲ ಕೆಲವೇ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಸಭಾಂಗಣದ ಒಳಗಡೆ ಪ್ರವೇಶಿಸಲು ಪ್ರಯತ್ನಿಸಿದರೆ ಅವರಿಗೆ ಸಂಘ ಪರಿವಾರದ ಕಾರ್ಯಕರ್ತರು ಹೀನಾಮಾನವಾಗಿ ಬೈಯುವುದು, ಜಾತಿಯ ಹೆಸರಿನಲ್ಲಿ ತೆಗಳುವುದು ಸೇರಿದಂತೆ ಸಾಕಷ್ಟು ಹಿಂಸೆಗಳನ್ನು ನೀಡಿದರು.

ಸೋಮವಾರಪೇಟೆಯ ಕಾಂಗ್ರೆಸಿನ ಕಚೇರಿಯಲ್ಲಿ ಕೆಲವು ಕಾಂಗ್ರೆಸಿಗರು ಸೇರಿದ್ದರು. ಅಲ್ಲಿ ಕಾಟಾಚಾರಕ್ಕಾಗಿ ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸಿದಂತೆ ಮಾಡಲಾಯಿತು. ಅವರಲ್ಲಿ ಬಹುತೇಕರು ಸರಕಾರಿ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬರಲೇ ಇಲ್ಲ, ಆದರೆ ನಾವು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರೆ ರಕ್ತಪಾತವಾಗುತ್ತಿತ್ತು ಎಂದು ಉತ್ತರನ ಪೌರುಷವನ್ನು ಕೆಲವರು ತೋರಿದರು.

ಸಭಾಂಗಣದಲ್ಲಿ ಕಾರ್ಯಕ್ರಮ ಆರಂಭವಾಗುವ ಮುನ್ನವೇ ಈ ಕಾರ್ಯಕ್ರಮವನ್ನು ವಿರೋಧಿಸುವ ಸಂಘ



ತೆಗೆದುಕೊಂಡು ಎಳೆದಾಡಿದರು. ಕಾರ್ಯಕ್ರಮಕ್ಕೆ ಮುಸ್ಲಿಂ ಧರ್ಮಗುರು ಒಬ್ಬರನ್ನು ದಕ್ಷಿಣ ಕನ್ನಡದಿಂದ ಕರೆಸಲಾಗಿತ್ತು, ಅವರ ಮೇಲೆಯೂ ಹಲ್ಲೆಯ ಯತ್ನ ನಡೆಯಿತು.

ಅಷ್ಟರಲ್ಲಿ ಮಡಿಕೇರಿಯಲ್ಲಿ ಕುಟ್ಟಪ್ಪ ಸಾವಿಗೀಡಾದ ವಿಚಾರ ಹಬ್ಬಿತ್ತು, ಆದ್ದರಿಂದ ಸೋಮವಾರಪೇಟೆ ಕಾರ್ಯಕ್ರಮಕ್ಕೆ ಆಗಮಿಸಿದ ಧರ್ಮ ಗುರುವನ್ನು ಮುಗಿಸಬೇಕು ಎಂದು ಹೇಳುತ್ತಿದ್ದುದು ಕೇಳಿಬಂತು. ಡಿ.ವೈ.ಎಸ್.ಪಿ. ಮಾಡಿದ ಒಂದೇ ಉತ್ತಮ ಕೆಲಸ ಎಂದರೆ, ಅವರನ್ನು ತನ್ನ ವಾಹನದಲ್ಲಿ ಕುಳ್ಳಿರಿಸಿಕೊಂಡು ಆ ಪ್ರದೇಶದಿಂದ ರಕ್ಷಿಸಿದ್ದಾಗಿತ್ತು, ಆಗ ಡಿ.ವೈ.ಎಸ್.ಪಿ. ವಾಹನದ ಚಾಲಕನ ಮೇಲೆಯೂ ಹಲ್ಲೆ ನಡೆಯಿತು. ಟಿಪ್ಪುವಿನ ಬ್ಯಾನರ್ ಹೊರಗೆ ತೆಗೆದುಕೊಂಡು ಬಂದು ಚಿಂದಿ ಮಾಡಿ ಅದಕ್ಕೆ ಬೆಂಕಿ ಕೊಟ್ಟು ಆನಂದಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ ಇದಕ್ಕೆಲ್ಲಾ ಸಾಕ್ಷಿಯಾಗಿದ್ದರು. ಡಿ.ವೈ.ಎಸ್.ಪಿ. ಪೂವಯ್ಯ ಸ್ವಲ್ಪವಾದರೂ ದಿಟ್ಟತನ ತೋರಿದ್ದರೆ ಖಂಡಿತವಾಗಿಯೂ ಇದಕ್ಕೆಲ್ಲಾ ಅವಕಾಶವಾಗುತ್ತಿರಲಿಲ್ಲ.

ಸಭಾಂಗಣದ ಒಳಗೆ ಕುಳಿತಿದ್ದ ಕಾಂಗ್ರೆಸಿನ ಕಾರ್ಯಕರ್ತ ಲಾರೆನ್ಸ್ ಎಂಬವರ ಮೇಲೆ ಹಲ್ಲೆ ನಡೆಯಿತು. ತಾಲೂಕು ಪಂಚಾಯತಿ ಕಚೇರಿಯಲ್ಲಿದ್ದ ಪೀಠೋಪಕರಣಗಳೆಲ್ಲವನ್ನೂ ಧ್ವಂಸ ಮಾಡಲಾಯಿತು. ಕಚೇರಿಯ ಕಿಟಕಿ ಗಾಜುಗಳನ್ನು ಒಡೆದುಹಾಕಲಾಯಿತು. ಕೆಲವು ಮುಸ್ಲಿಂ ಯುವಕರ ಮೇಲೆ ಹಲ್ಲೆ ಮಾಡಲಾಯಿತು. ಆಗ ಓಡುವಾಗ ಕೆಲವು ಯುವಕರು ಮೊದಲನೆಯ ಮಹಡಿಯಿಂದ ಕೆಳಕ್ಕೆ ಬಿದ್ದು ಪೆಟ್ಟಾಯಿತು. ಆದರೂ ಅವರನ್ನು ಅಲ್ಲಿಯೂ ಬಿಡದೆ ಥಳಿಸಿದರು.

ಇತ್ತು, ಅದನ್ನು ಬಲವಂತವಾಗಿ ಕಿತ್ತುಕೊಂ... ಹೆಸರನ್ನು ಕೇಳಿದರು.

ಸಂಘ ಪರಿವಾರದ ಗುಂಪು ಹೆಚ್ಚ... ಇದ್ದ ಕಾರಣ ಬೆದರಿದ ಯುವಕರು ತಾ... ಎಂದು ಹೇಳಿದರೆ ಎಲ್ಲಿ ತಮಗೆ ಪೆಟ್ಟು... ಎಂದು ಭಾವಿಸಿ, ಹಿಂದೂ ಹೆಸರುಗಳ... ಸಂಘ ಪರಿವಾರದವರಿಗೆ ಆ ಯುವಕರ... ಎಂಬುದು ಖಂಡಿತವಾಗಿಯೂ ಗೊತ್ತಿತ್ತು. ... ಹಿಂದೂ ಅಲ್ಲ ಎಂದು ಪ್ರತಿಯೊಬ್ಬ ಯು... ಅವರ ಪ್ಯಾಂಟನ್ನು ಬಿಚ್ಚಿಸುವಂತಹ ರಾಕ್ಷ... ತೋರಿದರು. ಕೆಲವರು ಓಡಿಹೋದರೆ ... ಅನಿವಾರ್ಯವಾಗಿ ಪ್ಯಾಂಟನ್ನು ಬಿಚ್ಚುವ... ಉಂಟಾಗಿತ್ತು. ಇಷ್ಟೆಲ್ಲಾ ಭಯಾನಕ ಕೃತ... ಜಿಲ್ಲೆಯ ಸೋಮವಾರಪೇಟೆಯಲ್ಲಿ ನಡೆ... ಸುದ್ದಿಯಾ ಗಲೇ ಇಲ್ಲ, ಮಡಿಕೇರಿಯ... ಪ್ರಕರಣ ಮಾತ್ರ ರಾಜ್ಯ ಮತ್ತು ... ಸುದ್ದಿಯಾಯಿತು. ಕುಟ್ಟಪ್ಪ ಸತ್ತಿದ್ದು ಹೇ... ಇನ್ನೂ ನಿಖರವಾಗಿ ಯಾರಿಗೂ ಹೇಳಲು ... ಆದರೆ ಮಡಿಕೇರಿಯಿಂದ ಸಿದ್ದಾಪುರಕ್ಕೆ ಬರು... ಯುವಕ ಶಾಹುಲ್ ಹಮೀದ್‌ಗೆ ಗುಂಡ... ಸತ್ತ ವಿಚಾರವೂ ಯಾವ ಮಟ್ಟದಲ್ಲಿ ಸುದ್ದಿ... ಆ ಮಟ್ಟದಲ್ಲಿ ಸುದ್ದಿಯಾಗಲಿಲ್ಲ, ಅಂದ... ದಿನಾಚರಣೆ ಆಚರಿಸುವುದಕ್ಕೂ ಮುಖ್ಯ ... ಸಂಸ್ಥೆಗಳು ವಿರೋಧವಿತ್ತು ಎನ್ನುವುದು ...

ಈಗ ಸಂಘ ಪರಿವಾರದವರು ವಾ... ಸಂದೇಶಗಳನ್ನು ರವಾನೆ ಮಾಡುತ್ತಿದ್ದಾರ... ರೊಂದಿಗೆ ವಹಿವಾಟು ಮಾಡಬಾರದು; ಅ... ಬಹಿಷ್ಕರಿಸಬೇಕು ಎಂಬ ಸಂದೇಶಗ... ಹಿಂದೊಮ್ಮೆ ಇದೇ ರೀತಿ ಮಾಡಿ ಸ... ಪ್ರಮುಖರು ಮಾತ್ರ ಅಲ್ಪಸಂಖ್ಯಾತರೊಂ... ಗಳನ್ನು ಮಾಡಿಕೊಂಡು ಈಗ ಕೋ... ಐಷಾರಾಮಿ ಜೀವನವನ್ನು ನಡೆಸುತ್ತಿದ್ದಾರ... ಗಳಿಸಿರುವ ಕೋಟ್ಯಾಂತರ ಹಣದಲ್ಲಿ ಒ... ಆಗಿಂದಾಗ್ಗೆ ನಡೆಯುವ ಇಂತಹ ಘಟ... ಮಾಡುತ್ತಾರೆ.

ಈ ಘಟನೆಗಳ ಬಗ್ಗೆ ಮ್ಯಾಜಿಸ್ಟ್ರೀಯ... ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಮಾ... ಜಗದೀಶ್ ಶೆಟ್ಟರ್ ಕೂಡ ಇಂತಹ ವಿಚ... ಎಂದು ಹೇಳಿದ್ದರು. ಈಗ ವಾಸ್ತವ ...

...ಕಾರ ಯಾರದ್ದು?

...ಟಕದಲ್ಲಿ ಸರಕಾರ ಬಿಜೆಪಿಯದ್ದೋ ಅಥವ ...ದ್ದೋ ಎಂಬ ಸಂಶಯ ಬರುತ್ತದೆ. ಜಾತ್ಯತೀತ ...ಚನೆಗಾಗಿ ಮಡಿಕೇರಿಯಲ್ಲಿ ಒಂದು ಆಂತರಿಕ ... ಆಯೋಜಿಸಲಾಗಿತ್ತು. ಸೆಕ್ಷನ್ 144 ಸಂಜೆ ...ಳಗ್ಗೆ 6ರವರೆಗೆ ಮಾತ್ರ ಇದೆ. ಆದರೂ ... ಮತ್ತು ಜಿಲ್ಲಾಡಳಿತ ಈ ಸಭೆಗೆ ಅವಕಾಶ ... ಹಾಗಾಗಿ ಕುಶಾಲನಗರದಲ್ಲಿ ನಡೆಸಲು ...ಸಲಾಗಿತ್ತು. ಅದಕ್ಕೂ ಅವಕಾಶ ನೀಡದಾಗ, ...ದ ಮೈಸೂರು ಜಿಲ್ಲೆಯ ಕೊಪ್ಪದ ಸಮುದಾಯ ... ನಡೆಸಲು ನಿರ್ಧರಿಸಲಾಗಿತ್ತು. ಅಲ್ಲಿಯ ...ಪು ಇದಕ್ಕೆ ಇಲ್ಲದ ಸಬೂಬುಗಳನ್ನು ಹೇಳಿ ... ಯತ್ನಿಸಿತು. ಅಲ್ಲಿಯ ಪಂಚಾಯತಿ ಸದಸ್ಯರ ...ದ ಹೇರಿ ಸಭಾಂಗಣ ನೀಡದಂತೆ ನೋಡಿಕೊಳ್ಳ ...ಸಂಘ ಪರಿವಾರದ ಯಾವುದೇ ಕಾರ್ಯಕ್ರಮಕ್ಕೆ ... ಜಿಲ್ಲಾಡಳಿತ, ಜಾತ್ಯತೀತ ಒಕ್ಕೂಟ ರಚನೆಗೆ ...ಚಾರವಿದ್ದರೂ ಅವಕಾಶ ನೀಡದೆ ಇರುವುದು ...ಬದ್ಧತೆಯ ಬಗ್ಗೆ ಸಂಶಯವನ್ನು ಮೂಡುವಂತೆ ...ಮಾತ್ರವಲ್ಲ ಅಧಿಕಾರಿ ವರ್ಗದವರು ಇನ್ನೂ ...ಜೆಪಿಯ ಆಡಳಿತದಲ್ಲಿಯೇ ಇರುವಂತೆ ...ದ್ದಾರೆ ಎಂದು ಅನಿಸುತ್ತದೆ.

... ಬಗ್ಗೆ ಅರಿವು ಇರುವ ಕೊಡಗು ಜಿಲ್ಲಾ ...ಕ ಇಲ್ಲದ ಕ್ಯಾತೆಯನ್ನು ಮ್ಯಾಜಿಸ್ಟ್ರೀಯಲ್ ... ಬಗ್ಗೆ ತೆಗೆಯುತ್ತಿದೆ. 26ರಂದು ವಿಚಾರಣೆಯ ...ಂದು ಘೋಷಿಸಿದ್ದಕ್ಕೆ ವಿರೋಧವನ್ನು ...ದ್ದಾರೆ. ಅಂದು ಕೊಡಗಿನಲ್ಲಿ ಹುತ್ತರಿ ಹಬ್ಬ ...ದ ಉದ್ದೇಶಪೂರ್ವಕವಾಗಿ ಆ ದಿನ ರಾಜ್ಯ ...ಚಾರಣೆಗೆ ನಿಗದಿಪಡಿಸಿದೆ ಎಂದು ಮೊಸರಲ್ಲಿ ...ಹುಕುವ ಯತ್ನವನ್ನು ಮಾಡುತ್ತಿದ್ದಾರೆ. ಈಗ ...ಯಲ್ ವಿಚಾರಣೆಯಿಂದ ನ್ಯಾಯ ...ವುದಿಲ್ಲ. ಅದು ರಾಜ್ಯ ಸರಕಾರದ ಅಡಿಯಲ್ಲಿ ...ಗಿ ಸಿ.ಬಿ.ಐ. ವಿಚಾರಣೆಗೆ ಒಳಪಡಿಸಿ ಎಂದು ...ರೆ.

...ಜಾತ್ಯತೀತ ಒಕ್ಕೂಟ ರಚನೆ

...ಜಾತ್ಯತೀತ ಒಕ್ಕೂಟವೊಂದನ್ನು ಎ.ಕೆ.ಸುಬ್ಬಯ್ಯ ...ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಕೆಆರ್.ವಿದ್ಯಾಧರ ...ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಈ ...ಮು ಮುಂದಿನ ದಿನಗಳಲ್ಲಿ ಕೊಡಗು ಜಿಲ್ಲೆಯಲ್ಲಿ ...ಸಾಮರಸ್ಯವನ್ನು ಸಂರಕ್ಷಿಸುವ ನಿಟ್ಟಿನಲ್ಲಿ 'ಕೊಡಗನ್ನು ...ವಾರದಿಂದ ಉಳಿಸಿ' ಎಂಬ ಚಳವಳಿಯ ... ಟಿಪ್ಪು ಜನ್ಮ ದಿನಾಚರಣೆಯ ಸಂದರ್ಭದಲ್ಲಿ ... ನೈಜ ಘಟನೆಯ ಬಗ್ಗೆ ಜನರಿಗೆ ತಿಳಿಸುವ ... ಮಾಡಲು ತೀರ್ಮಾನಿಸಿದೆ.

...ಜೊತೆಯಲ್ಲಿ ನವೆಂಬರ್ 10ರಂದು ಬಂದ್‌ಗೆ ...ಗಿ ಕರೆ ನೀಡಿದ್ದಕ್ಕಾಗಿ ಮತ್ತು ಕರಾಳ ದಿನ ... ಪ್ರಚೋದನೆ ನೀಡಿದ್ದಕ್ಕಾಗಿ ಕೇರಳ ಉಚ್ಚ ...ಮ ಹಾಗೂ ಸರ್ವೋಚ್ಚ ನ್ಯಾಯಾಲಯದ ... ಆಧಾರದಲ್ಲಿ ಸಾರ್ವಜನಿಕ ಹಿತಾಸಕ್ತಿ ...ಯನ್ನು ಸಲ್ಲಿಸಲು ಎ.ಕೆ.ಸುಬ್ಬಯ್ಯ ನಿರ್ಧರಿಸಿದ್ದು ... ಸಂದರ್ಭದಲ್ಲಿ ಆದಂತಹ ಸಾವು, ನೋವು ...ಕ್ಕೆ ಅವರುಗಳನ್ನೇ ಹೊಣೆಗಾರರನ್ನಾಗಿಸುವ ... ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ. ...ಕೊಡಗು ಜಿಲ್ಲೆಯಲ್ಲಿ ಟಿಪ್ಪುವಿನ ವಿಚಾರದಲ್ಲಿ ...ರಣವನ್ನು ನಡೆಸಿ, ಜನರಿಗೆ ನೈಜಾಂಶವನ್ನು ...ದ್ದೇಶಿಸಿದ್ದಾರೆ.

...ಗೆ ನಡೆದ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ...ರ್ಯಕರ್ತರು ಮತ್ತು ಬಿಜೆಪಿಯೇತರ ಪಕ್ಷಗಳ ...ರು ಭಾಗವಹಿಸಿದ್ದರು. ಇದು ಕಾಂಗ್ರೆಸಿನ ಕೆಲವು ... ಕೆಂಗಣ್ಣಿಗೆ ಗುರಿಯಾಗಿದೆ. ಕಾಂಗ್ರೆಸ್ ...ದ ಬಗ್ಗೆ ಎ.ಕೆ. ಸುಬ್ಬಯ್ಯ ನೀಡಿರುವ ಹೇಳಿಕೆ ...ಯ ಕೊಡವ ಕಾಂಗ್ರೆಸ್ ಮುಖಂಡರನ್ನು ... ಹಾಗಾಗಿ ಅವರು ಸಭೆ ನಡೆಸಿ ...ಸವರು ಎ.ಕೆ.ಸುಬ್ಬಯ್ಯನವರಿಗೆ ಪಾಠಸ್ವವನ್ನು ... ಎಂದು ಮನವಿ ಸಲ್ಲಿಸಲು ತೀರ್ಮಾನಿಸಿದ್ದಾರೆ. ...ಯ್ಯನವರ ಮನೆಗೆ ತೆರಳಿ, ತಮ್ಮ ವೈಯಕ್ತಿಕ ... ಮಾಡಿಕೊಳ್ಳುವ ಕೊಡವ ಕಾಂಗ್ರೆಸಿಗರು ...ಯ್ಯನವರನ್ನು ಕಾಂಗ್ರೆಸಿನ ಸಭೆಗೂ ಅವರನ್ನು ...ಸದು ಎಂದು ತೀರ್ಮಾನಿಸಿದ್ದಾರೆ. ಇದಕ್ಕೆ ...ನ್ನವರು ಎ.ಕೆ. ಸುಬ್ಬಯ್ಯನವರ ನೇತೃತ್ವದಲ್ಲಿ ... ಸ್ಪಷ್ಟಪಡಿಸಿದ್ದಾರೆ. ಈ ಎಲ್ಲಾ ಬೆಳವಣಿಗೆಗಳು ... ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ...ಚುನಾವಣೆಯ ಮೇಲೆ ನೇರ ಪರಿಣಾಮ

■ ಬಿ.ಎನ್. ಮನು ಶೆಣೈ

ಯಡ್ಡಿ ಪುಟಕ್ಕಿಟ್ಟ ಚಿನ್ನದಂತಾದರಂತಲ್ಲಾ!

ಥೂತ್ತೇರಿ

ಥೂಹೂ

ಭ್ರಷ್ಟತೆಯನ್ನು ದಕ್ಷತೆಯಿಂದ ನಿರ್ವಹಿಸಿದ್ದ ಯಡಿಯೂರಪ್ಪನವರ ಮೇಲಿದ್ದ ಡಿನೋಟಿಫಿಕೇಷನ್ ಹಗರಣದ ವಿಚಾರಣೆ ರದ್ದಾದ ಕಾರಣಕ್ಕೆ, ಯಡಿಯೂರಪ್ಪನಿಂದ ಯಡೆ ಪಡೆದಿದ್ದ ಫಲಾನುಭವಿ ಪತ್ರಿಕೆಗಳು ಮತ್ತು ಅಕ್ರಮಪ್ರಿಯರೆಲ್ಲಾ ಒಕ್ಕೊರಲಿನಿಂದ "ನಮ್ಮ ಯಡ್ಡಿ ನಿರ್ದೋಷಿ" ಎಂದು ಕೂಗಿವೆಯಂತಲ್ಲಾ. ತನಿಖೆಗಾಗಿ ಸಲ್ಲಿಸಿದ ಅರ್ಜಿಗಳು ಆತುರದಿಂದ ಕೂಡಿವೆ ಮತ್ತು ಅಂದಿನ ರಾಜ್ಯಪಾಲ ಕೂಡ ಆತುರ ಪಟ್ಟಿದ್ದಾರೆ. ಯಾಕೆಂದರೆ ಆಗ ಯಡ್ಡಿ ತನಿಖೆಯನ್ನು ಸಂಪುಟ ಸಮಿತಿ ಒಪ್ಪಿಗೆಗೆ ಕಳಿಸಿದ್ದರೆ ಸದನದಿಂದ ಒಪ್ಪಿಗೆ ಬರುತ್ತಿರಲಿಲ್ಲ. ಇದನ್ನರಿತು ರಾಜ್ಯಪಾಲರು ಮಾಡಿದ ಯಡವಟ್ಟಿನಿಂದ ಕೋರ್ಟು ಕಾನೂನು ಬದ್ಧ ನಿಯಮ ಪಾಲಿಸಿಲ್ಲವೆಂಬ ರದ್ದತಿಯನ್ನು ಯಡ್ಡಿಯು ಕ್ಲೀನ್‌ಚಿಟ್ ಎಂಬ ಬೊಬ್ಬೆಯಿಡುತ್ತಿವೆಯಲ್ಲಾ, ಥೂತ್ತೇರಿ!

* * *

ಯಡ್ಡಿಯು ಮಾಡುತ್ತಿದ್ದ ಹಗಲೂರಾತ್ರಿಯ ಡಿನೋಟಿಫಿಕೇಷನ್ ಹಗರಣದ ಬೆನ್ನು ಹತ್ತಿದ್ದ ಬಾಲರಾಜ್ ಮತ್ತು ಸಿರಾಜಿನ್ ಪಾಷ ಗೋಪಾಲಗೌಡರ ಶಿಷ್ಯರಂತೆ. ತಮ್ಮ ಗುರುಗಳಾದ ಗೋಪಾಲಗೌಡರು ತೀರಿಕೊಂಡಾಗ ಅವರ ಬ್ಯಾಂಕ್ ಖಾತೆಯಲ್ಲಿ ಶವಸಂಸ್ಕಾರಕ್ಕಾಗುವಷ್ಟು ಹಣವಿರಲಿಲ್ಲವಂತೆ. ತಮ್ಮ ಸಹಾಯಕರ ಬಳಿ ಊಟಕ್ಕಾಗಿ, ಬಸ್‌ಚಾರ್ಜಿಗಾಗಿ ಹಣ ಕೇಳುತ್ತಿದ್ದ ಗೌಡರದ್ದು ಬ್ಯಾಂಕ್ ಖಾತೆಯಿದ್ದ ಬಗ್ಗೆ ಯಾರಿಗೂ ಖಾತ್ರಿಯಿಲ್ಲ. ಶಿವಮೊಗ್ಗ ಜಿಲ್ಲೆಯಿಂದ ಬಂದ ಅಂತಹ ರಾಜಕಾರಣಿಯ ಅಭಿಮಾನಿಗಳಾದ ಬಾಲರಾಜ್ ಮತ್ತು ಪಾಷ ಯಡಿಯೂರಪ್ಪ ಸಿಕ್ಕಸಿಕ್ಕ ನೆಲ ಮತ್ತು ಕಟ್ಟಡ ನುಂಗುವುದನ್ನು ನೋಡಲಾರದೆ ತಮ್ಮ ಜೀವವನ್ನೇ ಒತ್ತೆಯಿಟ್ಟು ಯಡ್ಡಿ ವಿರುದ್ಧ ಹೋರಾಡಿದರಂತಲ್ಲಾ. ಹೋರಾಡುವ ಸಮಯದಲ್ಲಿ ಅವರಿಗೆ ಹಣಕಾಸಿನ ಆಮಿಷ ಮತ್ತು ಜೀವ ಬೆದರಿಕೆ ಕರೆಗಳು ಬಂದರೂ ಕ್ಯಾರೆ ಎನ್ನದೆ ಮುಂದುವರಿಯಲಾಗಿ ಯಡಿಯೂರಪ್ಪ ಜೈಲಿಗೆ ಹೋಗಿ ಬಂದರಂತಲ್ಲಾ. ಇದೇನೇ ಆದರೂ "ಯಡಿಯೂರಪ್ಪನ ಮೇಲೆ ಇನ್ನೂ ಹಲವು ಪ್ರಕರಣಗಳಿದ್ದು, ಅಕ್ರಮ ಭೂಮಿಗಳಿದ್ದು ಅವುಗಳ ವಿರುದ್ಧವೂ ಹೋರಾಡುತ್ತೇವೆ" ಎಂದು ಸಿರಾಜಿನ್ ಪಾಷ ಮತ್ತು ಬಾಲರಾಜ್ ಶಪಥ ಮಾಡಿದ್ದಾರಂತಲ್ಲಾ, ಥೂತ್ತೇರಿ!!

* * *

ನಮ್ಮ ಪೇಜಾವರ ಮಠದ ಕಡೆಯಿಂದ ಒಳ್ಳೆ ಸಂದೇಶ ಬಂದಿದೆಯಲ್ಲಾ. ದಲಿತರು ಮುಸ್ಲಿಮರನ್ನೆಲ್ಲಾ ಸಮಾನವಾಗಿ ಪ್ರೀತಿಸುವ ಯತಿವರ್ಯರು "ನಾನು ಎಲ್ಲರನ್ನು ಸಮಾನವಾಗಿ ಪ್ರೀತಿಸುವವನು. ಆದರೆ ಗರ್ಭಗುಡಿ ಪ್ರವೇಶ ಮತ್ತು ಸಹಪಂಕ್ತಿ ಭೋಜನ ಮಾತ್ರ ಸಾಧ್ಯವಿಲ್ಲ. ಇದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಭಾರತದಲ್ಲಿ ಸ್ವಾತಂತ್ರ್ಯ ಬಂದಂದಿನಿಂದಲೂ ಅಸಹಿಷ್ಣುತೆ ಇದೆ. ಅದಿಲ್ಲದ ಕಾಲವೇಯಿಲ್ಲ" ಎಂದರಂತಲ್ಲಾ. ಜಗದ್ಗುರುಗಳ ಈ ವಾಕ್ಯವನ್ನು ಪರಾಮರ್ಶಿಸಿದಾಗ ತಿಳಿಯುವುದೇನೆಂದರೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಗುರುಗಳ ಕಡೆಯವರು ಸಹಿಷ್ಣುತೆಯಿಂದಲೇ ಇದ್ದರು. ಏಕೆಂದರೆ ಬ್ರಿಟಿಷರ ಆಡಳಿತದಲ್ಲಿ ಸರಕಾರದ ಕರ್ಮಚಾರಿಗಳಾಗಿದ್ದವರೆಲ್ಲಾ ಗುರುಗಳ ಕಡೆಯವರೆ. ಆದರೆ ಚೆಡ್ಡಿಯೊಬ್ಬ ಗಾಂಧಿ ಕೊಂದ ಕಾರಣಕ್ಕೆ ಅಸಹಿಷ್ಣುತೆ ಉದ್ಘಾಟನೆಗೊಂಡು ಮಸೀದಿಯ ಗಲಭೆ, ರಾಮಮಂದಿರದ ಗಲಭೆ, ಇತ್ಯಾದಿ ಸರಣಿ ಕೃತ್ಯಗಳು ನಡೆದವು. ಇವುಗಳನ್ನು ನೋಡಿದರೆ ಭಾರತದಲ್ಲಿ ಸ್ವಾತಂತ್ರ್ಯಾನಂತರವೂ ಅಸಹಿಷ್ಣುತೆಗೆ ಅವರ ಕಡೆಯವರೇ



ಕಾರಣರಾಗಿದ್ದದ್ದು ನಿಜ. ಆದರೀಗ ಅವರೇ ಅಧಿಕಾರಕ್ಕೆ ಬಂದ ಫಲವಾಗಿ ಇಡೀ ಭಾರತವೇ ಅಸಹಿಷ್ಣು ಮನಸ್ಥಿತಿಗೆ ತುತ್ತಾಗಿ ಹೋಗಿದೆಯಂತಲ್ಲಾ, ಥೂತ್ತೇರಿ!!

* * *

ಚೆಡ್ಡಿಗಳ ಮೂಲಭೂತ ಗುಣದ ಪ್ರಧಾನ ಲಕ್ಷಣವೆಂದರೆ ಸ್ವಸ್ಥ ಮನುಷ್ಯನ ಮನಸ್ಸನ್ನು ಹಾಳು ಮಾಡುವುದು. ಕಡೆಗೆ ರೋಸಿದ ಆತ ಕ್ರಮೇಣ ಮಾನಸಿಕ ಗುಲಾಮನಾಗುತ್ತಾನೆ. ಇದನ್ನು ಶತಮಾನಗಳ ಹಿಂದೆಯೇ ಮನುಧರ್ಮ ಶಾಸ್ತ್ರದಡಿ ಅಧ್ಯಯನ ಮಾಡಿ ಪ್ರಯೋಗವನ್ನೂ ಮಾಡಿ ಯಶಸ್ವಿಯಾಗಿರುವುದು. ಆದರೆ ಕಾಲ ಬದಲಾಗಿದೆ. ಇತಿಹಾಸದ ಚಕ್ರ ತಿರುಗುತ್ತಿದೆ. ಆದ್ದರಿಂದ ಚೆಡ್ಡಿಗಳ ಹುನ್ನಾರ ಮೊದಲು ಈ ದೇಶದ ಪ್ರಜ್ಞಾವಂತರಾದ ಸಾಹಿತಿಗಳು ಕಲಾವಿದರಿಗೆ ಅರಿವಾಗಿ ಅವರೆಲ್ಲಾ ತಿರುಗಿ ಬಿದ್ದಿದ್ದಾರೆ. ಈ ಪೈಕಿ ಚೆಡ್ಡಿಗಳ ಮನೆಯವರ ಮನಸ್ಸಿಗೂ ಲಗ್ಗೆಯಿಟ್ಟಿದ್ದ ಶಾರುಖ್‌ಖಾನ್ ಮತ್ತು ಅಮಿರ್‌ಖಾನ್ ಎಂಬ ಅಪ್ಪಟ ಕಲಾವಿದರು, ಈ ದೇಶದಲ್ಲೀಗ ಅಂತರ್ಗಾಮಿಯಾಗಿ ಆತಂಕ ಹುಟ್ಟಿಸುವಂತಹ ಅಸಹಿಷ್ಣುತೆ ಹರಿದಾಡುತ್ತಿರುವುದನ್ನು ಗುರುತಿಸಿ, ತಮ್ಮ ಜೀವನ್ಮರಣದ ಪ್ರಶ್ನೆಯೆಂಬಂತೆ ತಿರುಗಿ ಬಿದ್ದಿದ್ದಾರೆ. ಇದಕ್ಕೆ ಉತ್ತರ ಕೊಡಲಾಗದ ಚೆಡ್ಡಿಗಳು ಎಂದಿನಂತೆ ಪ್ರತಿರೋಧವೊಡ್ಡಿದೆ. ಕ್ಷುದ್ರವಾಗಿ ನಡೆದುಕೊಳ್ಳುತ್ತಿವೆ. ದೇಶದ್ರೋಹದ ಆಪಾದನೆ ಮಾಡುತ್ತಿವೆ. ಬೆದರಿಕೆಯೊಡ್ಡಿ ಬಗ್ಗಿಸಲು ಯತ್ನಿಸುತ್ತಿವೆ. ಭಂಡ ಬಾಳಿನ ಚೆಡ್ಡಿಗಳಿಗೆ ಉಳಿದಿರುವುದು ಅದೊಂದೇ ಮಾರ್ಗವಂತಲ್ಲ, ಥೂತ್ತೇರಿ!!


* * *

ಪ್ರಪಂಚದ ಗಮನ ಸೆಳೆದಿರುವ ಈ ಕಲಾವಿದರ ಆತಂಕ ಹೊಸದೇನಲ್ಲ. ಶಾರದೆಯನ್ನು ಹರಿಯುವ ಗಂಗೆಯಂತೆ, ಮಹಾನದಿಯಂತೆ ಆ ನದಿಗೆ ಯಾರಾದರೂ ಬಟ್ಟೆ ತೊಡಿಸಲು ಸಾಧ್ಯವೇ ಎಂದು ಶಾರದೆಯನ್ನು ಬೆತ್ತಲೆ ಚಿತ್ರಿಸಿದ ಕಲಾವಿದ ಹುಸೇನ್ ಪ್ರತಿಭೆಯನ್ನು ಗುರುತಿಸಲಾಗದ ಚೆಡ್ಡಿಗಳು "ಮುಸ್ಲಿಮರ ಹುಸೇನ ಶೃಂಗೇರಿ ಶಾರದೆಯನ್ನು ಬೆತ್ತಲೆ ಚಿತ್ರಿಸಿದ್ದಾನೆ. ಅರಿಶಿಣ, ಕುಂಕುಮ ಶೋಭಿತೆಯಾಗಿ, ರೇಷ್ಮೆ ಸೀರೆ ತೊಟ್ಟು, ಚಿನ್ನದ ಕಿರೀಟ, ವಜ್ರದ ಓಲೆ, ಕಾಸಿನ ಸರ, ಡಾಬು, ಕಾಲುಂಗುರ, ಕೈ ಉಂಗುರ ಏನೂ ಇಲ್ಲದ ಶಾರದೆ ಚಿತ್ರವನ್ನು ಹಿಂದೂ ದೇವತೆಗೆ ಅವಮಾನ ಮಾಡಲೆಂದೇ ಚಿತ್ರಿಸಿದ್ದಾನೆ" ಎಂದು ಬೊಬ್ಬೆಯಿಟ್ಟು ದೇಶದ ತುಂಬ ಕೇಸು ಹಾಕಿದವು. ಇದರಿಂದ ನೊಂದ ಕಲಾವಿದ ಹುಸೇನ್ ದೇಶವನ್ನೇ ತೊರೆದು ಹೋಗಿ ವಿದೇಶದಲ್ಲಿ ಕಾಲವಾದರು. ಈಗಲೂ ಈ ದೇಶದ ಕಲಾವಿದರು ಕಾಲ್ಕಿತ್ತರೆ ಚೆಡ್ಡಿಗಳಿಗೆ ಜಗತ್ತಿನ ಎದುರು ಮಾನ ಹೋದಂತಾಗುವುದಿಲ್ಲ. ಮಾನ ಇದ್ದರೆ ತಾನೆ ಹೋಗುವುದು ಎಂದು ಚೆಡ್ಡಿಗಳನ್ನು ಅರ್ಥಮಾಡಿಕೊಂಡವರ ಅಭಿಪ್ರಾಯವಾಗಿದೆಯಲ್ಲಾ, ಥೂತ್ತೇರಿ!!

* * *

ದೇಶದ ತುಂಬೆಲ್ಲ ಹರಡಿರುವ ಅಸಹಿಷ್ಣುತೆ ನಮ್ಮ ಪ್ರಾದೇಶಿಕ ಪಾರ್ಟಿಯಾದ ಜೆಡಿಎಸ್‌ಗೂ ಅಂಟಿದೆಯಂತಲ್ಲಾ. ಯಾರ ಸಹಾಯ ಸಹಕಾರವೂ ಇಲ್ಲದೆ ಪಾರ್ಟಿಯನ್ನ ಅಧಿಕಾರಕ್ಕೆ ತಂದೇ ತರುತ್ತೇನೆಂದು ಕುಮಾರಣ್ಣ ಹಟ ತೊಟ್ಟಿರುವಾಗಲೇ ಭಾರತದ ಮಾಜಿ ಪ್ರಧಾನಿಗಳು ಪಿತೂರಿ ಕೆಲಸಕ್ಕೆ, ಹೇಳಿ ಮಾಡಿಸಿದಂತಿರುವ ಜಮೀರ್ ಅಹಮದ್‌ನನ್ನು ಕಾಂಗ್ರೆ ಲೀಡರುಗಳ ಹತ್ತಿರಕ್ಕೆ ಚೌಕಾಸಿ ವ್ಯಾಪಾರಕ್ಕೆ ಕಳಿಸಿದರಂತಲ್ಲಾ. ಇದರಿಂದ ಕೆಂಡಮಂಡಲವಾಗಿ, ತೊಳೆದ ಕೆಂಡದಂತಾದ ಕುಮಾರಣ್ಣ ತಮ್ಮ ಅಧ್ಯಕ್ಷ ಪದವಿಯನ್ನೇ ದೇವೇಗೌಡರ ಕಾಲ ಬಳಿ ಬಿಸಾಡಲು ತೀರ್ಮಾನಿಸಿದರಂತಲ್ಲಾ. ದೂರದೃಷ್ಟಿಯ ಕೊರತೆಯಿರುವ ಕುಮಾರಣ್ಣ ಬಿಹಾರದಲ್ಲಿ ಲಲ್ಲೂ ಮಕ್ಕಳು ಪಡೆದ ಪವರಿನ ಬಗ್ಗೆ ಯೋಚಿಸುವುದು ಒಳ್ಳೆಯದು. ಕಾಲಮಾನದ ಒತ್ತಡದಿಂದಲೇ ಮಹಾಮೈತ್ರಿಗಳು ಜರುಗುತ್ತಿವೆ. ನಮ್ಮ ವರ್ಚಸ್ಸುಗಳು ಮಸುಕಾಗಿರುವುದನ್ನು ಅರಿಯಬೇಕೆಂಬ ಸಲಹೆಯನ್ನು ದೇವೇಗೌಡರಿನ್ನು ಕೊಟ್ಟಿಲ್ಲವಂತಲ್ಲ, ಥೂತ್ತೇರಿ!!! ■

ಹಾವೇರಿ: ಖಾದ್ರಿಯ ಹಫ್ತಾ ಪಾಲಿಟಿಕ್ಸ್


ಖಾದ್ರಿ

ಸತತ ಮೂರು ಬಾರಿ ಹೀನಾಯ ಸೋಲು ಕಂಡಿರುವ ಶಿಗ್ಗಾಂವಿಯ ಮಾಜಿ ಶಾಸಕ ಅಜ್ಜಂಫೀರ ಎಸ್ ಖಾದ್ರಿ ಹಫ್ತಾ ವಸೂಲಿಯಲ್ಲಿ ನಾನೇ ಡಾನ್ ಎನ್ನುತ್ತಿದ್ದಾನೆ. ಈತನ ರಣಹಸಿವಿನಿಂದ ಬೇಸತ್ತ ಪಕ್ಷದ ಪ್ರಮುಖ ಮುಖಂಡರಲ್ಲಿ ಮುಕ್ಕಾಲು ಪಾಲು ಜನ ಬೇರೊಂದು ಗುಂಪು ಕಟ್ಟಿಕೊಂಡು ನಮ್ಮದೇ ಮೂಲ ಕಾಂಗ್ರೆಸ್; ಖಾದ್ರಿಯದು ವಸೂಲಿ ಕಾಂಗ್ರೆಸ್ ಎನ್ನುತ್ತಿದ್ದಾರೆ.


ಹೌದು... ಒಂದು ಕಾಲದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಕಾಂಗ್ರೆಸ್ ಪಕ್ಷದ ಗಟ್ಟಿ ನೆಲ ಎನಿಸಿಕೊಂಡಿದ್ದ ಶಿಗ್ಗಾಂವಿಯಲ್ಲಿಂದು ಖಾದ್ರಿಯ ಕರೆನ್ಸಿ ದಾಹದಿಂದ ನೆಲಕಚ್ಚಿದ್ದಲ್ಲದೆ, ಕೆಟ್ಟು ಕೆರಹಿಡಿದಂತಾಗಿದೆ. ಧರ್ಮಸಿಂಗ್ ಸರ್ಕಾರದ ಅವಧಿಯಲ್ಲಿ ಅಲ್ಪ ಕಾಲ ವಸೂಲಿ ದಂಧೆಗಿಳಿದು ಹೆಸರು ಕೆಡಿಸಿಕೊಂಡಿದ್ದ ಈತ ಯಡ್ಡಿ ಸರ್ಕಾರದ ಅವಧಿಯಲ್ಲಿ ಅಧಿಕಾರಿಗಳಿಂದ ತಿಂಗಳೊಂದಕ್ಕೆ 10 ಲಕ್ಷ ಕ್ಯಾಶ್ ಮಾಡುವ ಖಾದ್ರಿ ಹಫ್ತಾ ವಸೂಲಿ ದಂಧೆ ಖಾಕಿಗಳಿಗಿಂತಲೂ ಜೋರಾಗಿದೆ. ಇಲಾಖೆಯವರು ದರ ನಿಗದಿಯಾಗಿದೆ. ಜಿ.ಪಂ., ಲೋಕೋಪಯೋಗಿ, ಕಂದಾಯ, ಅಬಕಾರಿ, ಪೊಲೀಸ್ ಇಲಾಖೆಯಿಂದಲೇ ಅತಿಹೆಚ್ಚು ವಸೂಲಿ ನಡೆದಿದ್ದು ಈತನಿಗೆ ಕೊಡುವ ಹಫ್ತಾವನ್ನು ಈ ಎಲ್ಲ ಇಲಾಖೆ ಅಧಿಕಾರಿಗಳು ಮುಲಾಜಿಲ್ಲದೆ ಜನರಿಂದ ಕಸಿಯುತ್ತಿದ್ದಾರೆ.

ಹಣ ಕೊಟ್ಟರೆ ಏನೆಲ್ಲಾ ಹೆಗಲ ಮೇಲೆ ಎಂಬ ಉತ್ತರ ಕರ್ನಾಟಕದ ಗಾದೆಯನ್ನು ಜಾರಿಗೆ ತಂದಿರುವ ಖಾದ್ರಿಯ ಅಧಿಕಾರದ ದರ್ಪಕ್ಕೆ ಪಕ್ಷದ ಮುಖಂಡರಿಂದಲೂ ಬ್ರೇಕ್ ಹಾಕುವ ಪ್ರಯತ್ನ ನಡೆದಿಲ್ಲ, ಜಿಲ್ಲೆಯ ಕಾಂಗ್ರೆ ಮುಖಂಡರು ಇರುವ ಒಬ್ಬ ಅಲ್ಪಸಂಖ್ಯಾತ ಮಾಜಿ ಶಾಸಕನನ್ನು ಕೆದಕಿ ರಾಜಕಾರಣದಲ್ಲಿ ಒದ್ದಾಡುವುದಕ್ಕಿಂತ ಮೌನವಾಗಿರೋದೆ ಲೇಸು ಎನ್ನುವ ನಿರ್ಧಾರಕ್ಕೆ ಬಂದಿರುವಂತಿದೆ. ಹೊಸ ಮಂತ್ರಿ ಮನೋಹರ ತಹಸೀಲ್ದಾರ, ಶಾಸಕರಾದ ಕೆ.ಬಿ.ಕೋಳಿವಾಡ ಮತ್ತು ಬಸವರಾಜ ಶಿವಣ್ಣನವರ ಈತನ ಹಸಿವಿನ ವಸೂಲಿ ಕಂಡು ದಂಗಾಗಿದ್ದಾರೆ. ಕ್ಷೇತ್ರದ ಮುಖಂಡರು ಲಿಖಿತ ದೂರು ನೀಡಿದ್ದರೂ ತಮ್ಮ ಅಸಹಾಯಕತೆ ತೋರಿಸಿಕೊಂಡು 'ಹೋಗಲಿ ಬಿಡು ತಿನ್ನವಲ್ಲನ್ಯಾಕ್.. ಎಷ್ಟು ದಿನ ತಿನ್ನತಾನ' ಎನ್ನುತ್ತಿದ್ದಾರೆ. ಇದು ಹೀಗೇ ಮುಂದುವರೆದರೆ, ಮೊದಲೇ ಹಿಂದೆ ತಾನು ಗೆದ್ದಷ್ಟೇ ಮತಗಳ ಅಂತರದಲ್ಲಿ ಸೋಲುಂಡ ಖಾದ್ರಿ ಮತ್ತೆ ಗೆಲ್ಲುವ ಮಾತೇ ಇಲ್ಲದಂತಾಯಿತು.

ಸಿಂಧೂರರ ನಂತರ ಕ್ಷೇತ್ರಕ್ಕೆ ಎಂಟ್ರಿ ಕೊಟ್ಟ ಬಸವರಾಜ ಬೊಮ್ಮಾಯಿ ಎದುರು ಖಾದ್ರಿ ಆಟ ಠುಸ್ ಆಗಿದ್ದಂತೂ ಸತ್ಯ. ಈ ಹಿಂದಿನ ಎರಡು ಅಸೆಂಬ್ಲಿ ಚುನಾವಣೆಯಲ್ಲೂ 12 ಸಾವಿರಕ್ಕೂ ಹೆಚ್ಚು ಓಟುಗಳಿಂದ ಸೋತು ತಾನು ಸೋಲಿನ ಸರದಾರ ಎಂದು ಪ್ರೂವ್ ಮಾಡಿರುವ ಖಾದ್ರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಸಂಪೂರ್ಣ ಹಳ್ಳ ಹಿಡಿಯುವಂತೆ ಮಾಡಿಟ್ಟಿದ್ದಾನೆ.


ಸ್ಥಳೀಯ ತಾಲೂಕು, ಜಿಲ್ಲಾ ಪಂಚಾಯತಿ ಸೇರಿದಂತೆ ಪುರಸಭೆಗಳಲ್ಲಿ ಪಕ್ಷ ಅಧಿಕಾರಕ್ಕೆ ಬರದಂತಹ ಸ್ಥಿತಿ ನಿರ್ಮಿಸಿದ್ದಾನೆ. ಈಗಲೂ ತಾಲೂಕು ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಯಾವೊಬ್ಬ ಕಾಂಗ್ರೆಸ್ ಸದಸ್ಯನೂ ಇಲ್ಲ. ಮಿಲಾಪಿ ರಾಜಕಾರಣ ಮಾಡಿ ಕೊನೆಗಳಿಗೆಯಲ್ಲಿ ಎದುರಾಳಿಗಳೊಂದಿಗೆ ಡೀಲ್ ಕುದುರಿಸುವ ಈತನ ಹೊಲಸುತನದಿಂದ ಪಕ್ಷದ ಕಾರ್ಯಕರ್ತರು ಕಳೆದೆಂಟು ವರ್ಷಗಳಿಂದ ಅಧಿಕಾರದಿಂದ ವಂಚಿತರಾಗುವಂತಾಗಿದೆ.


ಕಳೆದ ಬಾರಿಯ ಜಿ.ಪಂ. ಚುನಾವಣೆಯಲ್ಲಿ ಬಿಜೆಪಿಯ ಡಮ್ಮಿ ಅಭ್ಯರ್ಥಿ ಎದುರು ಕಾಂಗ್ರೆಸ್‌ನ ಹಿರಿಯ ನಾಯಕ ಶಿವಾನಂದ ರಾಮಗೇರಿಯವರು ಸೋಲುವಂತೆ ಮಾಡಿದ್ದನ್ನು ಕ್ಷೇತ್ರದ ಕಾಂಗ್ರೆಸ್ಸಿಗರು ಇಂದಿಗೂ ಮರೆಯದೆ ಖಾದ್ರಿಗೆ ಹಿಡಿಶಾಪ ಹಾಕುತ್ತಾರೆ. ಸತತ ಮೂರು ಬಾರಿ ಅಸೆಂಬ್ಲಿ



ಮುನ್ನಾ ಗುಲ್ಮಿ


ಮುನ್ನಾ ಉರ್ಫ ಮಹಮದ್‌ಗೌಸ ಗುಲ್ಮಿ ಬಹಿ... ಖಾದ್ರಿ ವಿರೋಧಕ್ಕೆ ನಿಂತಿದ್ದಾರೆ. ಇಲ್ಲಿಯವರೆಗೂ ... ಈ ಮಟ್ಟದ ವಿರೋಧ ಮತ್ತು ನೇತೃತ್ವ ವಹಿಸಿಕೊ... ಗುಲ್ಮಿಯ ಈ ಹೋರಾಟಕ್ಕೆ ಮೂಲ ಕಾಂಗ್ರೆಸ್ಸಿಗರು ... ಸೂಚಿಸಿ ಒಬ್ಬೊಬ್ಬರಾಗಿ ಪರ್ಯಾಯ ಗ... ಕಾಣಿಸಿಕೊಳ್ಳುತ್ತಿದ್ದಾರೆ. ಒಂದು ಅರ್ಥದಲ್ಲಿ ಕ್ಷೇತ್ರದ ... ಕಾಂಗ್ರೆಸ್ ಅಧಿಪತಿ ಮುನ್ನಾಗುಲ್ಮಿ ... ಬಿಂಬಿಸಲಾಗುತ್ತಿದೆ. ಈ ಬೆಳವಣಿಗೆ ಉತ್ತಮ... ಕಂಡುಕೊಂಡಿದ್ದೇ ಆದಲ್ಲಿ ಕ್ಷೇತ್ರದ ಕಾಂಗ್ರೆಸ್ಸಿಗೆ ... ಬರುವುದಂತೂ ನಿಶ್ಚಿತ.


ಕೆಸಿಸಿ ಬ್ಯಾಂಕಿನ ಉಪಾಧ್ಯಕ್ಷ ಸವಣೂರಿನ... ಪಾಟೀಲ ಸೈಲೆಂಟಾಗಿ ಸೈಡ್ ಹಚ್ಚಿದ್ದಾ... ಪಂಚಮಸಾಲಿ ಸಮಾಜದ ಕ್ಷೇತ್ರದ ಮುಖಂ... ಜಿ.ಪಂ.ಉಪಾಧ್ಯಕ್ಷ ಎನ್.ಸಿ.ಪಾಟೀಲ, ಪಾಲಾಕ್ಷಪ್ಪ...


ಎನ್.ಸಿ. ಪಾಟೀಲ್


ವಿ.ವೈ. ಪಾಟೀಲ್


ಗುರುನಗೌಡ ಪಾಟೀಲ್



ಬೊಮ್ಮಾಯಿ


ಶಿವನಂದ ರಾಂಗಿರಿ

ಯಾರ ಕಣ್ಣಿಗೂ ಕಾಣಿಸುತ್ತಿರಲಿಲ್ಲ. ಆದರೆ, ರಾಜ್ಯದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತಿದ್ದಂತೆ ಸೋತ ಮುಖ ಹೊತ್ತುಕೊಂಡು ಕಂಡಕಂಡಲ್ಲಿ ಹಣ ವಸೂಲಿಗೆ ಕೈ ಚಾಚಲು ಶುರುವಿಟ್ಟಿದ್ದಾನೆ. ಟ್ರಾನ್ಸ್‌ಫರ್ ದಂಧೆಯಲ್ಲಂತೂ ಮಿತಿಮೀರಿ ಅಧಿಕಾರಿಗಳಿಗೆ ಕಾಲು ಕೊಟ್ಟಿದ್ದಾನೆ. ಪೋಸ್ಟಿಂಗ್ ಮಾಡಿಸುವಾಗಲೆ ರೇಟು, ವ್ಯಾಲಿಡಿಟಿ ಟೈಂ ಫಿಕ್ಸ್ ಮಾಡುತ್ತಿದ್ದಾನೆ. ಹೀಗಾಗಿ ಇಲ್ಲಿಗೆ ಬರುವ ಅಧಿಕಾರಿಗಳು ಯಾವಾಗ ಕಾಲ್ಕಿತ್ತೆವೋ ಎಂದು ಕಾಯುತ್ತಿದ್ದಾರೆ.

ಎಲ್ಲ ಪಕ್ಷಗಳಲ್ಲಿ ಹೇಸಿಗೆ ರಾಜಕಾರಣ ಮಾಡಿ ಹೊರದಬ್ಬಿಸಿಕೊಂಡಿರುವ ನಾಲ್ಕು ಜನ ನತ್ತಿನ ಮುಖಂಡರನ್ನು ಬೆನ್ನಿಗಿಟ್ಟುಕೊಂಡು ದಿನದ ಸೂರ್ಯೋದಯದಿಂದಲೇ ಲೂಟಿಗೆ ತೆರಳುವುದನ್ನು ನಿತ್ಯದ ಕಾಯಕ ಮಾಡಿಕೊಂಡಿರುವ ಅಜ್ಜಂಫೀರನ ಪುರಾಣ ಪುಟ್ಟಮಕ್ಕಳಿಗೂ ಗೊತ್ತು ಎನ್ನುವಷ್ಟರ ಮಟ್ಟಕ್ಕೆ ಬೆಳೆದುನಿಂತಿದೆ.

ಶಿಗ್ಗಾಂವಿ, ಸವಣೂರು, ಬಂಕಾಪುರದಂತಹ ಪ್ರಮುಖ ಕೇಂದ್ರ ಹಾಗೂ ತಡಸ, ಹುಲಗೂರಿನಂತಹ ದೊಡ್ಡ ಗ್ರಾಮದಲ್ಲಿನ ನೌಕರಿದಾರರು ಸೇರಿದಂತೆ ತಾಲೂಕು ಮಟ್ಟದ ನೆಲೆ ಇಲ್ಲದೆ ಶಿಗ್ಗಾಂವಿಯಿಂದ ದೂರಾಗುತ್ತಿರುವ ಕಾಂಗ್ರೆಸ್‌ಗೆ ಖಾದ್ರಿಯಿಂದಲೆ ಇನ್ನಷ್ಟು ಕೇಡುಗಾಲ ಬಂದರೂ ಆಶ್ಚರ್ಯವಿಲ್ಲ...


ಮನೋಹರ್ ತಹಶೀಲ್ದಾರ್

ಕಾಲ್ಕೀಳುವ ಮುನ್ನ ಕರೆನ್ಸಿ ಬ್ಯಾಟಿ

ಅಜ್ಜಂಫೀರ ಖಾದ್ರಿ ಮೂಲ ಕಾಂಗ್ರೆಸ್ಸಿಗನೇನಲ್ಲ. ಈ ಮೊದಲು ಆತ ದೇವೇಗೌಡರ ಜನತಾದಳದಲ್ಲಿದ್ದ ಎಪಿಎಂಸಿ ನಿರ್ದೇಶಕನೂ ಆಗಿದ್ದ. ಅಲ್ಪಸಂಖ್ಯಾತರೇ ನಿರ್ಣಾಯಕರು ಎನ್ನುವ ಸ್ಥಿತಿ ಕ್ಷೇತ್ರದಲ್ಲಿದ್ದಾಗ ಆಗಿನ ಶಾಸಕ ಮಂಜುನಾಥ ಕುನ್ನೂರ ವಿರುದ್ಧದ ಅಲೆ ಮತ್ತು ಬಿಜೆಪಿಯ ಪ್ರಬಲ ಅಭ್ಯರ್ಥಿಯಾಗಿದ್ದ ಎಸ್.ಬಿ.ಪಾಟೀಲರ ಮಧ್ಯದ ಜಿದ್ದಾಜಿದ್ದಿಯಲ್ಲಿ ಏಳುನೂರಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಖಾದ್ರಿ ಜಾತ್ಯತೀತ ಜನತಾದಳದಿಂದ ಶಾಸಕನಾಗಿ 1998 ರಲ್ಲಿ ಆಯ್ಕೆಯಾಗಿದ್ದ.

ಮೆಣಸಿನಕಾಯಿ ವ್ಯಾಪಾರ ಮತ್ತು ಲಾರಿ ಟ್ರಾನ್ಸ್‌ಪೋರ್ಟ್ ದಂಧೆಯಲ್ಲಿದ್ದ ಖಾದ್ರಿಗೆ ರಾಜಕಾರಣದ ಗಂಧಗಾಳಿ ಗೊತ್ತಿರಲಿಲ್ಲ. ಈಗಿನ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಗರಡಿಯಲ್ಲಿ ಬೆಳೆದು ಸ್ವಲ್ಪದಿನದಲ್ಲೇ ಅವರಿಗೂ ತನ್ನ ಹೀನಬುದ್ಧಿ ತೋರಿಸಿದ್ದ ಖಾದ್ರಿ. ಆಮೇಲೆ ಕಾಂಗ್ರೆಸ್ ಸೇರಿ ಅಧಿಕಾರದ ರುಚಿ ಉಂಡುಬಿಟ್ಟ. ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಈ ಭಾಗದ ಅಲ್ಪಸಂಖ್ಯಾತ ಶಾಸಕ ಎಂದು ಗುರ್ತಿಸಿಕೊಂಡು ಸರ್ಕಾರದಲ್ಲಿ ಕ್ಷೇತ್ರ ಅಭಿವೃದ್ಧಿ ಮಾಡಿದ್ದಕ್ಕಿಂತ ಲೂಟಿ ಮಾಡಿದ್ದೇ ಹೆಚ್ಚು.

ಆಗಲೇ ಪೀರಾನ ರಾಜ್ಯದಲ್ಲಿ ಉಂಡವನೇ ಜಾಣ ಎಂಬ ಸ್ಲೋಗನ್ ಚಾಲ್ತಿಗೆ ಬಂದದ್ದು. ಶಾಂತವಾಗಿದ್ದ ಕ್ಷೇತ್ರದಲ್ಲಿ ಜಾತಿಯ ವಿಷಬೀಜ ಬಿತ್ತಿದ ಆರೋಪ ಕೂಡಾ ಖಾದ್ರಿಯ ಮೇಲಿದೆ. ಅಲ್ಲಿಯವರೆಗೆ ಮುನ್ಸಿಪಾಲಿಟಿ ಪಾಲಿಟಿಕ್ಸ್‌ಗೆ ಸೀಮಿತವಾಗಿದ್ದ ರಾಜಶೇಖರ ಸಿಂಧೂರನನ್ನು ಅಸೆಂಬ್ಲಿ ಚುನಾವಣೆವರೆಗೂ ಕರೆತಂದಿದ್ದು ಇದೇ ಖಾದ್ರಿ ಎಂಬುದು ಕೂಡಾ ಸತ್ಯ. ಶಾಸಕನಾಗಿ ತನ್ನ ಕೆಲಸ ಮಾಡದೆ, ಪುರಸಭೆಯಲ್ಲೂ ಕೈಯಾಡಿಸಲು ಹೋಗಿ ಕ್ಷೇತ್ರದ ಜನರ ಕೆಂಗಣ್ಣಿಗೆ ಗುರಿಯಾಗಿ ಸಿಂಧೂರ ರಾಜಣ್ಣನ ವಿರುದ್ಧ ಈ ಚುನಾವಣೆಯಲ್ಲಿ ಸೋತಿರುವ ತನಗೆ ಮುಂದೆ ಕಾಂಗ್ರೆಸ್ಸಿನಲ್ಲಿ ಅವಕಾಶವಿಲ್ಲ ಎಂಬುದನ್ನು ಅರಿತುಕೊಂಡು ಸರ್ಕಾರವಿರುವವರೆಗೂ ಹಫ್ತಾ ವಸೂಲಿಯಲ್ಲಿ ದುಡ್ಡು ಮಾಡಿಕೊಂಡು ಚುನಾವಣೆ ಸಂದರ್ಭದಲ್ಲಿ ಬೇರೆ ಪಕ್ಷಕ್ಕೆ ಹಾಕುವ ಸ್ಕೆಚ್ ಖಾದ್ರಿ ಹಾಕಿದ್ದಾನೆ ಎಂಬ ರೂಮರ್ ಶಿಗ್ಗಾಂವಿಯ ಪ್ಯಾಟೆಯಲ್ಲಿ ಹರಿದಾಡುತ್ತಿದೆ. ಹೀಗಾಗಿ ಮೂಲ ಕಾಂಗ್ರೆಸ್ಸಿಗರನ್ನು ಸೈಡಿಗಿಟ್ಟು ಹೊಸ ಮುಖಗಳೊಂದಿಗೆ ಬಿಂದಾಸಾಗಿ ವಸೂಲಿಗಿಳಿದಿದ್ದಾನೆ. ಇವನ ಆಟಾಟೋಪಗಳಿಂದ ಬೇಸತ್ತ ಹಳೆಯ ಮೂಲ ಕಾಂಗ್ರೆಸ್ಸಿಗರು ವರಿಷ್ಠರಿಗೆ ಹಲವಾರು ಬಾರಿ ದೂರಿದರೂ, ಲಿಖಿತ ಮನವಿ ನೀಡಿದರೂ ಕ್ರಮ ಜರುಗಿಸದಿದ್ದರಿಂದ ಬೇಸತ್ತು ಹೊಸ ತಂಡಕ್ಕೆ ಜನ್ಮ ನೀಡಿದ್ದಾರೆ. ಈ ಎಲ್ಲ ಬೆಳವಣಿಗೆಯಿಂದ ಬೆದರಿರುವ ಖಾದ್ರಿ ಬೆಳಗ್ಗೆಯಿಂದ ಶಿಗ್ಗಾಂವಿ ಐಬಿ ಸೇರಿದರೆ, ಸಂಜೆನೆ ಹೊರಬರುವುದು. ಇಲ್ಲಾ ಹುಲಗೂರಿನ ತನ್ನ ಮನೆ, ಅಥವಾ ಹುಬ್ಬಳ್ಳಿಯ ತನ್ನ ಟ್ರಾನ್ಸ್‌ಪೋರ್ಟ್ ಆಫೀಸಿನಲ್ಲಿ ಡೀಲ್ ಕುದುರಿಸುತ್ತಾ ಕಾಲ ನೂಕುತ್ತಿದ್ದಾನೆ. ಪಕ್ಷ ಬಿಡುವುದರೊಳಗಾಗಿ ಭರ್ತಿ ಕಾಸು ಮಾಡಿಕೊಂಡೆ ತೀರೇನು ಎಂಬುದೊಂದೆ ಅಜ್ಜಂಫೀರನ ಪಣವಾಗಿದೆ.


ಒಡೆದು ಹೋಳಾಯಿತು

ಶಿಗ್ಗಾಂವಿಯಲ್ಲೀಗ ಮೂಲ ಕಾಂಗ್ರೆಸ್ಸಿಗರ ನೇತೃತ್ವದಲ್ಲಿ ಕಳೆದೊಂದು ತಿಂಗಳಿನಿಂದ ಸದ್ದಿಲ್ಲದೆ ಸಂಘಟನೆ ನಡೆಯುತ್ತಿದೆ. ಕಾಂಗ್ರೆಸ್ ಬಚಾವ್ಹೋ.. ಖಾದ್ರಿ ಹಟಾವ್ಹೋ.. ಎಂಬ ಸ್ಲೋಗನ್ ಹೊರಬಿದ್ದಿದೆ. ಹತ್ತಾರು ವರ್ಷಗಳಿಂದ ಪಕ್ಷಕ್ಕಾಗಿ ದುಡಿದವರನ್ನು ಮೂಲೆಗುಂಪು ಮಾಡುವ ಖಾದ್ರಿಯ ಸಂಚಿಗೆ ಬೇಸತ್ತ ಅನೇಕರು ಒಂದಾಗುತ್ತಿದ್ದಾರೆ. ಈ ಕೆಲಸ ಹಿಂದೇ ಆಗಿದ್ದರೆ ಪಕ್ಷ ಇಂದು ಜಿಲ್ಲೆಯಲ್ಲಿ ಅಧಿಕಾರದಲ್ಲಿರುತ್ತಿತ್ತು.

ಪಕ್ಷದ ನಿಷ್ಠಾವಂತರನ್ನು ಅಧಿಕಾರದಿಂದ ವಂಚಿತರನ್ನಾಗಿಸಿ ವಿರೋಧಿಗಳಿಂದ ಡೀಲ್ ಕುದುರಿಸಿಕೊಳ್ಳುವ ಖಾದ್ರಿ ಜಾಯಮಾನಕ್ಕೆ ಬೇಸತ್ತು ಅವರದೇ ಸಮಾಜದ ತಾಲೂಕಿನ ಮುಖಂಡ ಬಂಕಾಪುರ, ಪುರಸಭೆಯ ಮಾಜಿ ಅಧ್ಯಕ್ಷ

ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ... ಬಾಗೂರ, ಅಸೆಂಬ್ಲಿ ಟಿಕೆಟ್ ರೇಸಿನಲ್ಲಿದ್ದ ... ವಿ.ವೈ ಪಾಟೀಲ, ಮಾಜಿ ಜಿ.ಪಂ. ಸದಸ್ಯ ಪ್ರದಿ... ಗಿರಡ್ಡಿ, ಜಿಲ್ಲಾ ಕಾಂಗ್ರೆ ಪ್ರ.ಕಾರ್ಯದರ್ಶಿ ... ಪಾಟೀಲ, ರಾಜ್ಯ ಎಸ್.ಟಿ ಘಟಕದ ಕಾರ್ಯದ... ಹಾದಿಮನಿ, ಕುರುಬ ಸಮಾಜದ ಮುಖಂಡ... ರಾಮಗೇರಿ, ಖಾದ್ರಿಯ ಬಲಗೈ ಬಂಟರಾಗಿ... ಸಮಾಜದ ಮುಖಂಡ ಸುಧೀರ ಲಮಾಣಿ... ಕಾರ್ಯಕರ್ತ ಪ್ರಕಾಶ ಬಂಕಣ್ಣವರ ಶಿಗ್ಗಾಂವಿಯ... ಗುಂಪಿನಲ್ಲಿ ಗುರ್ತಿಸಿಕೊಂಡರೆ, ಸವಣೂರಿನಿಂದ... ಜಕಣಿ, ಅಲ್ಲಾದೀನ ಮನಿಯಾರ, ಮಾಜಿ ಜಿ... ಆನಂದಪ್ಪ ಅಕ್ಕೂರ, ಬಂಕಾಪುರದಲ್ಲಿ ಇಸ್ಮಾ... ದೊಡ್ಡಮನಿ, ಶಾಂತವೀರಯ್ಯ ಗಚ್ಚಿನಮಠ... ರಾಣೋಜಿಯಂತಹ ಪ್ರಮುಖ ಮುಖಂಡ... ಕಾಂಗ್ರೆಸ್ ಕಟ್ಟಲು ಮುಂದಾಗಿದ್ದಾರೆ.

ಕಾಂಗ್ರೆಸ್‌ನ ಗಟ್ಟಿನೆಲ ಎನಿಸಿಕೊಂಡಿದ್ದ ಶಿ... ಎರಡು ಬಾರಿ ಅಧಿಕಾರ ನಡೆಸಿದ ಮಾಜಿ ...


ಕುನ್ನೂರು

...ಮಂಜುನಾಥ ಕುನ್ನೂರರಂತಹ ನಾಯಕರು ಪಕ್ಷ ...ಹೊರತು ಪಟ್ಟಾ ವಸೂಲಿ ಕೆಲಸಕ್ಕೆ ಕೈಹಾಕಲಿಲ್ಲ. ...ಆಪ್ತಮಿತ್ರ ಖಾದ್ರಿ ಮೂರೂ ಬಿಟ್ಟವರಂತೆ ...ಫರ್ ದಂಧೆ ನಡೆಸುವ ಮೂಲಕ ಪಕ್ಷದ ನಾಯಕರನ್ನು ...ಗ್ಗಿಸುವಂತೆ ಮಾಡಿದ್ದಾರೆ ಎಂಬುದು ಮೂಲ ...ಸ್ಸಿಗರ ಆರೋಪವಾಗಿದೆ.

ಆರು ತಿಂಗಳ ಡೀಲ್

...ಾನ್ಸ್‌ಫರ್ ಮಾಡಿಸುವುದಕ್ಕೂ ಮುನ್ನ ಖಾದ್ರಿಯ ...ವಲ ಕಂಡೀಶನ್ನೇ ಆರು ತಿಂಗಳ ಡೀಲು. ಹೀಗೆ ...ಗೆ ಒಪ್ಪಿ ಬಂದವರು ನೌಕರಿ ಜೀವನಕ್ಕೂ ಬೇಸತ್ತು ...ಪ ಕಾಲ್ಕಿತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯ ...ಬಿ.ಬಿ. ಬಟ್ಟೂರ ಮೂರು ಲಕ್ಷ ಕೊಟ್ಟು ಕೊನೆಗೂ ...ಟ್ಟು ಇಂದಿಗೂ ಬೇರೆಡೆ ನಿಯುಕ್ತಿ ಇಲ್ಲದೆ ಖಾಲಿ ...ದ್ದಾರೆ. ಲಕ್ಷಕ್ಕೂ ಹೆಚ್ಚು ಹಣ ಸುರಿದಿದ್ದ ಕೃಷಿ ...ಕಾರಿ ಜಿ.ಬಸವರಾಜ, ಪುರಸಭೆ ಸಿ.ಒ ...ಎಚ್.ನಾಯ್ಕರ, ಚಿನ್ನಪ್ಪನವರ, ಬಂಕಾಪುರದ ...ೇಂದ್ರಕುಮಾರ ಕೇಳಿದಾಗಲೆಲ್ಲಾ ಹೊಸ ಬಟ್ಟೆ, ...ೖಲು, ಗಾಡಿಗೆ ಡೀಸೆಲ್ ಹಾಕಿ ಸುಸ್ತಾಗಿ ಇಲ್ಲಿಂದ ...ಗಿದ್ದಾರೆ.

...ನ್ನು ಸಿಡಿಪಿಒ ಪದ್ಮಾವತಿ ಎರಡು ಕಂತಿನಲ್ಲಿ ನಾಲ್ಕು ...ಕೊಟ್ಟು ಕಾಟ ತಾಳಲಾರದೆ, ತಿಮ್ಮಪ್ಪನ ಹುಂಡಿಗೆ ...ದ ಎಂದು ಹೇಳುತ್ತಾ ಬ್ಯಾಡಗಿಗೆ ಹೋಗಿದ್ದಾರೆ. ...ಅಧಿಕಾರಿ ಪಾಟೀಲ ಈತ ಕೇಳಿದಷ್ಟು ಕೊಡಲಾರದೆ ...ದೆ ಹಾರಿದ್ದಾರೆ. ಇಂದಿಗೂ ಖಾಲಿ ಇರುವ ಸಿಡಿಪಿಒ ... ಪಶು ಅಧಿಕಾರಿ ಪೋಸ್ಟ್‌ಗೆ ಯಾರೊಬ್ಬರೂ ...ತ್ತಿಲ್ಲ. ಅಷ್ಟೊಂದು ಕಾಸ್ಟ್ಲಿಯಾಗಿವೆ ಈ ಪೋಸ್ಟ್‌ಗಳು. ...ಕ್ಷ ಮಟ್ಟದ ಡೀಲ್‌ನಲ್ಲಿ ಇಲಾಖೆಗೆ ವಕ್ಕರಿಸಿರುವ ...ಎಸ್‌ಪಿ ವಿ.ಆರ್. ಬಿಸ್ನಳ್ಳಿ, ಪಿಡಬ್ಲ್ಯುಡಿಯ ಕಿತ್ತೂರ, ...ಸೀಲ್ದಾರ ರಮೇಶ ಕೋನರೆಡ್ಡಿ, ಶಿರಸ್ತೆದಾರ ರವಿ ...ವರ, ಮುಖ್ಯಾಧಿಕಾರಿ ರಾಜು ಬೋವಿಯಂತಹ ...ಾರಿಗಳು ಹಾಕಿದ ಹಣ ತೆಗೆಯಲು ಹಗಲುದರೋಡೆ ...ಬಿಟ್ಟಿದ್ದಾರೆ.

...ಎರಡೂ ತಾಲೂಕಿನ ತಾ.ಪಂ ಇಒಗಳಾದ ...ಎಸ್.ಬದರಿ, ಸುರೇಶ್ ಕುಂದೂರ, ಪಿಎಸ್‌ಐಗಳಾದ ...ಮೂಡ ಬಡಿಗೇರ, ಶಶಿಧರ, ಬಸವರಾಜ ಕಲ್ಲಮ್ಮನವರ, ...ದ ಡೀಲ್ ಮುಗಿಸಿಕೊಂಡು ಬಹಳ ದಿನ ಒಂದೇ ...ದಲ್ಲಿ ಠಿಕಾಣಿ ಹೂಡಿ ದಾಖಲೆ ಮಾಡಿದ್ದಾರೆ. ಈ ...ಯಿಂದ ಬೇಸತ್ತಿರುವ ಶಿಗ್ಗಾಂವಿ, ಸವಣೂರು, ...ಪುರದ ಜನತೆ ಕಾಂಗ್ರೆಸ್ ಪಕ್ಷ ಖಾದ್ರಿಯನ್ನು ...ಾಗ ಸೈಡಿಗಿಟ್ಟೀತು ಎಂದು ಕಾಯುತ್ತಿದ್ದಾರೆ.

ಅಧಿಕಾರ ಕೈತಪ್ಪಿಸಿದ

...ಪೂರ್ಣ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ...ಬಿದ್ದ ಬಂಕಾಪುರ ಪುರಸಭೆಯ ಸದಸ್ಯರಲ್ಲಿ ...ಭಿಪ್ರಾಯ ಸೃಷ್ಟಿಸಿ ಎರಡು ಗುಂಪುಗಳನ್ನು ಮಾಡುವ ...ಲಕ ಕಾಂಗ್ರೆಸ್‌ನಿಂದ ಅಧಿಕಾರ ಕೈತಪ್ಪುವಂತೆ ಮಾಡಿ ...ಪಿಗೆ ಹೆಲ್ಪ್ ಮಾಡಿದ ಖಾದ್ರಿ, ಬಿಜೆಪಿಯ ಹಾಲಿ ...ಯಕರೊಂದಿಗೆ ಮಿಲಾಪಿ ರಾಜಕಾರಣ ನಡೆಸಿದ್ದಾನೆ ... ಆರೋಪಗಳು ಬಲವಾಗಿವೆ. ಬಿಜೆಪಿಯ ಎಂಎಲ್‌ಸಿ ...ಮಣ್ಣ ಬೇವಿನಮರದ ಮನೆಗೆ ಆಗಾಗ ಭೇಟಿ ನೀಡಿ ...ಮಾಡುವ ರೂಢಿ ಈ ಸಾಹೇಬರದ್ದಾಗಿದೆ. ಕಳೆದ ... ಶಿಗ್ಗಾಂವಿ ಪುರಸಭೆಯಲ್ಲಿ ಮೂರು ಸದಸ್ಯರ ಹಣದ ...ಗೆ ಸಿಕ್ಕ ಅಧಿಕಾರವನ್ನು ನನ್ನಿಂದಲೇ ಸಿಕ್ತು ಎಂದು ...ಮು ಬಡಿದುಕೊಂಡ ಖಾದ್ರಿ ಡೀಲಾಗಿದ್ದ ಒಂಭತ್ತು ...ನ್ನು ಹಾಲಿ ಅಧ್ಯಕ್ಷ ಸದಾಶಿವಪ್ಪ ಕಂಕನವಾಡ ...ಮೂಲಕ ಕೊಡಿಸಿ ಫೋಜು ಕೊಟ್ಟು ಅಲ್ಲಿಂದ ಕಾಲ್ಕಿತ್ತ. ...ರಿಂದ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ...ಹಿರಂಗವಾದಂತಾಯಿತು. ಆದರೆ ಈ ಅಧಿಕಾರ ಸಿಕ್ಕಿದ್ದು ...ಲ ಕಾಂಗ್ರೆಸಿಗರ ಶ್ರಮದಿಂದ.

...ವರಿಷ್ಠರು ಗಮನ ಹರಿಸಬೇಕು

...ಖಾದ್ರಿಯ ರಣಹಸಿವಿನ ಹುಚ್ಚಾಟದಿಂದ ...ಸೊರಗುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಮತ್ತೆ ಜೀವ ತುಂಬುವ ...ವನ್ನು ಜಿಲ್ಲೆಯ ಹೊಸ ಮಂತ್ರಿ ಮನೋಹರ ...ತಹಸೀಲ್ದಾರ ಮಾಡಬೇಕಿದೆ. ಸ್ಥಳೀಯ ಮುಖಂಡ ಮಾಜಿ ...ಸಚಿವರುಗಳಾದ ಪ್ರೊ. ಐ.ಜಿ. ಸನದಿ ಮತ್ತು ಮಂಜುನಾಥ ...ರಿಂದ ನಡೆದಿರುವ ಬೆಳವಣಿಗೆ ಮತ್ತು ಆಗುತ್ತಿರುವ ...ಪಾತಗಳ ಕುರಿತು ಮಾಹಿತಿ ಪಡೆಯಬೇಕಿದೆ. ಒಡೆದ ...ಮನೆಯಾಗಿರುವ ಪಕ್ಷಕ್ಕೆ ಸ್ಪಷ್ಟ ದಿಕ್ಸೂಚಿ ತೋರಿಸದಿದ್ದರೆ ...ಇಂತೂ ಕಾಂಗ್ರೆಸ್ ಖತಂ ಮಾಡುವುದರಲ್ಲಿ ಎರಡು ...ಲ್ಲ, ಮೂಲ ಕಾಂಗ್ರೆಸಿಗರ ಮನವೊಲಿಸಿ ಪಕ್ಷ ...ಸದಿದ್ದರೆ, ಬಿಜೆಪಿಗಂತೂ ಕ್ಷೇತ್ರದಲ್ಲಿ ಮುಂಬರುವ ...ಪರಿಷತ್, ಜಿ.ಪಂ. ಮತ್ತು ತಾಲೂಕು ಪಂಚಾಯ್ತಿ ...ಚುನಾವಣೆಗಳಲ್ಲಿ ಡಬಲ್ ಪ್ರಾಫಿಟ್ ಗ್ಯಾರಂಟಿ.

■ ವರದಿಗಾರ

ಅಡ್ವೋಕೇಟ್ ಜನರಲ್ ರವಿವರ್ಮಕುಮಾರ್ ರಾಜೀನಾಮೆ ಸುತ್ತಮುತ್ತ


ಸಾಮಾಜಿಕ ನ್ಯಾಯ ನಿಷ್ಠೂರಿ, ಜನಪರ ಬದ್ಧತೆಯ ಹಿರಿಯ ನ್ಯಾಯಾಂಗ ಹೋರಾಟಗಾರ ರವಿವರ್ಮ ಕುಮಾರ್ ಅಡ್ವೋಕೇಟ್ ಜನರಲ್ ಎಂಬ ಹಂಗಿನ ಅರಮನೆಯಿಂದ ಹೊರನಡೆದಿದ್ದಾರೆ! ತಾವು ನಂಬಿದ ತತ್ವ ಸಿದ್ಧಾಂತಕ್ಕೆ ಧಕ್ಕೆ ಬರುತ್ತದೆಂಬಲ್ಲಿ ಒಂದು ಕ್ಷಣವೂ ನಿಲ್ಲುವ ವ್ಯಕ್ತಿ ರವಿವರ್ಮ ಕುಮಾರ್ ಅಲ್ಲ. ಸುಪ್ರೀಂಕೋರ್ಟ್‌ನಲ್ಲಿ ದೇವದತ್ತ ಕಾಮತ್ ಮತ್ತು ಕಲಬುರಗಿ ಹೈಕೋರ್ಟ್ ಪೀಠದಲ್ಲಿ ರಾಘವೇಂದ್ರ ನಾಡಗೌಡ ಎಂಬುವವರನ್ನೂ ಹೆಚ್ಚುವರಿ ಅಡ್ವೋಕೇಟ್ ಜನರಲ್ ಆಗಿ ನೇಮಕ ಮಾಡುವಾಗ ಸರ್ಕಾರಿ ಪ್ರಭುಗಳು ತನಗೊಂದು ಮಾತು ಕೇಳಲಿಲ್ಲವೆಂದು ಬೇಸರಗೊಂಡು ರವಿವರ್ಮ ರಾಜೀನಾಮೆ ನೀಡಿದ್ದಾರೆಂದು ಸುದ್ದಿ ಹಬ್ಬಿದೆ. ಅದು ಸ್ವಾಭಿಮಾನ-ಪ್ರಾಮಾಣಿಕತೆ-ಪಾರದರ್ಶಕತೆಯ ಸಹಜ ಪರಿಣಾಮ.

ಅಡ್ವೋಕೇಟ್ ಜನರಲ್ ಸ್ಥಾನ ರವಿವರ್ಮ ತ್ಯಜಿಸಿರುವುದು ಸಾರ್ವಜನಿಕ ವಲಯದಲ್ಲಿ ದಿಗ್ಭ್ರಮೆ ಮೂಡಿಸಿದೆ! ಸಿಎಂ ಸಿದ್ದು ಪದೇಪದೇ ಪ್ರತಿಪಾದಿಸುವ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಸಮರ್ಥ ಪ್ರತಿನಿಧಿಯಂತಿರುವ ರವಿವರ್ಮರನ್ನು ಸರ್ಕಾರ ಉಳಿಸಿಕೊಳ್ಳಬೇಕಿತ್ತೆಂಬ ಮಾತುಗಳೀಗ ಕೇಳಿಬರುತ್ತಿದೆ. ಹಿರಿಯ ವಕೀಲರಾದ ರವಿವರ್ಮ ವಕೀಲಿ ವೃತ್ತಿ ಶುರುಮಾಡಿದಂದಿನಿಂದಲೂ ಜನಪರ ನಿಲುವು-ಚಿಂತನೆ ರೂಢಿಸಿಕೊಂಡವರು; ಪ್ರಗತಿಪರರೊಂದಿಗೆ ಗುರುತಿಸಿಕೊಂಡವರು. ಶೋಷಣೆ-ಅನ್ಯಾಯದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ನಿರ್ವಹಿಸುವ ಮೂಲಕ ವಕೀಲಿ ವೃತ್ತಿಯಲ್ಲಿ ತಾವೊಬ್ಬ ವಿಭಿನ್ನ ನೀತಿಯವರೆಂದು ಸಾರ್ವಜನಿಕವಾಗಿ ಸಾಬೀತುಪಡಿಸಿಕೊಂಡಿದ್ದರು. ಅವರ ಕಳಕಳಿ-ಛಲ-ಹೋರಾಟ ಪ್ರಶ್ನಾತೀತ. ರಾಜ್ಯದ ಹಿಂದುಳಿದ ವರ್ಗದ ಅಧ್ಯಕ್ಷರಾಗಿ ಆ ವರ್ಗಗಳಿಗೆ ನ್ಯಾಯ ನೀಡಲು ಪ್ರಯತ್ನಿಸಿದ ರೀತಿ ಅನನ್ಯವಾದದು!


ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಅಹಿಂದ ಮತ್ತು ಪ್ರಗತಿಪರ ಚಿಂತನೆಗೆ ಅನುಸಾರವಾಗಿ ರವಿವರ್ಮ ಕುಮಾರ್‌ರನ್ನು ಅಡ್ವೋಕೇಟ್ ಜನರಲ್ ಮಾಡಿದ್ದರು. ಆಗ ಪ್ರಜ್ಞಾವಂತರು ತಲೆದೂಗಿದ್ದರು. ರವಿವರ್ಮರ ನೇಮಕಾತಿ ಮೂಲಕ ಸಿದ್ದು ತನ್ನ ಆಡಳಿತದ ರೂಪುರೇಷೆ-ದಿಕ್ಸೂಚಿ ರಾಜ್ಯಕ್ಕೆ ಪರೋಕ್ಷವಾಗಿ ತೋರಿಸಿದ್ದರು. ಆಗಿಂದಲೇ ಪಟ್ಟಭದ್ರ ಹಿತಾಸಕ್ತಿಗಳು, ಶೋಷಕರು, ಕೋಮುವಾದಿಗಳು ಮತ್ತು ಮತಾಂಧರು ಒಳಗೊಳಗೇ ಚಡಪಡಿಸತೊಡಗಿದ್ದರು. ಸ್ವಂತಿಕೆ, ಪ್ರತಿಭೆ ಮತ್ತು ಮನುಷ್ಯತ್ವದ ರವಿವರ್ಮರ ಅಡ್ವೋಕೇಟ್ ಜನರಲ್‌ಗಿರಿ ಮನುವಾದಿಗಳಿಗೆ, ಮಠವಾದಿಗಳಿಗೆ, ಕಾಮುಕ ಕಾವಿ ಶಿಷ್ಯರಿಗೆ ಸಹಿಸಿಕೊಳ್ಳುವುದು ಸಾಧ್ಯವಾಗಿರಲಿಲ್ಲ!!

ರಾಮಚಂದ್ರಾಪುರ ಮಠದ ರೇಪಿಸ್ಟ್ ಸ್ವಾಮಿ ರಾಘುನ ಅತ್ಯಾಚಾರ ಪ್ರಕರಣದಲ್ಲಿ ಅಡ್ವೋಕೇಟ್ ಜನರಲ್ ಆಗಿ ರವಿವರ್ಮ ಕುಮಾರ್ ಕರ್ತವ್ಯ ನಿಭಾಯಿಸಿದ ರೀತಿ ಐತಿಹಾಸಿಕವಾದುದು! ಹೈಕೋರ್ಟ್‌ನಲ್ಲಿ ರವಿವರ್ಮ ಕುಮಾರ್ ನ್ಯಾಯನಿಷ್ಠೆ, ದಿಟ್ಟತನ, ಬದ್ಧತೆಯಿಂದ ವಾದಿಸಿದ್ದರು. ಇಲ್ಲದಿದ್ದರೆ ಸಗಣಿ ಮಾಣಿ ವಿರುದ್ಧದ ಎಫ್‌ಐಆರ್ ಎಂದೋ ಹೈಕೋರ್ಟ್‌ಲ್ಲೇ ರದ್ದಾಗಿ ಹೋಗುತ್ತಿತ್ತು! ಮಠದ ಬಲಾಢ್ಯ ಲಾಬಿ ತಮ್ಮ ಗುರುವಿನ ಕಚ್ಚೆಹರುಕತನ 'ಷಡ್ಯಂತ್ರ'ವೆಂದು ಬಿಂಬಿಸಲು ಹವಣಿಸಿದಾಗಿ ಸ್ವತಃ ತಾವೇ ಸಂತ್ರಸ್ತೆಯ ಅಳುವನ್ನು ಕೇಳಿ ಸಮರ್ಥವಾಗಿ ಹೈಕೋರ್ಟ್ ಪೀಠದ ಮುಂದೆ ರವಿವರ್ಮ ವಾದ ಮಂಡಿಸಿದ್ದರು. ತನ್ಮೂಲಕ ಮಠದ ಧಾರ್ಮಿಕ-ದುಡ್ಡಿನ ಪಟಾಲಮ್‌ನ ಕುತಂತ್ರ ವಿಫಲಗೊಳಿಸಿದ್ದರು. ತನ್ಮೂಲಕ ಸಂತ್ರಸ್ತೆಗೆ ನ್ಯಾಯ ಸಿಗುವಂತೆ ಕೇಸ್‌ಗೆ ಬುನಾದಿ ಹಾಕಿದ್ದರು. ಆಗ ಕೆಲವು 'ವಿಷ' ಬೀಜಗಳು ಬೆಚ್ಚಿ ಬಿದ್ದಿದ್ದವು! ಅಡ್ವೋಕೇಟ್ ಜನರಲ್‌ಗೆ ಏಕೆ ಈ ರೇಪ್ ಕೇಸಲ್ಲಿಷ್ಟು ಆಸಕ್ತಿಯೆಂದು ಠೀಮುಗಟ್ಟಲೆ ಬರೆದಿದ್ದವು. ಅಷ್ಟೊಂದು ಭಯ ರಾಘುನ ರಕ್ಷಕ ರಕ್ಕಸರಲ್ಲಿ ರವಿವರ್ಮ ಕುಮಾರ್ ನಡೆ ಮೂಡಿಸಿತ್ತು!!

ಕನ್ನಡ ಭಾಷಾ ಮಾಧ್ಯಮ



ವಿಷಯದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ನಿಲುವಿಗೆ ವಿರುದ್ಧವಾದ ತೀರ್ಪು ಬಂದ ಸಮಯವದು. ಈ ವ್ಯತಿರಿಕ್ತ ತೀರ್ಪಿಗೆ ಅಡ್ವೋಕೇಟ್ ಜನರಲ್ ರವಿವರ್ಮಕುಮಾರರೇ ಹೊಣೆಯೆಂದು ಒಂದು ಗೊಡ್ಡು ವಲಯ ಬೊಬ್ಬಿರಿದಿತ್ತು. ಇದಕ್ಕೆ ಕಾರಣ ಹಿಂದಿನ ಚಡ್ಡಿ ಸರ್ಕಾರದ ಸಂವಿಧಾನ ವಿರೋಧಿ ನೀತಿಯನ್ನು ಯಾರಿಂದಲೂ ಸಮರ್ಥಿಸಲು ಸಾಧ್ಯವಿರಲಿಲ್ಲ. ಸುಪ್ರೀಂಕೋರ್ಟ್ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿದ ರಾಷ್ಟ್ರೀಯ ನ್ಯಾಯಾಂಗ ಆಯೋಗದ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ತಪರಾಕಿ ಬಾರಿಸಿತ್ತು. ಆದರೆ ಈ ವ್ಯತಿರಿಕ್ತ ತೀರ್ಪಿಗೆ ಯಾರೂ ಅಟಾರ್ನಿ ಜನರಲ್ ಮುಕುಲ್ ರೋಹ್ಟಗಿಯನ್ನು ಹೊಣೆಗಾರನಾಗಿ ಮಾಡಲಿಲ್ಲ. ಸರ್ಕಾರಗಳು 'ಜನಪ್ರಿಯತೆ'ಗಾಗಿ ಹಿಡಿವ ಅಡ್ಡದಾರಿಯನ್ನು ಸರಿಯೆಂದು ಹೇಳಲು ಕೋರ್ಟ್‌ಲ್ಲಿ ನಿಂತು ವಾದಿಸುವುದು ಯಾರಿಂದಲೂ ಸಾಧ್ಯವಿಲ್ಲ. ತಮಾಷೆಯೆಂದರೆ, ಹಿಂದಿನವರ ವಿಫಲತೆ ರವಿವರ್ಮರ ತಲೆಗೆ ಕಟ್ಟುವ ಕಿತಾಪತಿ ನಡೆದಿತ್ತು.



ಖರ್ಗೆ



ಸಿದ್ದು



ತಾತ್ವಿಕ ಅಥವಾ ಸೈದ್ಧಾಂತಿಕ ಸಂಘರ್ಷದಿಂದ ಅಡ್ವೋಕೇಟ್ ಜನರಲ್‌ಗಳು ರಾಜೀನಾಮೆ ಸಲ್ಲಿಸುವುದು ಮಾಮೂಲಿ ಸಂಗತಿ. ಆದರೆ ರವಿವರ್ಮರ ರಾಜೀನಾಮೆಗೆ ಕಾರಣವಾದ ಹೆಚ್ಚುವರಿ ಅಡ್ವೋಕೇಟ್ ಜನರಲ್ ನೇಮಕ ರಗಳೆ ಮಾತ್ರ ಸರ್ಕಾರಕ್ಕೆ ಕಪ್ಪು ಚುಕ್ಕೆಯೇ ಸರಿ! ಕಲಬುರಗಿ ಹೈಕೋರ್ಟ್ ಪೀಠದಲ್ಲಿ ರಾಘವೇಂದ್ರ ನಾಡಗೌಡ ಎಂಬಾತನ ಅಡಿಷನಲ್ ಅಡ್ವೋಕೇಟ್ ಜನರಲ್ ಮಾಡುವಂತೆ ಸಿದ್ದು ಮೇಲೆ ಎಐಸಿಸಿಯಲ್ಲಿ ಪವರ್‌ಫುಲ್ ಆಗಿ ರೂಪು ತಳೆದಿರುವ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಒತ್ತಡ ತಂದಿದ್ದರು. ದೇವದತ್ತ ಕಾಮತ್ ಎಂಬ ಅನನುಭವಿ ಹುಡುಗನ ಹೆಸರು ನೇರ ದಿಲ್ಲಿಯಿಂದಲೇ ಶಿಫಾರಸ್ಸಾಗಿತ್ತು. ಕರ್ನಾಟಕ ಕಾಂಗ್ರೆಸ್‌ನ ಎಐಸಿಸಿ ಉಸ್ತುವಾರಿ ದಿಗ್ವಿಜಯ್‌ಸಿಂಗ್ ಈ ಕಾಮತ್‌ಗಾಗಿ ಕರಾಮತ್ತು ನಡೆಸಿದ್ದರು. ದಿಗ್ವಿಜಯ್‌ಗೆ ಸುಪ್ರೀಂಕೋರ್ಟ್‌ನಲ್ಲಿ ದೇವದತ್ತನನ್ನು ಅಡಿಷನಲ್ ಅಡ್ವೋಕೇಟ್ ಜನರಲ್ ಮಾಡುವಂತೆ ನೋಡಿಕೊಳ್ಳಲು ಹೇಳಿದ್ದು ಕೇಂದ್ರದ ಮಾಜಿ ಸಚಿವ ಮಾನಿಷ್ ತಿವಾರಿ ಎಂದೆನ್ನುವವರು ಇದ್ದಾರೆ; ಸಾಕ್ಷಾತ್ ರಾಹುಲ್ ಗಾಂಧಿಯೇ ದಿಗ್ಗಿಗೆ ಸೂಚನೆ ನೀಡಿದ್ದಾರೆನ್ನುವವರೂ ಇದ್ದಾರೆ.



ಮುಂಬೈನ ಗುರುದಾಸ್ ಕಾಮತ್ ಬಳಗ ತನ್ನ ವಂಶದ ಕುಡಿಗೆ ಅಡಿಷನಲ್ ಅಡ್ವೋಕೇಟ್ ಜನರಲ್ ಮಾಡಲು ತೆರೆಮರೆಯ ಲಾಬಿ ಬಿರುಸಾಗಿ ಮಾಡಿದ ಎಂಬ ಪುಕಾರೂ ಇದೆ. ಈ ಎರಡೂ ಅನುಮಾನಾಸ್ಪದ ಹೆಸರುಗಳ ಬದಲಿಗೆ ರವಿವರ್ಮಕುಮಾರ್ ಸ್ವಚ್ಛ ಸಮರ್ಥರಿಬ್ಬರ ಹೆಸರು ಸಿಎಂ ಮುಂದಿಟ್ಟರು. ಆದರೆ ಇಕ್ಕಟ್ಟಿಗೆ ಸಿಲುಕಿದ ಸಿಎಂ ಸಿದ್ದು ದಿಲ್ಲಿ ದೊರೆಗಳ ಅಣತಿಯಂತೆ ನಡೆದುಕೊಂಡುಬಿಟ್ಟರು.

ಸುಪ್ರೀಂನಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ನೇಮಕವಾಗಿರುವ ದೇವದತ್ತ ಕಾಮತ್ ಪಕ್ಷಪಾತ ಇಲ್ಲದ ನ್ಯಾಯ ನಿಷ್ಠೂರತೆ ಅಥವಾ ಪ್ರತಿಭೆಯಿಂದ ಗುರುತಿಸಿಕೊಂಡ ಕುರುಹುಗಳು ಎಲ್ಲಿಯೂ ಸಿಗದು. ಹಾಗೆಯೇ ಜನಪರ ಕಾಳಜಿ-ಕಳಕಳಿ-ಹೋರಾಟ-ಸಿದ್ಧಾಂತ ಯಾವುದೂ ರಾಹುಗನ್ನಡಿ ಹಿಡಿದು ಹುಡುಕಿದರೂ ದೇವದತ್ತನಲ್ಲಿ ಸಿಗದು. ಸದಾ ಭಗವದ್ಗೀತೆ, ಆರ್‌ಎಸ್‌ಎಸ್, ಗೋಕಥೆ, ರಾಮಕಥೆ, ವಿದೇಶಿ ದುಡ್ಡಿನ ಗ್ರೂಗರ್ ಫೌಂಡೇಷನ್ ಎಂದು ವೇದಮಂತ್ರ ಪಠಿಸುವ ಪರಿವಾರದ ಕಣ್ಮಣಿ ಈ ದೇವದತ್ತ. ಈತನ ತಂದೆ ಕಾರವಾರದ ನಾಮಾಂಕಿತ ವಕೀಲರು ಪಕ್ಕಾ ಹಿಂದೂತ್ವವಾದಿ ಚಿಂತಕ. ಈತ ಸಮಾಜವಾದಿ ದಿನಕರ ದೇಸಾಯಿ ಕಟ್ಟಿದ ಕೆನರಾ ವೆಲ್‌ಫೇರ್ ಟ್ರಸ್ಟ್‌ನ ಮುಖ್ಯಸ್ಥನಾದ ಬಳಿಕ ಆ ಸಂಸ್ಥೆಯ ಕಟ್ಟಡಗಳು ಬೆಳಿಗ್ಗೆ-ಸಂಜೆ ಚಡ್ಡಿ ಕವಾಯತು ನಡೆಯುವ ತಾಣಗಳಾಗಿವೆ. ಹಾಗಂತ ದೇಸಾಯರ ಒಡನಾಡಿಗಳು ನೋವಿನಿಂದ ಹೇಳುತ್ತಾರೆ.


ಇಂಥ ಹಿನ್ನೆಲೆಯ ದೇವದತ್ತ ಕಾಮತ್ ಕೈಗೇನಾದರೂ ಆಕಸ್ಮಾತ್ ಟಿಪ್ಪು ಜಯಂತಿ, ಗೋಮಾಂಸ ಅಥವಾ ರಾಮಚಂದ್ರಾಪುರ ಪೀಠಾಧಿಪತಿಯ ರೇಪ್ ರಾದ್ಧಾಂತದ ಕೇಸ್ ಸಿಕ್ಕರೆ ಗತಿ ಏನು? ಆತನ ಹಿಂದೂತ್ವ ಸಂಸ್ಕಾರದ ಮಿದುಳು, ಕುಟುಂಬ ಕೇಸ್ ಹಳ್ಳ ಹಿಡಿಸಲಾರದಾ? ಈತನಿಂದ ಸಮರ್ಥ, ನೈಸರ್ಗಿಕ, ನ್ಯಾಯತತ್ವದಂತೆ ವಾದಿಸಲು ಸಾಧ್ಯವಾ? ಹೆಣ್ಣುಬಾಕ ಸ್ವಾಮಿ ರಾಘುನ ಅತ್ಯಾಪ್ತ ಶಿಷ್ಯನೂ, ಆತನ ರೇಪ್ ರಾಸಲೀಲೆಗಳು ಸುಳ್ಳೆಂದು ಒದರಾಡುವ ವಕ್ತಾರನೂ ಆಗಿರುವ ಕುಮಟಾದ ಮುರಳೀಧರ ಪ್ರಭುನೇ ದೇವದತ್ತನಿಗೆ ಹೆಣ್ಣುಕೊಟ್ಟ ಮಾವ. ಅಳಿಯನ ಮೇಲೆ ಪ್ರಭಾವ ಬೀರಿ ಆತ ರಾಘುನ ರಕ್ಷಿಸಲಾರನಾ? ಇಂಥ ಅನುಮಾನ, ಗುಮಾನಿಗಳು ಈಗ ಜನಮಾನಸದಲ್ಲಿ ಪುಟದೇಳುತ್ತಿದೆ! ಮುರಳೀಧರ ಪ್ರಭುರ ಗೇರುಬೀಜ ಉದ್ಯಮಕ್ಕೆ ರಾಘು ನೆರವಾಗುವ ಮೂಲಕ ಯಥೇಚ್ಛ ಕಾಣಿಕೆ-ದೇಣಿಗೆ-ಸೇವೆ ಪಡೆಯುತ್ತಾನೆಂಬ ಪುಕಾರು ಲಾಗಾಯ್ತಿನಿಂದಲೂ ರಾಮಚಂದ್ರಾಪುರ ಮಠದ ಭಕ್ತಾದಿಗಳಲ್ಲಿವೆ. ಪ್ರಭುರ ಕ್ಯಾಶ್ಯೂಗೆ ಮಾರ್ವಾಡಿ ಮಾರುಕಟ್ಟೆ ರಾಘು ಕುದುರಿಸುತ್ತಾನಂತೆ.

ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಮೇಲೆ ಕಣ್ಣಿಟ್ಟಿರುವ ಎಜಿ ದೇವದತ್ತ ಕಾಮತ್ ರಾಜಕೀಯ-ಸಾಮಾಜಿಕ ಮುಖದ ವೈರುಧ್ಯಗಳು ಕುತೂಹಲಕರವಾಗಿದೆ. ಯುಪಿಎ ಸರ್ಕಾರದ ಪರ್ವದಲ್ಲಿ ದೇವದತ್ತ ಕಾಮತ್ ಸುಪ್ರೀಂಕೋರ್ಟ್‌ಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುತ್ತಾರೆಂಬ ದೊಡ್ಡಸ್ತಿಕೆಯ ಗುಲ್ಲು ಎಬ್ಬಿಸಲಾಗಿತ್ತು. ಅದೇ ಸರ್ಕಾರದ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ (ಎನ್‌ಎಚ್-66) ಕಾಮಗಾರಿ ವಿರುದ್ಧ ಇದೇ ಕಾಮತ್ ಕಾನೂನು ಸಮರ ಸಾರಿದ್ದಾರೆ. ಧಾರವಾಡ ಹೈಕೋರ್ಟ್ ಪೀಠಕ್ಕೆ ದೇವದತ್ತ ಕಾಮತ್ ಮಾಜಿ ಅಟಾರ್ನಿ ಜನರಲ್ ಸೋಲಿಸೊರಾಬ್ಜಿಯನ್ನು ಕರೆತಂದಿದ್ದರು. ಸೋಲಿಸೊರಾಬ್ಜಿ ವಾಜಪೇಯಿ ಸರ್ಕಾರದ ಅಟಾರ್ನಿ ಜನರಲ್. ಇದು ಹಿತಾಸಕ್ತಿ ಸಂಘರ್ಷ ಅಲ್ಲವಾ?!

ಈ ಹಿನ್ನೆಲೆಯಲ್ಲಿ ರವಿವರ್ಮಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದು ಅವರ ದಿಟ್ಟತನವನ್ನು ತೋರುತ್ತದೆ.

■ ವರದಿಗಾರ

ಬೆಳಗೋಡು ಹತ್ಯೆಯ ಸೂತ್ರಧಾರ ಯಾರು


ಬೆಳಗೋಡು ಉಮೇಶ್


ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತೆ, ಬಿಜೆಪಿ ನಾಯಕ ಬೆಳಗೋಡು ಉಮೇಶ್ ಹತ್ಯೆಗೆ ಅಸಂಬದ್ಧ ಪ್ರತಿಕ್ರಿಯೆ ಎಂಬಂತೆ ಬೆಂಗಳೂರು ಪೊಲೀಸರ ಭೂಗತ ಬೇಟೆ ಶುರುವಾಗಿದೆ. ಒಂದೆಡೆ ರೌಡಿಗಳ ಪೆರೇಡು ಮತ್ತೊಂದೆಡೆ ಪುಡಿಪುಕ್ಕಾ ರೌಡಿಗಳ ಬಂಧನದ ಸುದ್ದಿ ಪ್ರತಿನಿತ್ಯ ಪತ್ರಿಕೆಗಳಲ್ಲಿ ರಾರಾಜಿಸುತ್ತಿವೆ ನಿಜ. ಪ್ರಶ್ನೆಯೆಂದರೆ ದೊಡ್ಡದೊಡ್ಡ ಡಾನ್‌ಗಳು, ರಿಯಲ್ ಎಸ್ಟೇಟ್ ಕೊಲೆಗಡುಕರು, ಹಂತಕರ ಹಿಂದನ್ನೇ ನಿಭಾಯಿಸಬಲ್ಲ ಘನಪಾತಕಿಗಳ್ಯಾರನ್ನೂ ಮುಟ್ಟದ ಪೊಲೀಸರು ತಲೆಬುಡವಿಲ್ಲದ ಚಿಲ್ಲೂಗಳನ್ನೇ ಹಿಡಿಯುತ್ತಿರುವುದೇಕೆ?

ದೊಡ್ಡ ಹೆಸರಿನ ಅಪಾಯಕಾರಿಗಳ್ಯಾರನ್ನೂ ಮಾತಾಡಿಸದೆ ಅಬ್ಬೇಪಾರಿಗಳನ್ನೇ ಖತರ್‌ನಾಕ್‌ಗಳಂತೆ ಬಣ್ಣ ಕಟ್ಟಿ ಜೈಲಿಗೆ ದಬ್ಬುತ್ತಿರುವ ಬೆಂಗಳೂರು ಪೊಲೀಸರ ಕಣ್ಣಾಮುಚ್ಚಾಲೆ ದಲಿತ ನಾಯಕ ಬೆಳಗೋಡು ಉಮೇಶ್ ಕಗ್ಗೊಲೆಯ ವಿಷಯದಲ್ಲೂ ಯಥಾವತ್ತಾಗಿ ಮುಂದುವರಿದಿದೆ. ಕರ್ನಾಟಕದ ದಲಿತ ಚಳವಳಿಯಲ್ಲಿ ಬೆಳಗೋಡು ಉಮೇಶ್ ಎಂಬ ಹೆಸರಿಗೆ ಅದರದ್ದೇ ಆದ ಕಿಮ್ಮತ್ತಿತ್ತು. ಮೂಲತಃ ಸಕಲೇಶಪುರದ ದಲಿತ ಯುವಕ ಬೆಳಗೋಡು ಹೋರಾಟದ ಮೂಲಕವೇ ಬೆಂಗಳೂರಿಗೆ ಬಂದದ್ದು, ಇಲ್ಲಿ ಬಿಎಚ್‌ಇಎಲ್ ನೌಕರಿಗೆ ಸೇರಿ ಕಾರ್ಮಿಕ ನಾಯಕನಾಗಿದ್ದು, ಕಾಲಕ್ರಮೇಣ ನಟೋರಿಯಸ್ ನೆಲಕಂಟಕ ಕುಪ್ಪಂ ಗಣೇಶನ ಮನೆಯ ಅಂಗಳದಲ್ಲಿ ಕಾಣಿಸಿಕೊಂಡಿದ್ದು, ದಲಿತ ಚಳವಳಿ ಛಿದ್ರಗೊಂಡಂತೆಲ್ಲ ಉಮೇಶ್ ಪುಢಾರಿಗಿರಿ ವರ್ಧಿಸಿದ್ದು, ಕಾಲಕ್ರಮೇಣ ವಿಜಯನಗರದ ವೀರಪುತ್ರ ಸೋಮಣ್ಣನ ಗರಡಿಗೆ ಸೇರಿ ಮೊದಲು ಕಾಂಗ್ರೆಸ್ ಆನಂತರ ಬಿಜೆಪಿಗೆ ಸೇರ್ಪಡೆಗೊಂಡಿದ್ದು-ಬೆಳಗೋಡು ಉಮೇಶ್ ರಾಜಕೀಯ ಬದುಕಿನ ಕಿರುಪರಿಚಯವಷ್ಟೆ.

2010ರ ಬಿಬಿಎಂಪಿ ಚುನಾವಣೆಯಲ್ಲಿ ನಾಯಂಡಹಳ್ಳಿ ವಾರ್ಡಿನಿಂದ ತನ್ನ ಪತ್ನಿ ರಾಜೇಶ್ವರಿಯವರನ್ನು ಬಿಜೆಪಿಯಿಂದ ನಿಲ್ಲಿಸಿ ಗೆಲ್ಲಿಸಿದ್ದ ಬೆಳಗೋಡು ಚೂರು ಹುಷಾರಾಗಿದ್ದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಕಲೇಶಪುರದಿಂದ ಗೆದ್ದು ಶಾಸಕನಾಗಿರಬೇಕಿತ್ತು. ಯಡ್ಡಿಯ ಕೆಜೆಪಿಯಿಂದ ನಿಂತು ಕೆಲವೇ ಸಾವಿರ ಮತಗಳ ಅಂತರದಿಂದ ಜೆಡಿಎಸ್‌ನ ಎಚ್.ಕೆ. ಕುಮಾರಸ್ವಾಮಿ ವಿರುದ್ಧ ಸೋತ ಬೆಳಗೋಡು ಕೊಲೆಯಾಗದೇ ಹೋಗಿದ್ದರೆ ಕನಿಷ್ಠ ಮುಂಬರುವ ಚುನಾವಣೆಯಲ್ಲಾದರೂ ಸಕಲೇಶಪುರಕ್ಕೆ ಶಾಸಕನಾಗಿರುತ್ತಿದ್ದ!

ಅರುಣ್ ಗೌಡ?

ಕರ್ನಾಟಕ ಕಂಡ ದಲಿತ ನಾಯಕರ ಪೈಕಿ ಉಮೇಶ್ ವಿಚಿತ್ರ ವ್ಯಕ್ತಿತ್ವದ ವಿಲಕ್ಷಣ ಮಹತ್ವಾಕಾಂಕ್ಷೆಯ ಹೋರಾಟಗಾರನೆಂಬ ಬಗ್ಗೆ ಯಾರಲ್ಲೂ ಅನುಮಾನಗಳಿಲ್ಲ. ಆದರೆ ಕೊಲೆಯಾಗಿದ್ದು ಯಾರೋ ಪುಡಿ ರೌಡಿಗಳಿಂದ ಎಂಬುದನ್ನಾಗಲಿ ಅಥವಾ ಇನ್ನಾವುದೋ ಹುಡುಟೆ ಸೈಟಿಗಾಗಿ ಎಂಬುದನ್ನು ಮಾತ್ರ ಸುಲಭಕ್ಕೆ ಒಪ್ಪಲಾಗುತ್ತಿಲ್ಲ.



ರಾಜೇಶ್ವರಿ


ನವೆಂಬರ್ 19ರ ರಾತ್ರಿ ರಾಜರಾಜೇಶ್ವರಿ ನಗರದ ತನ್ನ ಮನೆಗೆ ಕೂಗಳತೆಯಲ್ಲೇ ಭೀಕರವಾಗಿ ಕೊಲೆಯಾದ ಬೆಳಗೋಡು ಉಮೇಶ್ ಹತ್ಯೆಗೆ ಸಂಬಂಧಪಟ್ಟಂತೆ ಎಸಿಪಿ ಎಸ್.ಕೆ. ಉಮೇಶ್ ತಂಡ ಬಂಧಿಸಿದ್ದು ಹೇಳಹೆಸರಿಲ್ಲದ ಅರುಣ್‌ಗೌಡನನ್ನು. ಮಂಡ್ಯ ಜಿಲ್ಲೆ ಮದ್ದೂರು ಮೂಲದ ಅರುಣ್‌ಗೌಡ ಹೇಳಿಕೇಳಿ ಈ ಭಾಗದ ಕುಖ್ಯಾತ ರೌಡಿ ಸಹೋದರರಿಬ್ಬರ ನಂಬಿಕಸ್ತ ಬಂಟ.

ಕಳೆದ ಹತ್ತು ವರ್ಷಗಳಿಂದ ಈತ ಮತ್ತು ಬೆಳಗೋಡು ಕೇ... ...ಂಡೋರ ಸೊತ್ತಿಗೆ ಬೇಲಿ ಹಾಕುತ್ತಿದ್ದರಂತೆ. ಅರುಣ್‌ಗೌಡನನ್ನು ಮುಂದಿಟ್ಟುಕೊಂಡು ಚಂದ್ರಾಲೇಔಟ್, ರಾಜರಾಜೇಶ್ವರಿನಗರ, ಕೆಂಗೇರಿ, ಜ್ಞಾನಭಾರತಿ ಸುತ್ತಮುತ್ತ ಬೆಳಗೋಡು ಲಿಟಿಗೇಷನ್ ದಂಧೆಗೆ ಕೈಇಟ್ಟಿದ್ದರಂತೆ. ಹೀಗೆ ಚಂದ್ರಾಲೇಔಟಿನ ಅಕ್ಕಪಕ್ಕದ ಮೂರು ನಿವೇಶನಗಳನ್ನು ಒಟ್ಟೊಟ್ಟಿಗೇ ಸೇರಿಸಿ ಬೇಲಿ ಹಾಕಿದ್ದಕ್ಕಾಗಿ ಅರುಣ್‌ಗೌಡ ಜೈಲುಪಾಲಾಗಿದ್ದು, ಆತನನ್ನು ಜೈಲಿನಿಂದ ಬಿಡಿಸಿಕೊಂಡು ಬರುವಲ್ಲಿ ಉಮೇಶ್ ವಿಳಂಬ ಮಾಡಿದ್ದು, ಇದರಿಂದ ರೊಚ್ಚಿಗೆದ್ದು ಅರುಣ್‌ಗೌಡ ಹೊಂಚು ಹಾಕಿ ತನ್ನ ಗುರುವನ್ನೇ ನಡುರಸ್ತೆಯಲ್ಲಿ ಕತ್ತರಿಸಿಕೊಂದ ಎಂಬುದು ಎಸ್.ಕೆ. ಉಮೇಶ್ ಸಾಹೇಬರ ವಾದ.

ಸದ್ಯ ಹಾಲಿವುಡ್‌ನ ಬಾಂಡ್ ಚಿತ್ರ 'ಸ್ಪೆಕ್ಟರ್' ಅತೀ ವಿಜೃಂಭಣೆಯಲ್ಲೇ ದೇಶಾದ್ಯಂತ ತೆರೆಕಂಡು ರಾಜರಾಜೇಶ್ವರಿನಗರದ ಗೋಪಾಲನ್ ಮಾಲ್‌ನಲ್ಲಿ ಕಿಕ್ಕಿರಿದ ಜನಸಂದಣಿಯಲ್ಲೇ ಹೌಸ್‌ಫುಲ್ಲಾಗಿ ಓಡುತ್ತಿದೆ. ಕೊಲೆಯಾದ ಉಮೇಶ್ ಮನೆಯಿದ್ದದ್ದೂ ಬಾಂಡ್ ಸಿನಿಮಾ ಹಾಕಿದ್ದ ಗೋಪಾಲನ್ ಮಾಲ್‌ಗೆ ಕೂಗಳತೆಯಲ್ಲೇ. ಇತ್ತ ಲೇಟೆಸ್ಟ್ ಜೇಮ್ಸ್‌ಬಾಂಡ್‌ನ ಫ್ಲೆಕ್ಸು ಕಟೌಟುಗಳು ಕಣ್ಣು ಕುಕ್ಕುತ್ತಿದ್ದರೆ ಅದನ್ನು ಅಣಕಿಸುವಂತೆ ರಾಜರಾಜೇಶ್ವರಿನಗರದ ನಡುರಸ್ತೆಯಲ್ಲಿ ಬಿದ್ದಿತ್ತು ಉಮೇಶ್ ರಕ್ತಸಿಕ್ತ ಹೆಣ. ಇರಲಿ, ಈಗ ಪೊಲೀಸರು ಹಿಡಿದು ಹಾಕಿದ ಸೋಕಾಲ್ಡ್ ಹಂತಕ ಅರುಣ್‌ಗೌಡ, ಆತನ ಸೋಕಾಲ್ಡ್ ಹಂತಕ ಪಡೆಯಲ್ಲಿದ್ದರೆನ್ನಲಾದ ನಾಯಂಡಹಳ್ಳಿಯ ಜಯರಾಮ, ವಿನಯ್‌ಕುಮಾರ್, ಅವಿನಾಶ್ ಮತ್ತು ಶ್ರೀನಿವಾಸ್ ಶೇಘ್ರಾಗಿ ಜೈಲು ಸೇರಿಕೊಂಡಿದ್ದೇನೋ ಸರಿ.

ನಿಗೂಢ ಮನುಷ್ಯ


ಯಡ್ಡಿ


ಸೋಮಣ್ಣ

ಆದರೆ ಪೊಲೀಸರ ವಾದಕ್ಕೂ, ಕೊಲೆಯ ಹಿಂದಿರುವ ಕಾರಣ, ಹಂತಕರು ಮತ್ತು ಕಾಣದ ಕೈಗಳ ಸೂತ್ರಧಾರಿಕೆಗೂ ಒಂದಲ್ಲ ಎರಡಲ್ಲ ಅನೇಕ ಮಿಸ್ಸಿಂಗ್ ಲಿಂಕುಗಳಿವೆ. ಅಂದರೆ ಅಗೆದಂತೆಲ್ಲ ಬೆಳಗೋಡು ಉಮೇಶ್ ಹತ್ಯೆಯ ಕಾರಣ ಮತ್ತು ಕೈಗಳು ಕೊಡುವ ಅರ್ಥಗಳೇ ಬೇರೆಯಾಗುತ್ತವೆ.

ಮೊದಲಿಗೆ ಈ ಅರುಣ್‌ಗೌಡ ಯಾರು ಎತ್ತ ಎಂಬುದೇ ಹೊರಜಗತ್ತಿಗೆ ಗೊತ್ತಿಲ್ಲ. ಈ ಹಿಂದೆ ಯಾವುದೇ ಕ್ರಿಮಿನಲ್ಲಾಗಲಿ, ವಿವಾದಗಳಲ್ಲಾಗಲಿ ಅರುಣ್‌ಗೌಡ ಎಂಬ ಹೆಸರನ್ನು ಕೇಳಿದವರಿಲ್ಲ. ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ, ಕೆಂಗೇರಿ, ವಿಜಯನಗರ ಸುತ್ತಮುತ್ತಲ ಯಾರೇ ರೌಡಿಗಳಿಗೂ ಅರುಣ್‌ಗೌಡನ ಪರಿಚಯವಿದ್ದಂತಿಲ್ಲ. ಸ್ವತಃ ಬೆಳಗೋಡು ಬೆಂಬಲಿಗರಾಗಲಿ, ಮನೆಯವರಾಗಲಿ ಅಥವಾ ವಿಜಯನಗರದ ಬಿಜೆಪಿ ವಲಯವಾಗಲಿ ಯಾವತ್ತಿಗೂ ಬೆಳಗೋಡು ಜೊತೆ ಅರುಣ್‌ಗೌಡ ಎಂಬ ನಿಗೂಢ ಆಸಾಮಿಯನ್ನು ಕಂಡಿದ್ದಿಲ್ಲ.

ಮೂಲತಃ ಚಂದ್ರಾಲೇಟ್ ಗಂಗೊಂಡನಹಳ್ಳಿಯ ಅರುಣ್‌ಗೌಡ ಬಿಜೆಪಿ ಅಧಿಕಾರದಲ್ಲಿದಷ್ಟೂ ದಿನ ಬೆಳಗೋಡು ಜೊತೆ ಕದ್ದೂಮುಚ್ಚಿ ಸಂಬಂಧವಿಟ್ಟುಕೊಂಡಿದ್ದನಾ ಗೊತ್ತಿಲ್ಲ. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅರುಣ್‌ಗೌಡ ಹೆಚ್ಚು ಓಡಾಡಿಕೊಂಡಿದ್ದದ್ದು ಅತ್ತಿಗುಪ್ಪೆಯ ಮಾಜಿ ಕೌನ್ಸಿಲರ್ ದೊಡ್ಡಣ್ಣನ ಬಳಗದಲ್ಲೇ. ರಾಜರಾಜೇಶ್ವರಿನಗರದಲ್ಲಷ್ಟೇ ಅಲ್ಲದೆ ಚಂದ್ರಾಲೇಔಟ್ ವಿನಾಯಕ ಲೇಔಟ್‌ನಲ್ಲೂ ಬೆಳಗೋಡುಗೆ ಸ್ವಂತ ಮನೆಯಿತ್ತು. ಪತ್ನಿ ರಾಜೇಶ್ವರಿ ಮತ್ತು ಇಬ್ಬರು ಹೆಣ್ಣುಮಕ್ಕಳು ಬಿಟ್ಟರೆ ಬೆಂಗಳೂರಿನಲ್ಲಿ ಹೇಳಿಕೊಳ್ಳುವಂಥ ಸಂಬಂಧಿಕರಾಗಲಿ ಜಾತಿಬಲವಾಗಲಿ ಇರಲಿಲ್ಲ. ರಾಜಕೀಯವಾಗಿ ಬಿಜೆಪಿಯಲ್ಲಾದರೂ ಉಮೇಶ್ ನೆಲೆಯಿದ್ದದ್ದು ಸೋಮಣ್ಣನ ಬೆಂಬಲದಲ್ಲೇ. 2010 ರಲ್ಲಿ ಪತ್ನಿ ರಾಜೇಶ್ವರಿಗೆ ನಾಯಂಡಹಳ್ಳಿ ವಾರ್ಡಿನ ಬಿಜೆಪಿ ಟಿಕೆಟ್ ಕೊಡಿಸಿ ಗೆಲ್ಲಿಸುವಲ್ಲಿ ಅತೀ ಮುಖ್ಯ ಕಾರಣವಾಗಿದ್ದೇ ಉಮೇಶ್ ಮತ್ತು ಸೋಮಣ್ಣ ಸಂಬಂಧ.

ಪೊಲೀಸರ ಹೇಳಿಕೆಯಂತೆ ಅರುಣ್‌ಗೌಡ ಮತ್ತು ಬೆಳಗೋಡು ಒಟ್ಟೊಟ್ಟಿಗೆ ಲಿಟಿಗೇಷನ್ ಪ್ರಾಪರ್ಟಿಗೆ ಕೈಯಿಟ್ಟಿದ್ದೇ ನಿಜ ಆಗಿದ್ದರೆ ಈತನಿಗಿಂತ ದೊಡ್ಡ ತಾಕತ್ತಿನ, ದೊಡ್ಡ ಹೆ... ...ನ ಮಾಬಾಮ, ರಾಮ, ಲಕ್ಷ್ಮಣ, ಮಾರೇನಹಳ್ಳಿ ಜಗ್ಗ, ಸೈಕಲ್ ರವಿ, ಹೆಬ್ಬೆಟ್ಟು ಮಂಜು, ಗಿರಿ, ಜಾನಿ, ಪಾಯ್ಸನ್ ರಾಮು, ಸುನೀಲ ಮುಂತಾದ ದೈತ್ಯ ರೌಡಿಗಳಿದ್ದರು. ಅಂತಹ ದಾಂಡಿಗರನ್ನೆಲ್ಲ ಬಿಟ್ಟು ಯಾವ ತೋಲಾಂಡಿ ಎಂದು ಹೇಳಹೆಸರಿಲ್ಲದ ಅರುಣ್‌ಗೌಡನನ್ನು ಮುಂದಿಟ್ಟುಕೊಂಡು ಉಮೇಶ್ ಲಿಟಿಗೇಷನ್ನಿಗೆ ಕೈಹಾಕುತ್ತಾರೆ?

ಜೈಲಿಗೆ ಹೋದ


ರಾಮ-ಲಕ್ಷ್ಮಣರ ಚೇಲಾಗಿರಿ ಮಾಡಿಕೊಂಡಿದ್ದೇ ಕೆಂಗೇರಿಯ ಜೀವಿಕ ಎಂಬ ಯುವತಿಯೊಬ್ಬಳನ್ನು ಹಾರಿಸಿಕೊಂಡು ಹೋಗಿ ಮೊದಲ ಬಾರಿಗೆ ಪೊಲೀಸರ ಕಣ್ಣಿಗೆ ಬಿದ್ದ ಅರುಣ್‌ಗೌಡ ಕೆಲಕಾಲ ಕ್ಯಾಬ್ ಚಾಲಕನಾಗಿದ್ದ. ನಂಬಿ ಮನೆಬಿಟ್ಟು ಬಂದಿದ್ದ ಪತ್ನಿಯನ್ನೂ ಬಾಳಿಸಲಿಲ್ಲ. ಆಕೆಗೂ ಹಿಂಸೆ ಕೊಟ್ಟು ಕೊನೆಗದು ಡೈವೋರ್ಸ್ ಆಗಿ ಕೆಂಗೇರಿಯನ್ನೇ ತೊರೆದ ಅರುಣ್‌ಗೌಡ ನಂತರ ಪ್ರತ್ಯಕ್ಷನಾಗಿದ್ದು ನಾಯಂಡಹಳ್ಳಿಯಲ್ಲಿ. ಇಲ್ಲಿ ಇನ್ನಾರೋ ಹೆಂಗಸಿನ ಮನೆಯಲ್ಲಿ 'ವಿಸಿಟಿಂಗ್ ಗಂಡ'ನಂತಿದ್ದ. ಬೆಳಗೋಡು ಮಾತ್ರವಲ್ಲದೆ ಅತ್ತಿಗುಪ್ಪೆ ಮಾಜಿ ಕೌನ್ಸಿಲರ್ ದೊಡ್ಡಣ್ಣ, ನಾಯಂಡಹಳ್ಳಿಯ ಹಾಲಿ ಕೌನ್ಸಿಲರ್ ಸವಿತಾರ ಪತಿ ಕಿರೆಕೃಷ್ಣ ಉಲ್ಲಾಳು ಕೌನ್ಸಿಲರ್ ರಾಜಣ್ಣ, ರಾಮ-ಲಕ್ಷ್ಮಣ, ದಡಿಯಾ ಹರೀಶ ಇತ್ಯಾದಿ ವಿಜಯನಗರ-ಕೆಂಗೇರಿ ನಡುವಿನ ಬಹುತೇಕ ರೌಡಿಗಳು, ರಿಯಲ್ ಎಸ್ಟೇಟ್ ಖದೀಮರು, ಕ್ರಿಮಿನಲ್ಸ್‌ಗಳ ಸಂಪರ್ಕ ಅರುಣ್‌ಗೌಡನಿಗಿತ್ತು.

ಹಾಗೊಮ್ಮೆ ಬೆಳಗೋಡು ಉಮೇಶ್ ಬಂಟನಾಗೇ ಕಂಡೋರ ಸೊತ್ತು ಕಬಳಿಸುವ ದಂಧೆಗಿಳಿದಿದ್ದರೆ ತಾನು ಬೆಳಗೋಡು ಪರವಾಗಿ ಯಾವ್ಯಾವ ಸೈಟಿಗೆ ಬೇಲಿ ಸುತ್ತಿದೆನೆಂಬುದರ ಮಾಹಿತಿಯನ್ನಾದರೂ ಕೊಡಬೇಕಿತ್ತು. ಇಲ್ಲಿ ಪೊಲೀಸರು ಚಂದ್ರಾಲೇಔಟ್‌ನಲ್ಲಿ 30x40 ಅಳತೆಯ ಮೂರು ನಿವೇಶನಗಳನ್ನು ಒಟ್ಟೊಟ್ಟಿಗೆ ಸೇರಿಸಿ ಅರುಣ್‌ಗೌಡ ಮೂಲಕ ಬೆಳಗೋಡು ಬೇಲಿ ಹಾಕಿಸಿದ್ದರೆ ಅದು ಯಾವ ಸೈಟೆಂದು ಪೊಲೀಸರು ಕೆದಕದೇ ತೆಪ್ಪಗಿರುತ್ತಾರಾ? ಹಾಗೇ ಬೇಲಿ ಹಾಕಲು ಹೋಗಿ ಯಾರನ್ನೋ ಹೊಡೆದು ಅರುಣ್‌ಗೌಡ ಜೈಲು ಪಾಲಾಗಿದ್ದರೆ ಹೊಡೆದದ್ದು ಯಾರನ್ನು ಯಾವ ಕೇಸಲ್ಲಿ ಜೈಲಿಗೆ ಹೋಗಿದ್ದು ಇತ್ಯಾದಿ ಯಾವ ವಿವರಗಳನ್ನೂ ಪೊಲೀಸರು ನೀಡುತ್ತಿಲ್ಲ ಏಕೆ? ಪೊಲೀಸರೇ ಹೇಳುವಂತೆ ಅರುಣ್‌ಗೌಡನಿಗೆ ಉಮೇಶ್ ವಿರುದ್ಧ ವಿಪರೀತ ಸಿಟ್ಟಿದ್ದದ್ದು ತನ್ನನ್ನು ಜೈಲಿನಿಂದ ಬಿಡಿಸಿ ತರಲಿಲ್ಲ ಎಂಬ ಕಾರಣಕ್ಕೆ!

ಕಂಡೋರ ಆಸ್ತಿ ಕಬಳಿಕೆಯನ್ನೇ ತನ್ನ ಕಸುಬಾಗಿಸಿಕೊಂಡಿದ್ದ ಅರುಣ್‌ಗೌಡ ಸೈಟಿಗಾಗಿ ಲಾಂಗು ಹಿಡಿಯುತ್ತಾನೆಂದರೆ ಹಾಸ್ಯಾಸ್ಪದ. ತಾನು ಜೈಲಿನಿಂದ ಹೊರಬರುವ ತಾಕತ್ತಿಲ್ಲದವನು ಯಾರೋ ಒಬ್ಬನನ್ನು ಅವಲಂಬಿಸಿ ಜೈಲಿಗೆ ಹೋಗುತ್ತಾನೆಂಬುದೇ ಬಾಲಿಶ. ಪೊಲೀಸರ ಪ್ರಕಾರ ಅರುಣ್‌ಗೌಡ ಜೈಲಿಗೆ ಹೋಗಿದ್ದು ನಿಜವಾದರೂ ಆತನ ಬಿಡುಗಡೆಯಾಗಿದ್ದು ವಾರದ ಹಿಂದಲ್ಲ, ಮೂರು ತಿಂಗಳ ಹಿಂದೆ. ತನ್ನನ್ನು ಜೈಲಿನಿಂದ ಬಿಡಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಓರ್ವ ಎಮ್ಮೆಲ್ಲೆ ಅಭ್ಯರ್ಥಿಯನ್ನು, ಪತ್ನಿಯನ್ನು ಗೆಲ್ಲಿಸಿ ಕೌನ್ಸಿಲರ್ ಮಾಡಿದವನನ್ನು, ಬಿಜೆಪಿ ನಾಯಕನನ್ನು, ಚಿಲ್ಲೂ ರೌಡಿಯೊಬ್ಬ ಕಾರಿನಲ್ಲಿ ಚೇಸ್ ಮಾಡಿ ನಡುರಸ್ತೆಯಲ್ಲಿ ಕತ್ತರಿಸಿ ಹಾಕುತ್ತಾನೆಂದರೆ ಅದನ್ನು ಭೂಗತಲೋಕದಲ್ಲಿ ಅಂಬೆಗಾಲಿಡುವ ಹುಡ್ಗ ಕೂಡ ಒಪ್ಪಲಾರ.

ಪೊಲೀಸ್ ಕತೆ?

ಜೈಲಿಂದ ಬಿಡಿಸಲಿಲ್ಲ ಎಂದು ಕೊಲೆಗೆ ಕೈ ಹಾಕುವುದಾದರೆ ಕೊಲೆ ಮಾಡಿ ಜೈಲಿಗೆ ಹೋದರೆ ಇಡೀ ಜೀವನಪೂರ್ತಿ ಜೈಲಲ್ಲೇ ಇರಬೇಕಾಗುತ್ತದೆ ಎಂಬ ಪರಿವೆ ಅರುಣ್‌ಗೌಡನಿಗಲ್ಲ, ತಲೆನೆಟ್ಟಗಿರುವ ಯಾವೊಬ್ಬ ಕ್ರಿಮಿಗಾದರೂ ಇದ್ದೇ ಇರುತ್ತದೆ. ಅಂಥವನು ಕೊಂದು ಜೈಲುಪಾಲಾಗುತ್ತಾನೆಂದರೆ ಅದಕ್ಕಿರುವ ಕಾರಣ ತನ್ನನ್ನು ಜೈಲಿಂದ ಬಿಡಿಸಲಿಲ್ಲ ಎಂಬುದಲ್ಲ ಮತ್ತು ಕೊಲೆಯ ಹಿಂದೆ ಕೊಂದನೆನ್ನಲಾದವನು ಮಾತ್ರವೇ ಇಲ್ಲ. ಬೆಳಗೋಡು ಉಮೇಶ್ ಹತ್ಯೆಯ ಹಿಂದೆ ಪೊಲೀಸರು ನೀಡುತ್ತಿರುವ ಕ್ಷುಲ್ಲಕ ಕಾರಣವಲ್ಲದೆ ಮತ್ತಾವುದೋ ದೊಡ್ಡ ಕಾರಣ ಮತ್ತು ದೊಡ್ಡ ಕೈ ಇರಲೇಬೇಕು-


ಹಂತಕ ಅರುಣ್‌ಗೌಡ

ಇದರರ್ಥ ಕೊಂದವರು ಪೊಲೀಸ್ ಹಿ... ಅಥವಾ ಕೊಲೆಗೆ ಕಾರಣ ಪೊಲೀಸರು ನಂಬಿಕೆ... ಕಾರಣವಲ್ಲ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದ... ಪೊಲೀಸರು ಅಸಲೀ ಹಂತಕರನ್ನು ಪತ್ತೆ ಹಚ್... ಕೊಲೆಗೆ ನಿಜವಾದ ಕಾರಣವನ್ನು ಹುಡುಕಬೇಕಿತ್ತು... ಏನನ್ನೋ ಬಚ್ಚಿಡುತ್ತಿದ್ದಾರೆ, ಮುಚ್ಚಿಡುತ್ತಿದ್ದಾರೆ. ಬ... ಆಪ್ತರೇ ಹೇಳುವಂತೆ ಅರುಣ್‌ಗೌಡ ಬ... ಲಿಟಿಗೇಷನ್ನಿಗೆ ಸಂಬಂಧಪಟ್ಟಂತೆ ಉಮೇಶ್... ಒಡನಾಟವಿಟ್ಟುಕೊಂಡಿದ್ದಿರಬಹುದು. ಆದರೆ ... ಪಾಲಿಗಾತ ಬಂಟನಾಗಲಿ ಅವನನ್ನೇ ಅವಲಂ... ಜೈಲಿಗೆ ಹೋಗಿದ್ದಾಗಲಿ ಸಾಧ್ಯವಿರಲಿಲ್ಲ. ಹಾಗೆ... ಕಾರಣಕ್ಕೆ ಅರುಣ್‌ಗೌಡ ಜೈಲು ಪಾಲಾಗಿದ್ದರೆ... ಸತಾಯಿಸಿ ದುಷ್ಮನಿ ಕಟ್ಟಿಕೊಂಡು ಬೆಳಗೋಡು... ಲಾಭ ತಾನೇ ಏನು? ಚಂದ್ರಾಲೇಔಟಿನಲ್ಲಿ... ಸೈಟುಗಳಿಗೆ ಅರುಣ್‌ಗೌಡ ಬೇಲಿ ಹಾಕಿದ್ದೇ ಆಗಿ... ಅದು ಯಾರಿಗೆ ಸೇರಿದ ಸೈಟು. ಮೂರು ಸೈಟ್... ಕಮ್ಮಿಯೆಂದರೂ ಐದು ಕೋಟಿಯ ಬಾಬತ್ತು... ಜೊತೆ ಕೈಜೋಡಿಸಿ ಬೇಲಿ ಹಾಕಿದ್ದ ಅರು... ಕಾಲಕ್ರಮೇಣ ಎದುರು ಪಾರ್ಟಿ ಕಡೆ ಕೈಜೋ... ಯಡ್ಡಿಗೆ ಡೀಲು ಕುದುರಿಸಿಕೊಂಡು ಬೆಳಗೋ... ಮುಗಿಸಿಯೇಬಿಟ್ಟನೇ?

ಯಾರೂ ದಿಕ್ಕಿಲ್ಲ?

ಅಂದರೆ ಮೂರೂ ಸೈಟಿಗೆ ಬೆಳಗೋಡು... ಕೈಹಾಕಿದ್ದ ಬೇರೆ ಯಾರೋ ಖದೀಮನೇ ಅರು... ಖರೀದಿಸಿರಬೇಕು ಅಥವಾ ತನಗಿಂತ ದೊ... ರೌಡಿ ಸಹೋದರರಿಬ್ಬರ 'ಆದೇಶ' ಪಾ... ಗುರುವಿಗೇ ಉಲ್ಟಾ ಹೊಡೆದಿರಲೂ ಬಹುದು... ಬೆಳಗೋಡು ಕೈಹಾಕಿದ್ದ ಸೊತ್ತಿಗೆ ಅತ್ತಿಗುಪ್ಪೆ ... ಕೈಹಾಕಿದ್ದನೆ? ಇದು ಒಂದು ಸಾಧ್ಯತೆಯಾದ... ದೊಡ್ಡ ಸಾಧ್ಯತೆ ಕಾಣಿಸುವುದು ಬೆಳಗೋಡು... ಕೈಹಾಕಿದ್ದ ಇತರೇ ಸೊತ್ತುಗಳ ವಿಷಯದಲ್ಲಿ... ಕೇವಲ ಬಿಜೆಪಿ ನಾಯಕನಾಗಲಿ, ಪಾಲಿಕೆ ... ಯಾಗಲಿ ಅಲ್ಲದೆ ಮಾಹಿತಿ ಹಕ್ಕು ಕಾರ್ಯಕರ್ತ...


ರಾಜರಾಜೇಶ್ವರಿನಗರದ ಅತೀ ಮುಖ್ಯ ... ಸೊತ್ತೊಂದನ್ನು ನಕಲಿ ದಾಖಲೆ ಸೃಷ್ಟಿಸಿ ... ಬಲಾಢ್ಯ ಡೆವಲಪರ್ ಕಂ ರಾಜಕಾರಣಿಯ... ಬೆಳಗೋಡು ಆರ್‌ಟಿಐ ಅರ್ಜಿ ಹಾಕಿದ್ದರು. ವಿ... ದೊಡ್ಡ ರಿಯಲ್ ಎಸ್ಟೇಟ್ ಸಾಮ್ರಾಜ್ಯ... ಭೂಮಿಯ ವಿರುದ್ಧವೂ ದಾಖಲೆ ಸಂಗ್ರ... ನಟೋರಿಯಸ್ ಬಿಲ್ಡರ್ ಓರ್ವನ ಐನೂರು... ಟೌನ್‌ಶಿಪ್ಪಿಗೂ ಉಮೇಶ್ ಆರ್‌ಟಿಐ ಅ... ಕೊಡುತ್ತಿದ್ದರು. ಇಷ್ಟಲ್ಲದೆ ಇನ್ನೂ ಯಾವ... ಲಿಟಿಗೇಷನ್ನಿಗೆ ಬೆಳಗೋಡು ಕೈಯಿಟ್ಟಿದ್ದರು... ಅದ್ಯಾವುದೂ ಪೊಲೀಸರಿಗೆ ಬೇಕಿಲ್ಲ. ಗೊತ್ತಿ... ಬಾಯಿಬಿಡುತ್ತಿಲ್ಲ.

ಖುದ್ದು ಬೆಳಗೋಡು ರಾಜಕೀ... ಸೋಮಣ್ಣನಿಗೇ ತನ್ನ ಬೆಂಬಲಿಗನ ಕೊಲೆ... ಹಂತಕರನ್ನು ಪತ್ತೆಹಚ್ಚುವ ಆಸಕ್ತಿಯಿಲ್ಲ ಎಂದ... ಬಿಜೆಪಿಯಾಗಲಿ, ಶೆಟ್ಟರ್, ಶೋಭಾ ಕರಂ... ತಲೆ ಕೆಡಿಸಿಕೊಳ್ಳುವುದುಂಟಾ? ಓರ್ವ ದ... ಶೋಷಿತರ ಪರ ದನಿಯೆತ್ತುತ್ತಲೇ ಬೆಳೆದ ... ಹೀಗೆ ಅನ್ಯಾಯವಾಗಿ ನಡುರಸ್ತೆಯಲ್ಲಿ ಕೊಲೆ... ಯಾರೊಬ್ಬರಿಗೂ ದೊಡ್ಡ ಸಂಗತಿಯಲ್ಲ. ... ಶಿಕ್ಷಿಸುವ ಆಸಕ್ತಿಯೇ ಯಾರಲ್ಲೂ ಉಳಿದ...


■ ರಾ.ಸೋ...


ಲೋಕಾಯುಕ್ತ ಲಫಡಾ


ಅಡಿಯ ನಡೆಯಲ್ಲಿ 'ಸ್ವಜನಪಕ್ಷಪಾತದ' ಜಾಡು


ಸುಭಾಷ್ ಅಡಿ

ನ್ಯಾ. ಭಾಸ್ಕರ್‌ರಾವ್ ಮತ್ತವರ 'ಲೋಕಾ'(ಕಂಟಕ) ...ಮು ನಡೆಸಿದ್ದ ಭ್ರಷ್ಟಾಚಾರದ ಹಗರಣ ಹೊರಬಿದ್ದ ...ತ 'ಲೋಕಾಯುಕ್ತ' ಎಂಬ ನಂಬಿಕಸ್ಥ ಸಂಸ್ಥೆ ಜನರ ...ಯಲ್ಲಿ ಮೊದಲಿನಷ್ಟು ಪವಿತ್ರವಾಗೇನೂ ಉಳಿದಿಲ್ಲ. ...ರುವವರೂ ಮನುಷ್ಯರೇ ತಾನೆ! ಎಂಬ ಅಭಿಪ್ರಾಯಕ್ಕೆ ...ರ್ವಜನಿಕರು ತಲುಪಿಯಾಗಿದೆ. ಆದರೆ ಕುಲಗೆಟ್ಟು ...ಹೋಗಿರುವ ವ್ಯವಸ್ಥೆಯೊಳಗೆ ಜನ ಕಿಂಚಿತ್ತಾದರೂ 'ಭರವಸೆ ...ರಿಸಿಕೊಳ್ಳಬೇಕೆಂದರೆ ಲೋಕಾಯುಕ್ತದಂತಹ ಸಂಸ್ಥೆ ತನ್ನ ...ಸ್ಥಾಪಕ ಉದ್ದೇಶಗಳಿಗೆ ಅಂಟಿಕೊಂಡು ಅಸ್ತಿತ್ವ ...ರಿಸಿಕೊಳ್ಳುವುದು ಬಹಳ ಮುಖ್ಯ. ವಿಪರ್ಯಾಸ ವೆಂದರೆ, ...ನ ಸಾರಥಿಗಳೇ ಲೋಕಾಯುಕ್ತವನ್ನು ಅದರ ...ದ್ದೇಶದಿಂದ ಬಲುದೂರಕ್ಕೆ ಎಳೆದುತಂದಿದ್ದಾರೆ. ಅದನ್ನು ...ಗೆ ವಾಪಾಸ್ ಮೂಲಾಶಯದತ್ತ ಕೊಂಡೊಯ್ಯಬೇಕೆಂದರೆ ...ದಲು ಅದರೊಳಗಿರುವ ಭ್ರಷ್ಟ ಹಾಗೂ ವಿವಾದಸ್ಥ ...ಗಳನ್ನು ಮುಲಾಜಿಲ್ಲದೆ ನಿವಾರಿಸಿಕೊಳ್ಳಬೇಕಿದೆ. ಅದು ...ಲೋಕಾಯುಕ್ತ ಭಾಸ್ಕರ್‌ರಾವ್ ಪದಚ್ಯುತಿಗೆ ಮಾತ್ರ ...ಮಿತವಾದರೆ ಸಾಲದು! ಭ್ರಷ್ಟಾರೋಪ ಮತ್ತು ...ಷ್ಟಸಾಧ್ಯತೆಯ ಪ್ರತಿ ಅಧಿಕಾರಿ, ಸಿಬ್ಬಂದಿಗೂ 'ಲೋಕಾ' ...ಷ್ಕರಣೆಯ ಬಿಸಿ ತಟ್ಟಬೇಕಿದೆ. ಆಗ ಮಾತ್ರ ಲೋಕಾಯುಕ್ತ ...ದ ಭ್ರಷ್ಟಾಚಾರವನ್ನು ಆಮೂಲಾಗ್ರವಾಗಿ ಕಿತ್ತೆಸೆಯಲು ...ಧ್ಯ. ಇಲ್ಲದೇಹೋದಲ್ಲಿ ಒಂದು ರಂಬೆಯನ್ನಷ್ಟೇ ಕತ್ತರಿಸಿ ...ಟ್ಟುಸಿರು ಬಿಟ್ಟಂತಾಗುತ್ತದೆ. ಭ್ರಷ್ಟಾಚಾರವೆಂಬ ಹೆಮ್ಮರಕ್ಕೆ ...ಒಂದು ಕೊಂಬೆ ಯಾವ ಲೆಕ್ಕ!


ಎಸ್.ಬಿ. ಮಜಗೆ


ಶೆಟ್ಟರ್


ಭಾಸ್ಕರ್ ರಾವ್

ಉಪಲೋಕಾಯುಕ್ತ ಸುಭಾಷ್ ಅಡಿಯ ಪದಚ್ಯುತಿ ...ಸ್ತಾಪವನ್ನೂ ನಾವು ಈ ಆಯಾಮದಿಂದಲೇ ...ನೋಡಬೇಕಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳ 'ಪೊಲಿಟಿಕಲ್ ...ಆಟ'ವನ್ನು ಹೊರಗಿಟ್ಟು ನೋಡಿದಾಗ ಸುಭಾಷ್ ಅಡಿಯ ...ಕಾರ್ಯವೈಖರಿ ಯಾವತ್ತಿದ್ದರೂ ಲೋಕಾಯುಕ್ತ ಸಂಸ್ಥೆಗೆ ...ಕಂಟಕವೇ ಸರಿ ಎನ್ನುವುದು ಮನದಟ್ಟಾಗುತ್ತದೆ. ಇತ್ತೀಚೆಗಷ್ಟೆ ...ನಾನು ಭ್ರಷ್ಟಾಚಾರ ನಡೆಸಿದ್ದು ಸಾಬೀತಾದರೆ ನನ್ನ ಸ್ಥಾನಕ್ಕೆ ...ರಾಜೀನಾಮೆ ನೀಡಲು ಸಿದ್ಧ' ಅಂತ ಅಡಿ ಸಾಹೇಬರು ...ಬಬ್ಬರಿಸಿದ್ದಾರೆ. ಆದರೆ ಭ್ರಷ್ಟಾಚಾರ ಎನ್ನುವುದು ಕೇವಲ ...ಲಂಚಗುಳಿತನಕ್ಕೆ ಮಾತ್ರ ಸೀಮಿತವಾದುದಲ್ಲ; ಅಧಿಕಾರ ...ದುರುಪಯೋಗ, ಸ್ವಜನಪಕ್ಷಪಾತ, ಕರ್ತವ್ಯವ್ಯಾಪ್ತಿ ...ಮೀರುವುದು ಹೀಗೆ ಅದಕ್ಕೆ ವಿಶಾಲಾರ್ಥವಿದೆ ಎಂಬುದನ್ನು ...ಅಡಿ ಸಾಹೇಬರು ಅರ್ಥಮಾಡಿಕೊಳ್ಳಬೇಕು. ಅಡಿ ...ಕಾರ್ಯವೈಖರಿಯಲ್ಲಿ ಅಧಿಕಾರ ದುರುಪಯೋಗದ ...ಕುರುಹು ಇದುವರೆಗೂ ಕಾಣಿಸಿಲ್ಲವಾದರೂ ಸ್ವಜನಪಕ್ಷಪಾತ ...ಮತ್ತು ಕರ್ತವ್ಯ ವ್ಯಾಪ್ತಿ ಮೀರುವಿಕೆಗಳನ್ನು ಢಾಳಾಗಿ ಕಾಣಬ...ಹುದು. ಅಂದಹಾಗೆ, ಇವೆರಡೂ ಲಂಚಗುಳಿತನದ ಆರಂಭಿಕ ...ಮೆಟ್ಟಿಲುಗಳು ಎಂಬುದನ್ನು ಬಿಡಿಸಿ ಹೇಳುವ ಜರೂರಿಲ್ಲ.

...ಶೆಟ್ಟರ್ ಸಾಂಗತ್ಯದ 'ಅಡಿ ಗಲ್ಲು'!

...ನ್ಯಾಯಮೂರ್ತಿ ಸುಭಾಷ್ ಅಡಿಯ ಉಪಲೋಕಾ...ಯುಕ್ತ ಕುರ್ಚಿಗೆ ಕಂಟಕವಾಗಿರೋದೆ ಹುಬ್ಬಳ್ಳಿ-ಧಾರವಾಡದ ...ಡಾ॥ ಶೈಲಾ ಪಾಟೀಲ್ ಪ್ರಕರಣ. ಲೋಕಾಯುಕ್ತ ಸಂಸ್ಥೆಯಲ್ಲಿ ...ಇಬ್ಬರು ಉಪಲೋಕಾಯುಕ್ತರಿರುವುದು ತಿಳಿದಿರುವಂತದ್ದೇ. ...ಈ ಎರಡೂ ಹುದ್ದೆಗಳ ನಡುವೆ ಅಧಿಕಾರ ವಿಲೇವಾರಿಯ ...ಗೊಂದಲ ಎದುರಾಗಬಾರದೆಂಬ ಕಾರಣಕ್ಕೆ ವ್ಯವಸ್ಥಿತ ಅಧಿಕಾರ ...ಹಂಚಿಕೆಯೂ ನಡೆದಿದೆ. 2011ರಲ್ಲಿ ಲೋಕಾಯುಕ್ತರಾಗಿದ್ದ ...ಶಿವರಾಜ್ ಪಾಟೀಲರು 05.08.2011ರಂದು ಹೊರಡಿಸಿದ್ದ ...ಒಂದು ಆದೇಶದಲ್ಲಿ ಉಪಲೋಕಾಯುಕ್ತ-1 ಹುದ್ದೆಯಲ್ಲಿದ್ದ ...ಎಸ್.ಬಿ. ಮಜಗೆಯವರಿಗೆ 13 ಜಿಲ್ಲೆಗಳ ವಿಚಾರಣೆಯನ್ನೂ (ಗುಲ್ಬರ್ಗಾ, ಕೊಪ್ಪಳ, ರಾಯಚೂರು, ಯಾದಗಿರಿ, ಬೀದರ್, ಉತ್ತರಕನ್ನಡ, ಬಾಗಲಕೋಟೆ, ಹಾವೇರಿ, ಬಿಜಾಪುರ, ಧಾರವಾಡ, ಗದಗ, ಬೆಂಗಳೂರು ನಗರ, ಬೆಳಗಾಂ) ಮತ್ತು ಉಪಲೋಕಾಯುಕ್ತ-2 ಹುದ್ದೆಯಲ್ಲಿದ್ದ ಆರ್.ಗುರುರಂಜನ್‌ರಿಗೆ 17 ಜಿಲ್ಲೆಗಳ (ಮಂಡ್ಯ, ಮೈಸೂರು, ರಾಮನಗರ, ಹಾಸನ, ಕೋಲಾರ, ಚಾಮರಾಜನಗರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ಬಳ್ಳಾರಿ, ಶಿವಮೊಗ್ಗ, ಚಿಕ್ಕಬಳ್ಳಾಪುರ, ಕೊಡಗು, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ ಮತ್ತು ಉಡುಪಿ) ವಿಚಾರಣೆಯನ್ನೂ ವಹಿಸಿಕೊಟ್ಟಿದ್ದರು. ಈ ಹಿಂದೆ ದಾಖಲಾಗಿದ್ದ ಕೇಸುಗಳನ್ನು ಮತ್ತು ಈ ದಿನಾಂಕದ ನಂತರ ದಾಖಲಾಗುವ ಕೇಸುಗಳನ್ನು ಇದೇ ಹಂಚಿಕೆಯಡಿ ಉಪಲೋಕಾಯುಕ್ತರು ನೋಡಿಕೊಳ್ಳಬೇಕಿತ್ತು. ಗುರುರಂಜನ್‌ರು ಉಪಲೋಕಾಯುಕ್ತ-2 ಹುದ್ದೆಯಲ್ಲಿರುವವರೆಗೂ ಈ ನಿಯಮ ಯಾವ ಗೊಂದಲವಿಲ್ಲದೇ ಪಾಲನೆಯಲ್ಲಿತ್ತು. ಆದರೆ ಯಾವಾಗ ಗುರುರಂಜನ್ ತಮ್ಮ ಹುದ್ದೆಯಿಂದ ನಿವೃತ್ತಿ ಹೊಂದಿ ಆ ಜಾಗಕ್ಕೆ ಹೈಕೋರ್ಟ್ ನ್ಯಾಯಾಧೀಶರಾಗಿದ್ದ ಅಡಿ ಸಾಹೇಬರು ಅಡಿಯಿಟ್ಟರೊ ಆಗಿಂದಲೇ ಅಧಿಕಾರ ಹಂಚಿಕೆಯ ನಿಯಮ ಅಯೋಮಯವಾಗಲು ಶುರುವಾಯ್ತು. ತಮ್ಮದಲ್ಲದ ಜಿಲ್ಲೆಯ ಪ್ರಕರಣ ವಿಚಾರಣೆ ಕೈಗೆತ್ತಿಕೊಂಡು ಸರ್ಕಾರಕ್ಕೆ ಶಿಫಾರಸ್ಸು ಬರೆಯೋದು, ತಮ್ಮದಲ್ಲದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಅಧಿಕಾರಿಗಳ ಸಭೆ ಕರೆದು ನಿರ್ದೇಶನ ನೀಡೋದನ್ನು ಅಡಿ ಎಗ್ಗಿಲ್ಲದಂತೆ ಮಾಡಿಕೊಂಡು ಬಂದಿದ್ದರು. ಈ ಶೈಲಾ ಪಾಟೀಲ್ ಪ್ರಕರಣ ಕೂಡಾ ಅಂತದ್ದರಲ್ಲಿ ಒಂದು.

ಈ ಪ್ರಕರಣ ದಾಖಲಾದದ್ದು ಹುಬ್ಬಳ್ಳಿ-ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿ. ಡಾ॥ ಶೈಲಾ ಹುಬ್ಬಳ್ಳಿಯ ಕಾರ್ಪೊರೇಷನ್ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞೆಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಆಸ್ಪತ್ರೆಗೆ ಬರುತ್ತಿದ್ದ ಸರ್ಕಾರಿ ಔಷಧಗಳನ್ನು ಗುಪ್ತವಾಗಿ ತನ್ನ ಗಂಡ ರಾಜಶೇಖರ ಪಾಟೀಲ್ ಹಳೆ ಹುಬ್ಬಳ್ಳಿಯಲ್ಲಿ ನಡೆಸುತ್ತಿರುವ ಮೃತ್ಯುಂಜಯ ನರ್ಸಿಂಗ್ ಹೋಮ್ ಎಂಬ ಖಾಸಗಿ ಸಂಸ್ಥೆಗೆ ಸಾಗಿಸುತ್ತಿದ್ದಳು ಎಂಬ ದೂರೊಂದು ಲೋಕಾಯುಕ್ತಕ್ಕೆ 2011ರಲ್ಲಿ ಸಲ್ಲಿಕೆಯಾಗಿತ್ತು. ಅಧಿಕಾರ ಹಂಚಿಕೆಯ ಪ್ರಕಾರ ಹುಬ್ಬಳ್ಳಿ-ಧಾರವಾಡ ವ್ಯಾಪ್ತಿ ಒಳಪಡುವುದು ಲೋಕಾಯುಕ್ತ-1 ಹುದ್ದೆಯಲ್ಲಿದ್ದ ಎಸ್.ಬಿ. ಮಜಗೆಯವರಿಗೆ. ಅದೇ ಪ್ರಕಾರ ಅವರು ಇಲಾಖಾ ತನಿಖೆ ನಡೆಸುವಂತೆ ತಂಡವೊಂದನ್ನು ರಚಿಸಿ ವರದಿ ನೀಡುವಂತೆ ಆದೇಶಿಸಿದ್ದರು. ವರದಿಯನ್ನು ಆಧರಿಸಿ ಆರೋಪಿಯ ಮೇಲೆ ಕ್ರಮಕೈಗೊಳ್ಳಬೇಕೊ ಅಥವಾ ಆರೋಪ ವಜಾಗೊಳಿಸಬೇಕೊ ಎಂಬ ಶಿಫಾರಸ್ಸನ್ನು ಸರ್ಕಾರಕ್ಕೆ ರವಾನೆ ಮಾಡಬೇಕಾದ ಜವಾಬ್ದಾರಿ ಕೂಡಾ ಎಸ್.ಬಿ.ಮಜಗೆಯವರದೇ ಆಗಿತ್ತು.

ಆದರೆ ತಮ್ಮ ವ್ಯಾಪ್ತಿಗೇ ಒಳಪಡದ ಈ ಪ್ರಕರಣದ ಕುರಿತಂತೆ ಸರ್ಕಾರಕ್ಕೆ ಶಿಫಾರಸ್ಸು ಕಳಿಸಿದ್ದು ಮಾತ್ರ ಉಪಲೋಕಾಯುಕ್ತ ಸುಭಾಷ್ ಅಡಿ. ಅದೂ, ಆರೋಪಿ ಶೈಲಜಾ ಮೇಲೆ ಕೇಳಿಬಂದಿರುವ ಆರೋಪಗಳು ಸತ್ಯಕ್ಕೆ ದೂರವಾಗಿದ್ದು ಅವರ ಮೇಲೆ ಕ್ರಮಕೈಗೊಳ್ಳಬಾರದು ಎಂಬ ಶಿಫಾರಸ್ಸನ್ನು ಸರ್ಕಾರಕ್ಕೆ ರವಾನೆ ಮಾಡಿದ್ದರು. ಆ ವರದಿಯನ್ನನುಯವೇ ಸಿದ್ದರಾಮಯ್ಯ ಸರ್ಕಾರ ಶೈಲಜಾ ಮೇಲಿನ ಇಲಾಖಾ ತನಿಖೆಯನ್ನು ಕೈಬಿಟ್ಟಿತ್ತು. ತಮ್ಮ ವ್ಯಾಪ್ತಿಯಲ್ಲಿದ್ದ ಕೇಸಿನ ಕುರಿತು ಅಡಿ ಅಂತಿಮ ತೀರ್ಪು ಬರೆದದ್ದು ಮತ್ತೊಬ್ಬ ಉಪಲೋಕಾಯುಕ್ತ ಮಜಗೆಗೆ ವಿಪರೀತ ಅಸಮಾಧಾನ ತಂದಿತ್ತು. 20.03.2014ರಂದು ಲೋಕಾಯುಕ್ತರಿಗೆ ಪತ್ರ ಬರೆದಿದ್ದ ಮಜಗೆಯವರು 'ಸುಭಾಷ್ ಅಡಿಯವರ ಈ ವರ್ತನೆಯಿಂದ ನನಗೆ ಆಶ್ಚರ್ಯ ಮಾತ್ರವಲ್ಲ ಆಘಾತವೂ ಆಗಿದೆ. ಲೋಕಾಯುಕ್ತರೇ ಅಧಿಕಾರ ಹಂಚಿಕೆ ಮಾಡಿದ ಮೇಲೂ ನನ್ನ ವ್ಯಾಪ್ತಿಯ ಪ್ರಕರಣವನ್ನು ಅವರು ಕೈಗೆತ್ತಿಕೊಂಡಿದ್ದು ಕಾನೂನುಬಾಹಿರ. ಈ ಮೊದಲು ಹೀಗಿರಲಿಲ್ಲ. ಆದರೆ ಅಡಿಯವರು ಉಪಲೋಕಾಯುಕ್ತರಾಗಿ ಬಂದನಂತರ ವ್ಯಾಪ್ತಿ ಮೀರಿ ಕೆಲಸ ಮಾಡುವ ಪ್ರಕರಣ ಹೆಚ್ಚಾಗಿವೆ' ಅಂತ ತಮ್ಮ ಅಸಮಾಧಾನವನ್ನು ತೋಡಿಕೊಂಡಿದ್ದರು.

ಆ ಪತ್ರಕ್ಕೆ ಪ್ರತಿಯಾಗಿ ಇಲಾಖಾ ತನಿಖೆಯೂ ನಡೆಯಿತು, ಇದು ಕಡತ ವಿಲೇವಾರಿ ಸಿಬ್ಬಂದಿಗಳ ಯಡವಟ್ಟು, ಮಜಗೆಯವರಿಗೆ ಕೊಡಬೇಕಿದ್ದ ಕಡತವನ್ನು ಅಡಿಯವರಿಗೆ ತಲುಪಿಸಿದ್ದರಿಂದ ಇಂಥಾ ಯಡವಟ್ಟಾಯಿತು ಎಂಬ ತೀರ್ಪೂ ಬಂತು. ಇವತ್ತು ಅಡಿ ಸಾಹೇಬರು ಅದೇ ತೀರ್ಪನ್ನು ಮುಂದಿಟ್ಟು 'ಇದು ಸಿಬ್ಬಂದಿಗಳ ಯಡವಟ್ಟು' ಅಂತ ಹೇಳಿಕೊಳ್ಳುತ್ತಿದ್ದಾರೆ. ಆದರೆ ಕೆದಕುತ್ತಾ ಹೋದರೆ ಪ್ರಕರಣ ಇಷ್ಟು ಸಲೀಸಾಗಿ ಇದ್ದಂತೆ ಕಾಣುತ್ತಿಲ್ಲ.

ಯಾಕೆಂದರೆ ಪ್ರಕರಣದ ಆರೋಪಿಯಾಗಿರುವ ಶೈಲಜಾ ಪಾಟೀಲ್, ಜಗದೀಶ್ ಶೆಟ್ಟರ್‌ರ ಹೆಂಡತಿ ಶಿಲ್ಪಾ ಶೆಟ್ಟರ್‌ರ ಖಾಸಾ ದೋಸ್ತ್ ಮತ್ತು ದೂರದ ಸಂಬಂಧಿಯೂ ಹೌದು. ಅಲ್ಲದೇ ಜಗದೀಶ್ ಶೆಟ್ಟರ್ ಹಾಗೂ ಸುಭಾಷ್ ಅಡಿಯವರ ಬಾಂಧವ್ಯವನ್ನು ಖುದ್ದು ಅಡಿ ಸಾಹೇಬರೇ 'ನಮ್ಮಿಬ್ಬರದು 35 ವರ್ಷಗಳ ಸ್ನೇಹ, ಜೊತೆಜೊತೆಯಲ್ಲೇ ಲಾ ಪ್ರಾಕ್ಟೀಸ್ ಮಾಡಿದೋರು' ಅಂತ ಹೇಳಿಕೊಂಡಿದ್ದಾರೆ. ತಮ್ಮ ವ್ಯಾಪ್ತಿಗೇ ಬರದ ಪ್ರಕರಣವೊಂದಕ್ಕೆ ಕ್ಲೀನ್‌ಚಿಟ್ ನೀಡಿ ಶಿಫಾರಸ್ಸು ಮಾಡೋದು, ಆ ಪ್ರಕರಣದಲ್ಲಿ ಶೈಲಜಾ ಪಾಟೀಲ್ ಎಂಬ ಶೆಟ್ಟರ್ ಕುಟುಂಬದ ಸ್ನೇಹಿತೆಯೇ ಆರೋಪಿಯಾಗಿರೋದು, ಜಗದೀಶ್ ಶೆಟ್ಟರ್‌ಗೂ ಮತ್ತು ಅಂತಹ ಶಿಫಾರಸ್ಸು ಬರೆದ ಅಡಿಯವರಿಗೂ ಮೂರು ದಶಕಗಳ ಆತ್ಮೀಯ ದೋಸ್ತಿ ಇರೋದು ಇವೆಲ್ಲಾ ತೀರಾತೀರಾ ಕಾಕತಾಳೀಯ ಅಂತ ನಂಬೋದು ಹೇಗೆ? ಶೆಟ್ಟರ್ ಸ್ನೇಹಕ್ಕೆ ಕಟ್ಟುಬಿದ್ದು ಇಲ್ಲಿ 'ಸ್ವಜನಪಕ್ಷಪಾತ' ನಡೆದಿಲ್ಲ ಎಂಬುದನ್ನು ತಳ್ಳಿಹಾಕಲಿಕ್ಕಾಗುವುದಿಲ್ಲ. ಕಾಂಗ್ರೆಸ್ ಶಾಸಕರು ಸುಭಾಷ್ ಅಡಿಯನ್ನು ಉಪಲೋಕಾಯುಕ್ತ ಹುದ್ದೆಯಿಂದ ಪದಚ್ಯುತಿಗೊಳಿಸುವ ಪ್ರಯತ್ನಕ್ಕೆ ಮುಂದಾಗುತ್ತಿದ್ದಂತೆಯೇ ಅದಕ್ಕೆ 'ಪೊಲಿಟಿಕಲ್ ರಿವೇಂಜ್' ಲೇಪ ನೀಡಿ ಅಡಿಯ ರಕ್ಷಣೆಗೆ ಜಗದೀಶ್ ಶೆಟ್ಟರ್ ಕಸರತ್ತು ನಡೆಸುತ್ತಿರೋದು ಕೂಡಾ ಇಂತಹ ಅನುಮಾನಗಳನ್ನು ಮತ್ತಷ್ಟೂ ಗಾಢವಾಗಿಸುತ್ತದೆ.

ಅಡಿಗೆ ಅಷ್ಟೂ ಗೊತ್ತಾಗಲಿಲ್ಲವೇ?

ಸುಭಾಷ್ ಅಡಿ ಕೇವಲ ವಕೀಲಿ ವೃತ್ತಿ ಮಾಡಿಕೊಂಡವರಲ್ಲ; ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿ ಆಗಿದ್ದಂತವರು. ಹಾಗೆಂದ ಮೇಲೆ ಅವರಿಗೆ ತನ್ನ ಕರ್ತವ್ಯದ ಜವಾಬ್ದಾರಿ ಮತ್ತು ವ್ಯಾಪ್ತಿಯ ಅರಿವು ಇದ್ದೇ ಇರುತ್ತದೆ. ಅಂತದ್ದರಲ್ಲಿ 'ಯಾರೋ ಸಿಬ್ಬಂದಿಗಳು ಎಲ್ಲಿಯೋ ಇಡಬೇಕಾದ ಕಡತವನ್ನು ತಂದು ನನ್ನ ಮೇಜಿನ ಮೇಲಿಟ್ಟರು, ನಾನು ಶಿಫಾರಸ್ಸು ಬರೆದೆ' ಅಂತ ಹೇಳುತ್ತಾರೆಂದರೆ ಏನೆನ್ನಬೇಕು? ಇರುವ ಮೂವತ್ತು ಜಿಲ್ಲೆಗಳಲ್ಲಿ ತನಗೆ ಹಂಚಿಕೆಯಾದ ಜಿಲ್ಲೆಗಳು ಯಾವುವು, ಈ ಪ್ರಕರಣ ನಡೆದಿರೋ ಜಿಲ್ಲೆ ಯಾವುದು, ಕಡೇಪಕ್ಷ ಇಂತಹದ್ದೊಂದು ಪ್ರಕರಣದ ಕುರಿತು ನಾನು ತನಿಖೆಗೇನಾದರು ಆದೇಶಿಸಿದ್ದೇನೇ ಎಂಬ ಮಿನಿಮಮ್ ವಿವೇಚನೆ ಕೂಡಾ ಅಡಿಯವರಲ್ಲಿ ಕೆಲಸ ಮಾಡಲಿಲ್ಲವೆಂದರೆ ಅಚ್ಚರಿಪಡಬೇಕು. ಇನ್ನು ಲೋಕಾಯುಕ್ತ ಇಲಾಖೆಯ ಆಂತರಿಕ ತನಿಖೆಯಿಂದ ಸಿಬ್ಬಂದಿಗಳು ತಪ್ಪಿತಸ್ಥರೆಂದು ಸಾಬೀತಾಗಿದೆ ಎಂಬುದಾಗಿ ಅವರು ಹೇಳುತ್ತಿದ್ದಾರೆ. ಇದು ಹೊಸದೇನೂ ಅಲ್ಲ, ಯಾವುದೇ ಇಲಾಖೆಯಿರಲಿ, ಮೇಲಧಿಕಾರಿಗಳ ರಕ್ಷಣೆಗಾಗಿ ಕೆಳದರ್ಜೆಯ ನೌಕರರು ಬಲಿಪಶುವಾಗೋದು ಸರ್ವೇಸಾಮಾನ್ಯ. ಈ ಆಂತರಿಕ ತನಿಖೆ ನಡೆಯುವ ವೇಳೆಗಾಗಲೇ ಭರ್ತಿ ಭ್ರಷ್ಟ ಕೂಪಕ್ಕೆ ಬಿದ್ದಿದ್ದ ಲೋಕಾಯುಕ್ತ ಸಂಸ್ಥೆಯ ಆಂತರಿಕ ತನಿಖೆಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸದೇ ಇರಲಾದೀತೆ!

ಇನ್ನು ಸುಭಾಷ್ ಅಡಿಯವರು ತಮ್ಮ ವ್ಯಾಪ್ತಿ ಮೀರಿ ವರ್ತಿಸಿರೋದು ಇದೊಂದೇ ಪ್ರಕರಣವಲ್ಲ. ಇಂತಹ ಹಲವಾರು ನಿದರ್ಶನಗಳಿವೆ. ಬೆಳಗಾವಿ ನಗರದ ಮಹಾಂತೇಶ ನಗರ ಮತ್ತು ಮಹಾಮೂರ್ತಿ ನಗರ ವ್ಯಾಪ್ತಿಯ ಸಾರ್ವಜನಿಕ ಆಸ್ತಿ ಪ್ರಕರಣದಲ್ಲೂ ಹೀಗೇ ವರ್ತಿಸಿದ್ದುಂಟು. ಅಸಲಿಗೆ ಬೆಳಗಾವಿ ವ್ಯಾಪ್ತಿ ಕೂಡಾ ಅವರ ಅಧಿಕಾರ ಹಂಚಿಕೆಗೆ ಒಳಪಡುವುದಿಲ್ಲ. ಅದು ಬರೋದು ಲೋಕಾಯುಕ್ತ-1 ವ್ಯಾಪ್ತಿಯಲ್ಲಿ. ಹಾಗಿದ್ದರೂ ನಗರದ ಸರ್ವೇ ನಂಬರ್ 7502ರ ಜಾಗವನ್ನು ಸ್ಲಂ ನಿವಾಸಿಗಳು ಅಕ್ರಮವಾಗಿ ಆಕ್ರಮಿಸಿಕೊಂಡಿದ್ದಾರೆ ಎಂಬ ಪ್ರಕರಣವನ್ನು ಕೈಗೆತ್ತಿಕೊಂಡು ಬೆಳಗಾವಿ ಜಿಲ್ಲಾಧಿಕಾರಿಗೆ ನೋಟಿಸ್ ಜಾರಿ ಮಾಡಿದ್ದರು. ಅಲ್ಲದೇ ನಿಯಮಗಳನ್ನು ಉಲ್ಲಂಘಿಸಿ ಬೆಳಗಾವಿ ಜಿಲ್ಲೆಯ ಅಧಿಕಾರಿಗಳ ಸಭೆ ಕರೆದಿದ್ದರು.

ಕಬ್ಬು ಬೆಳೆಗಾರರ ಬಾಕಿ ಪಾವತಿಯ ಇನ್ನೊಂದು ಪ್ರಕರಣದಲ್ಲೂ ಸಹ ಬಾಗಲಕೋಟೆ, ಕಲಬುರ್ಗಿ, ಬೆಳಗಾವಿ, ವಿಜಯಪುರ ಮತ್ತು ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಿದ್ದರು. ಇವ್ಯಾವುವೂ ಲೋಕಾಯುಕ್ತ-2 ವ್ಯಾಪ್ತಿಗೆ ಒಳಪಡುವುದಿಲ್ಲ ಅನ್ನೋದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ.

ಉಪಲೋಕಾಯುಕ್ತರಾಗಿದ್ದ ಎಸ್.ಬಿ.ಮಜಗೆ 20.03.2014ರಂದು ಲೋಕಾಯುಕ್ತರಿಗೆ ಬರೆದಿದ್ದ ಪತ್ರದಲ್ಲೇ 'ಅಡಿಯವರು ನನ್ನ ವ್ಯಾಪ್ತಿಯ ಜಿಲ್ಲೆಗಳಿಗೆ ಭೇಟಿ ಕೊಟ್ಟಾಗ ಅಲ್ಲಿನ ಅಧಿಕಾರಿಗಳ ಸಭೆ ನಡೆಸುತ್ತಾರೆ. ಇದು ನಿಯಮಾನುಸಾರ ಸರಿಯಲ್ಲ' ಅಂತ ಆರೋಪಿಸಿದ್ದನ್ನೂ ಸ್ಮರಿಸಿಕೊಳ್ಳಬಹುದು. ಲೋಕಾಯುಕ್ತ ಸಂಸ್ಥೆಗೆ ತನ್ನ ಘನತೆಯನ್ನು ಮರಳಿಸಿಕೊಡಬೇಕಾದಂತಹ ಅನಿವಾರ್ಯತೆಯಿರುವ ಈ ಸಂದರ್ಭದಲ್ಲಿ 'ಅನುಮಾನಾಸ್ಪದ ಕಾರ್ಯವೈಖರಿ' ಹೊಂದಿರುವ ಸುಭಾಷ್ ಅಡಿಯನ್ನೂ ಉಪಲೋಕಾಯುಕ್ತ ಹುದ್ದೆಯಿಂದ ಏಕೆ ಪದಚ್ಯುತಿಗೊಳಿಸಬಾರದು?

ಅಂದಹಾಗೆ, ಸುಭಾಷ್ ಅಡಿ ಸಾಹೇಬರು ನಾನೇನೂ ಭ್ರಷ್ಟಾಚಾರ ನಡೆಸಿಲ್ಲ ಅಂತ ಹೇಳಿಕೊಳ್ಳುತ್ತಿದ್ದಾರೆ. ಆದರೆ, ಬೆಂಗಳೂರಿನ ನಾಗರಭಾವಿ ವಿನಾಯಕ ಹೌಸಿಂಗ್ ಬೋರ್ಡ್ ಕೋ-ಆಪರೇಟಿವ್ ಸೊಸೈಟಿಯ ಎರಡು ಎಕರೆ ಜಮೀನಿನ ಅಕ್ರಮ ಖಾತೆ ಬದಲಾವಣೆ ಪ್ರಕರಣದಲ್ಲಿ ಸುಭಾಷ್ ಅಡಿಯವರ ಖಾಸಾ ಅಳಿಯ ಕೆಎಎಸ್ ಅಧಿಕಾರಿ ಗಂಗಾಧರಸ್ವಾಮಿಯ ಹೆಸರು ಥಳುಕು ಹಾಕಿಕೊಂಡಿರೋದನ್ನು ಮರೆಯಲಾದೀತೆ? ಹಿಂದೊಮ್ಮೆ ಹೈಕೋರ್ಟ್ ವಜಾ ಮಾಡಿದ್ದ ಈ ಪ್ರಕರಣ ಈಗ ಮತ್ತೊಮ್ಮೆ ಲೋಕಾಯುಕ್ತ ಪೊಲೀಸರ ತನಿಖೆಯಲ್ಲಿದೆ. ಈಗಾಗಲೇ ಲೋಕಾಯುಕ್ತ ಸಂಸ್ಥೆಯ 'ಚೀಫ್‌ಮನ್ ಲೀಗಲ್ ಕೌನ್ಸಿಲ್' (ಸಿಎಲ್‌ಸಿ) ವಿಭಾಗವು ಗಂಗಾಧರಸ್ವಾಮಿ ಒಳಗೊಂಡಂತೆ ಎಲ್ಲಾ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ವಿಚಾರಣಾ ಅನುಮತಿಯನ್ನೂ ನೀಡಿ ಆಗಿದೆ. ಇಂಥಾ ಸಮಯದಲ್ಲಿ ಸುಭಾಷ್ ಅಡಿ ಉಪ ಲೋಕಾಯುಕ್ತ ಹುದ್ದೆಯಲ್ಲಿರುವುದು ಎಷ್ಟು ಕ್ಷೇಮ? ಎನ್ನುವ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಲೇಬೇಕಿದೆ.


■ ವರದಿಗಾರ

ಬಂಟ್ವಾಳ: ಹಿಂದೂ ಹುಡುಗನನ್ನೆ ಕೊಂದ ಭಜರಂಗಿ ಭುವಿತ್!!



ದಕ್ಷಿಣ ಕನ್ನಡ ಪಕ್ಕಾ ಹಿಂದೂತ್ವದ ಕಸಾಯಿಖಾನೆಯಂತಾಗಿ ಅದ್ಯಾವುದೋ ಕಾಲವಾಗಿಬಿಟ್ಟಿದೆ! ಇಷ್ಟು ದಿನ ಮುಸ್ಲಿಂ-ಕ್ರಿಶ್ಚಿಯನ್‌ರ ಗುರಿಯಾಗಿಸಿ ದಾಳಿ-ಹಲ್ಲೆ-ಕೊಲೆ-ಸುಲಿಗೆ-ಮಾನಭಂಗದ ಕಾರ್ಯಾಚರಣೆಗೆ ಇಳಿಯುತ್ತಿದ್ದ ಸಂಘ ಪರಿವಾರದ ಪಾತಕಿಗಳೀಗ ನರರಕ್ತದ ರುಚಿ ಹತ್ತಿದ ಚಂಡ ವ್ಯಾಘ್ರಗಳಂತಾಗಿದ್ದಾರೆ. ಭಜರಂಗಿ ಭೂತ ಗಣ ಮತೋನ್ಮತ್ತವಾದಾಗ ಹಿಂದೂ ಹುಡುಗಿರದೇ ಮಾನಕ್ಕೆ ಕೈ ಹಾಕುತ್ತಿದೆ; ಹಿಂದೂ ಹುಡುಗರ ರುಂಡವನ್ನೇ ಚೆಂಡಾಡುತ್ತಿದೆ. ಹಿಂದೂತ್ವದ ಹುಚ್ಚೇರಿಸಿ ಅಮಾಯಕ ಶೂದ್ರ ಸಂಕುಲವನ್ನು ಅಖಾಡಕ್ಕೆ ದಬ್ಬುತ್ತಿರುವ ಚೆಡ್ಡಿ ದೊರೆ ಕಲ್ಲಡ್ಕ ಮತ್ತು ಬಿಜೆಪಿ ಭಂಡರೇನೋ ಸದ್ಯಕ್ಕೆ ಸೇಫಾಗಿದ್ದಾರೆ.

ಆದರೆ ದೀಪಾವಳಿ ಹಬ್ಬದ ಲಕ್ಷ್ಮೀಪೂಜೆ ದಿನವೇ ಬಂಟ್ವಾಳದ ಬಡ ಹಿಂದೂ ಹುಡುಗ ಹರೀಶ್ ಪೂಜಾರಿಯ ಜೀವ ಆಪೋಶನ ಪಡೆದ ಭಜರಂಗ ದಳದ ಕಾಲಾಳುಗಳ ಖತರ್‌ನಾಕ್ ನಡೆ ಸೂಕ್ಷ್ಮವಾಗಿ ಅವಲೋಕಿಸಿದರೆ ಅದ್ಯಾಕೋ ಸಂಘ ಪರಿವಾರದ ಡಾನ್-ಡಾಕೂಗಳು ಹಿಂದೂತ್ವದ ಹುಲಿ ಸವಾರಿ ಹೊರಟಂತೆ ಭಾಸವಾಗುತ್ತದೆ. ಈ ನರಭಕ್ಷಕ ಹುಲಿ ಮುಂದೊಂದು ದಿನ ಕಾವಿ ಪಡೆಯನ್ನು ತಿಂದು ತೇಗಿದರೆ ಅಚ್ಚರಿಯೇನೂ ಇಲ್ಲ. ಭಟ್ಕಳದ ಭಯಂಕರ ಹಿಂದೂ ಮುಂದಾಳಾಗಿದ್ದ ಡಾ. ಚಿತ್ತರಂಜನ್ ಶಾಸಕನಾಗಿದ್ದಾಗಲೇ ಹತ್ಯೆಯಾಗಿ ಹೋದರು.




ಇದೊಂದು ಸಾಬರೇ ಮಾಡಿದ ಕೊಲೆಯೆಂದು ಸಂಘಗಳು ಬೊಂಬಡಾ ಬಜಾಯಿಸಿ ಎಂಪಿ-ಎಮ್ಮೆಲ್ಲೆ-ಮಂತ್ರಿಯಾಗಿ ಮೆರೆದರು. ಕಾಲಕ್ರಮೇಣ ರಾಜಕೀಯ ಮಹತ್ವಾಕಾಂಕ್ಷಿ ಹಿಂದೂತ್ವ ಹಿರೇಮಣಿಯೇ ಈ ಕಗ್ಗೊಲೆಯ ಸೂತ್ರಧಾರನೆಂಬ ಪುಕಾರು ಜನಜನಿತವಾಗಿ ಹೋಯ್ತು, ಇದೀಗ ಅಘೋಷಿತ ಸತ್ಯವಾಗಿ ಜನಮಾನಸದಲ್ಲಿ ಸ್ಥಿರವಾಗಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರ ನಡೆಸಿದಾಗಲೂ ಚಿತ್ತರಂಜನ್ ಕೊಲೆ ಪ್ರಕರಣ ಇತ್ಯರ್ಥವಾಗಲಿಲ್ಲ. ಬದಲಿಗೆ ಅಡ್ವಾಣಿಯಂಥ ಅಡ್ವಾಣಿಯೇ ದಿಲ್ಲಿಯಲ್ಲಿ ಗೃಹಮಂತ್ರಿಯಾಗಿದ್ದಾಗಲೇ ರಂಜನ್ ಹತ್ಯೆ ಪತ್ತೆಯಾಗದ ಪ್ರಕರಣವಾಗಿ 'ಸಿ' ರಿಪೋರ್ಟ್‌ನೊಂದಿಗೆ ಸಮಾಧಿ ಸೇರಿತು... ಏನಿದರ ಅರ್ಥ? ಹಿಂದೂ ಹುಲಿಯೇ ರಂಜನ್‌ರನ್ನು ನುಂಗಿ ನೊಣೆಯಿತೆಂದಲ್ಲವಾ? ಇದು ದಕ್ಷಿಣ ಕನ್ನಡ ತುಂಬ ಬಿಜೆಪಿ ಮಹಾಮಹಿಮರಿಗೆ ಪಾಠ ಆಗಬೇಕು.

ಸಂಘಿ ಸಂಚು!


ಟಿಪ್ಪು ಜಯಂತಿಯನ್ನೇ ನೆಪ ಮಾಡಿಕೊಂಡು ಹಿಂದೂ ಸಂಘಟನೆಯ ಸೈತಾನರು ಮಡಿಕೇರಿಗೆ ಹಾಕಿದ್ದ ಕೋಮು ಬೆಂಕಿಯ ಕಾವು ದಕ್ಷಿಣ ಕನ್ನಡಕ್ಕೂ ಹಬ್ಬಿತ್ತು, ನವೆಂಬರ್ 12ರಂದು ಎಸ್‌ಡಿಪಿಐ ಮಡಿಕೇರಿ ದುರ್ಘಟನೆ ಖಂಡಿಸಿ ಕಾರ್ಯಕ್ರಮ ಒಂದನ್ನು ಬಂಟ್ವಾಳದಲ್ಲಿ ನಡೆಸಿತ್ತು, ಇದು ಬಂಟ್ವಾಳದ ಭಜರಂಗಿಗಳ ಮತಾಂಧ ಪಿತ್ಥ ಕೆರಳಿಸಿತ್ತು, ಬಂಟ್ವಾಳವೆಂದರೆ ಹೇಳಿಕೇಳಿ ಕಲ್ಲಡ್ಕ ಹೈಕಮಾಂಡ್‌ನ ಹೆಡ್‌ಕ್ವಾಟರ್ಸ್ ಇರುವ ಪ್ರದೇಶದ ಪರಿಧಿಯಲ್ಲಿರುವ ಊರು. ಕೇಳಬೇಕಾ? ಭಜರಂಗಿಗಳು ಎಸ್‌ಡಿಪಿಐ ಕಾರ್ಯಕ್ರಮದ ಮೇಲೊಂದಿಷ್ಟು ಕಲ್ಲು ತೂರಿ ಗಲಭೆ ಎಬ್ಬಿಸಲು ಹವಣಿಸಿದರು. ಪೊಲೀಸರು ಪರಿಸ್ಥಿತಿ ತಹಬಂದಿಗೆ ತಂದರು.

ಸಣ್ಣ ಗಲಾಟೆಯಲ್ಲೇ ಮುಗಿದು ಊರು ಶಾಂತವಾಗಿದ್ದು ಭಜರಂಗಿಗಳಿಗೆ ಸಹಿಸಲಾಗಲಿಲ್ಲ, ಟಿಪ್ಪು ಹೆಸರಲ್ಲಿ ದೊಡ್ಡ ರಕ್ತಪಾತ, ಹತ್ಯೆ, ಸುಲಿಗೆ ನಡೆಸಿ ರಾಜಕೀಯ-ಸಾಮಾಜಿಕ ಮೈಲೇಜ್‌ಗೆ ಸಂಘಪರಿವಾರದ ಪರಾಕ್ರಮಿಗಳು ಸ್ಕೆಚ್ ಹಾಕಿಕೊಂಡಿದ್ದರು. ಮತಾಂಧ ಟೆನ್‌ಷನ್ ಸೃಷ್ಟಿಯಾದಾಗ ಅದರ 'ಸದುಪಯೋಗ' ಪಡೆಯುವ ಜಾಯಮಾನ ಆರ್‌ಎಸ್‌ಎಸ್ ರಿಂಗ್ ಮಾಸ್ಟರ್ ಕಲ್ಲಡ್ಕ ಭಟ್ ಬಳಗದ್ದು. ತಮ್ಮ ರಕ್ಕಸ ಪಡೆಗವರು ಕಲಿಸಿದ ಪಾಠವೂ ಅದೇ.



ಊರಿಗೆಲ್ಲ ಬೆಂಕಿ ಹಾಕಿ, ರಕ್ತದ ಕೋಡಿ ಹಾಕಿ ಕೇಕೆ ಹಾಕುವುದು. ಟಿಪ್ಪು ಜಯಂತಿ ಗೊಂದಲದಲ್ಲೂ ಬಂಟ್ವಾಳದ ಭಜರಂಗಿಗಳು ಅಂಥದೇ ಪಾತಕ ಮಾಡಿದ್ದಾರೆ.

ಒಂದೆರಡು ಸಾಬಿಗಳ ಅಥವಾ ಹಿಂದೂಗಳದೇ ಹೆಣ ಕೆಡವಿ ದೊಡ್ಡ ಕೋಮು ಯುದ್ಧ ಸೃಷ್ಟಿಸುವ ಸಂಚು ಭಜರಂಗಿ ಪಡೆ ಹಾಕಿತ್ತು, ಇದಕ್ಕೆಲ್ಲ ಕಲ್ಲಡ್ಕನ ಸ್ಟಾಂಡಿಂಗ್ ಇನ್‌ಸ್ಟ್ರಕ್ಷನ್ ಇದ್ದೇ ಇರುತ್ತದೆ ಬಿಡಿ. ಈ ಬಾರಿ ಬಂಟ್ವಾಳಕ್ಕೆ ಬೆಂಕಿ ಹಾಕುವ ಕರಾಮತ್ತಿನ ಮುಂದಾಳತ್ವ ವಹಿಸಿದ್ದು ಪರಮ ಪಾತಕಿ ಎಂದೇ ಪ್ರಖ್ಯಾತನಾಗಿದ್ದ ಭವಿತ್ ಶೆಟ್ಟಿ



ಎಂಬ ಭಜರಂಗಿ ಭಂಡ! ಈತ ಬಂಟ್ವಾಳ ಭಜರಂಗಿ ಪಡೆಯ ಸಹಸಂಚಾಲಕ. ಕಲ್ಲಡ್ಕ ಭಟ್ ಜತೆ ನಿಕಟಸಂಪರ್ಕ ಹೊಂದಿರುವ ಈತ ಸದಾ ಕಾಲು ಕೆರೆದು ಜಗಳ ಕಾಯಲು ಕೆರಳಿಯೇ ಇರುವ ವಿಕ್ಷಿಪ್ತ ಮನಃಸ್ಥಿತಿಯವನು.

ಹಿಂದೂ ಹರೀಶ್ ಹತ್ಯೆ!!

ಬಂಟ್ವಾಳದಲ್ಲಾದ ಎಸ್‌ಡಿಪಿಐ ಕಾರ್ಯಕ್ರಮದ ಹೊತ್ತಲ್ಲಿ ಮಡಿಕೇರಿ ಮಟ್ಟದ ಗಲಭೆ ಹುಟ್ಟು ಹಾಕುವ ಪ್ಲಾನ್ ಭುವಿತ್ ಶೆಟ್ಟಿ ಬಳಗದ ಭಜರಂಗಿಗಳದಾಗಿತ್ತು, ಆದರೆ ಅಂತಹದ್ದೇನೂ ಘಟಿಸದೆ ಬಾಲ ಸುಟ್ಟುಕೊಂಡ ಬೆಕ್ಕಿನಂತಾಗಿತ್ತು ಭಜರಂಗಿ ಪಡೆ. ಹಾಗಾಗಿ ಸಂಜೆ ಹೊತ್ತಿಗಾದರೂ ಒಂದೆರಡು ಆಹುತಿ ಪಡೆಯಲು ಭುವಿತ್ ಶಾಸ್ತ್ರ ಸನ್ನದ್ಧನಾಗಿದ. ತನ್ನೊಂದಿಗೆ ಅಚ್ಯುತ ಪೂಜಾರಿ ಮತ್ತು ಮೂವರನ್ನು ಸೇರಿಸಿಕೊಂಡು ಹಳೆಗೇಟ್ ಎಂಬ ನಿರ್ಜನ ಪ್ರದೇಶದಲ್ಲಿ ಅಡ್ಡೆ ಹಾಕಿ ಬಲಿಗಾಗಿ ಕಾದು ಕೂತ. ಆ ದಾರಿಯಾಗಿ ಬರುವ ಸಾಬರಲ್ಲಿ ಯಾರಾದರೂ ಇಬ್ಬರನ್ನು ಕೊಂದು ಹಾಕುವ ಯೋಚನೆ ಈ ಪಂಚ ಪಾತಕಿಗಳ ಪಡೆಯದಾಗಿತ್ತು,

ತಮ್ಮ ಓಮ್ನಿ ಕಾರನ್ನು ರಸ್ತೆಗಡ್ಡವಾಗಿ ನಿಲ್ಲಿಸಿದ್ದ ಹಂತಕ ಪಡೆ ಆಹುತಿಗಾಗಿ ಕಾಯುತ್ತಿತ್ತು, ಅದೇ ದಾರಿಯಾಗಿ ಮನೆಗೆ ಹೊರಟಿದ್ದ ನಾವೂರಿನ ಹರೀಶ್ ಪೂಜಾರಿ ಮತ್ತು ಬಡಂಗಡಿಯ ಸಮೀವುಲ್ಲಾನ ಬೈಕ್ ಅಡ್ಡ ಹಾಕಿದ್ದಾರೆ. ಸಮೀವುಲ್ಲಾ ಸಾಬಿಗಳು ಧರಿಸುವ ಬಿಳಿ ಟೊಪ್ಪಿ ಹಾಕಿಕೊಂಡಿದ್ದ, ಹೀಗಾಗಿ ತಮಗೆ ಬೇಕಾದ ಸಾಬಿಗಳು ಬಂದರೆಂಬ ಖುಷಿಯಿಂದ ನುಗ್ಗಿದ ಹಂತಕರು ಬೈಕ್ ಬೀಳಿಸಿದ್ದಾರೆ. ಪಕ್ಕದಲ್ಲಿದ್ದ ತಂತಿ ಮುಳ್ಳಿನ ಬೇಲಿಯ ಮೇಲೆ ಹೋಗಿಬಿದ್ದಿದ್ದಾರೆ ಹರೀಶ್ ಮತ್ತು ಸಮೀವುಲ್ಲಾ. ಸಮೀವುಲ್ಲಾ ತಪ್ಪಿಸಿಕೊಂಡು ಓಡಿದ್ದಾನೆ. ಓಡುವಾಗ ಹರೀಶನಿಗೂ "ಓಡು, ಇದು ಕಮ್ಯುನಲ್ ರೇಡು... ನನ್ನನ್ನು ಕೊಲ್ತಾರೆ..." ಎಂದು ತುಳುವಿನಲ್ಲಿ ಅರಚಿದ್ದಾನೆ. ಆದರೆ ಮುಳ್ಳುಬೇಲಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಹರೀಶ್‌ನಿಗೆ ತಪ್ಪಿಸಿಕೊಳ್ಳಲಾಗಲಿಲ್ಲ.

ಹಿಂದೂ ಕಟುಕರು ಚಾಕುವಿನಿಂದ ಸಮೀವುಲ್ಲಾ ಮತ್ತು ಹರೀಶ್‌ಗೆ ಸಿಕ್ಕಸಿಕ್ಕಲ್ಲಿ ಇರಿದಿದ್ದಾರೆ. ಹರೀಶ್ ಆಸ್ಪತ್ರೆಗೆ ಒಯ್ಯುವ ದಾರಿಯಲ್ಲೇ ಜೀವ ಬಿಟ್ಟಿದ್ದಾನೆ. ಸಮೀವುಲ್ಲಾ ಬಚಾವಾಗಿದ್ದಾನೆ. ಭುವಿತ್ ಶೆಟ್ಟಿಯ ಹಿಂದೂತ್ವದ ಕ್ರೌರ್ಯಕ್ಕೆ ನಿಷ್ಪಾಪಿ ಪೋರ ಹರೀಶ್ ಬಲಿಯಾಗಿದ್ದಾನೆ. ಕೋಮುಗಲಭೆ ಹುಟ್ಟುಹಾಕುವ ಯೋಚನೆಯಿಂದಲೇ ತಾನು ಬೈಕ್ ಸವಾರರ ಮೇಲೆ ದಾಳಿ ಮಾಡಿದ್ದೆಂದು ರಕ್ತಪಿಪಾಸು ಭುವಿತ್ ಪೊಲೀಸರ ಎದುರು ಹೇಳಿರುವುದು ಕರಾವಳಿಯ ತುಂಬ ಹಿಂದುಳಿದವರ ಬ್ರೈನ್‌ವಾಶ್ ಚೆಡ್ಡಿ ಬ್ರಾಹ್ಮಣರು ಅದೆಷ್ಟು ವ್ಯವಸ್ಥಿತವಾಗಿ ಮಾಡಿದ್ದಾರೆಂಬುದಕ್ಕೆ ಜೀವಂತ ನಿದರ್ಶನದಂತಿದೆ.

ಗುರಿ ತಪ್ಪಿತಾ?

ಕಲ್ಲಡ್ಕ ಕಮಾಂಡ್‌ನ ಅಡ್ಡೆಯ ಆಚೀಚೆಯ ಹಳ್ಳಿಗಳೆಲ್ಲ ಮತಾಂಧ ಅಸಹಿಷ್ಣುತೆಯಿಂದ ತಹತಹಿಸುತ್ತಿವೆ. ಅಂಥಾದ್ದರಲ್ಲಿ ಬಂಟ್ವಾಳದ ಹಳೆಗೇಟು, ನಾವೂರು, ಬಡಂಗಡಿ ಏರಿಯಾದಲ್ಲಿ ಅಪರೂಪದ ಕೋಮು ಸೌಹಾರ್ದತೆ ನೆಲೆಸಿದೆ. ಬಡಂಗಡಿಯಲ್ಲಿ ಸಮೀವುಲ್ಲಾನ ಒಂದು ಮನೆ ಬಿಟ್ಟರೆ ಉಳಿದಿದ್ದೆಲ್ಲ ಹಿಂದೂಗಳದು. ಇವರೆಲ್ಲ ಪ್ರೀತಿ-ವಿಶ್ವಾಸದಿಂದ ಬಾಳ್ವೆ ನಡೆಸಿದ್ದಾರೆ. ಸಮೀವುಲ್ಲಾ ಕೆಲದಿನಗಳ ಹಿಂದೆ ಹಿಂದೂ ಹುಡುಗಿಯೊಬ್ಬಳು ಬಾವಿಯಲ್ಲಿ ಬಿದ್ದಾಗ ಬಚಾಯಿಸಲು ಹೆಣಗಾಡಿ ಊರವರ ಮೆಚ್ಚುಗೆ ಗಳಿಸಿದ್ದ. ಯಾವ ತಂಟೆ-ತಕರಾರಿಗೂ ಹೋಗದ ಸಮೀವುಲ್ಲಾ ಕೊಂಕಣಿಗರ ಜಯಲಕ್ಷ್ಮಿ ಹಾರ್ಡ್‌ವೇರ್ ಅಂಗಡಿಯಲ್ಲಿ ಕೆಲಸಕ್ಕಿದ್ದ. ಅವರ ಲಾರಿ ಓಡಿಸುತ್ತ ನೆಮ್ಮದಿಯಿಂದಿದ್ದ. ಈಚೆಗಷ್ಟೇ ಗಲ್ಫ್‌ನಿಂದ ಬಂದಿದ್ದ ಸಮೀವುಲ್ಲಾನಿಗೆ ಹಿಂದೂಗಳದೇ ಒಡನಾಟ ಜಾಸ್ತಿ.

ನಾವೂರಿನ ಹರೀಶ್ ಎಲೆಕ್ಟ್ರಿಶಿಯನ್ ಆಗಿ ಬದುಕುತ್ತಿದ್ದ ಬಡಪಾಯಿ. ಈತನೇ ಆ ಬಿಲ್ಲವ ಕುಟುಂಬಕ್ಕೆ ಆಧಾರವಾಗಿದ್ದ. ಹೊಟ್ಟೆ ಹೊರೆಯುದ ಗೊಡ್ಡು ಹಿಂದೂತ್ವದ ಗೊಡವೆಗೆ ಆತ ಎಂದೂ ಹೋದವನಲ್ಲ. ಸಂಜೆಯಾಗುತ್ತಲೇ ವಾಲಿಬಾಲ್ ಆಡೋದು ಆತನ ಹಾಬಿಯಾಗಿತ್ತು, ಹಾಗೆಯೇ ಸಮೀವುಲ್ಲಾಗೂ ವಾಲಿಬಾಲ್ ಖಯಾಲಿಯಿತ್ತು, ಇಬ್ಬರೂ ಆತ್ಮೀಯ ಗೆಳೆಯರೇನಲ್ಲದಿದ್ದರೂ ಪರಿಚಯದವರು. ಅಂದು ನವೆಂಬರ್ 12ರ ದುರ್ದಿನದಂದು ಹಳೆಗೇಟ್‌ನ ಅಂಗಡಿಯಲ್ಲಿ ಇಬ್ಬರೂ ಭೇಟಿಯಾಗಿದ್ದಾರೆ. ದೀಪಾವಳಿ ಹಬ್ಬದ ಸಡಗರದ ದೀಪಕ್ಕೆ ಎಣ್ಣೆ ಮತ್ತು ಹಾಲು ಒಯ್ಯಲೆಂದು ಹರೀಶ್ ಅಂಗಡಿಗೆ ಬಂದಿದ್ದರೆ, ಸಮೀವುಲ್ಲಾ ವಾಲಿಬಾಲ್ ಆಡಿ ಬಂದಿದ್ದ. ಇಬ್ಬರು ಜತೆಯಾಗೇ ತಂಪು ಪಾನೀಯ ಕುಡಿದಿದ್ದಾರೆ. ಜತೆಗೆ ಮತ್ತೆರಡು ಗೆಳೆಯರು ಇದ್ದಿದ್ದರು.

ಮನೆಯೆಡೆ ಹೊರಟಿದ್ದ ಸಮೀವುಲ್ಲಾ ತನ್ನ ಬೈಕ್‌ನಲ್ಲಿ ಡ್ರಾಪ್ ಕೊಡುವುದಾಗಿ ಹೇಳಿದ್ದಾನೆ. ಹರೀಶ್ ಬೈಕ್ ಏರಿದ್ದಾನೆ. ಸಮೀವುಲ್ಲಾನ ಬೈಕ್ ಮುಂದೆ ಹೋದರೆ ಹಿಂದೆ ಸ್ಕಿವರ್ಟ್ ಬೈಕ್‌ನಲ್ಲಿ ಮತ್ತೊಬ್ಬರ ಕೂಡ್ರಿಸಿಕೊಂಡು




ಬಂದಿದ್ದಾನೆ. ಮೊದಲು ಬಂದ ಬೈಕ್ ಅಡ್ಡಗಟ್ಟಿದ ಭುವಿತ್ ಶೆಟ್ಟಿಯ ಪಡೆ ಚಾಕುವಿನಿಂದ ಇರಿದು ಹಾಕಿದೆ. ಸಮೀವುಲ್ಲಾನ ಟೋಪಿ ಕಂಡು ಸಾಬಿಗಳೆಂದು ಭಾವಿಸಿ ಭುವನ್ ಗ್ಯಾಂಗ್ ದಾಳಿ ಮಾಡಿದೆಯೆಂಬುದು ಸಾಮಾನ್ಯ ಅಭಿಪ್ರಾಯ. ಡಿಜಿಪಿ ಅಮೃತ್‌ಪಾಲ್ ಸಹ ಹಾಗೇ ಹೇಳಿದ್ದಾರೆ. ಆದರೆ ಹಂತಕ ಭುವಿತ್ ಶೆಟ್ಟಿಯ ಕ್ರಿಮಿನಲ್ ಲಹರಿ ಗಮನಿಸಿದರೆ ಆತ ಹಿಂದೂವನ್ನೇ ಕೊಂದು ಬಹುಸಂಖ್ಯಾತರ ಕೆರಳಿಸುವ ಪ್ಲಾನ್ ಹಾಕಿರುವ ಅನುಮಾನ ಬರುತ್ತದೆ.

ಭುವಿತ್ ಶೆಟ್ಟಿ ಗೊತ್ತಿದ್ದೇ ಹರೀಶ್‌ನ ಕೊಂದಿದ್ದಾನೆಂದು ವಿಶ್ಲೇಷಿಸುವವರೂ ಇದ್ದಾರೆ. ಸುಲಭವಾಗಿ ಸಿಕ್ಕಿದ್ದ ಸಮೀವುಲ್ಲಾನ ಮೇಲೆ ರೌಡಿ ದಳ ಮುಗಿಬಿದ್ದಿಲ್ಲ. ಹರೀಶ್‌ನನ್ನೇ ಗುರಿಯಾಗಿಟ್ಟು ದಾಳಿ ಮಾಡಿದಂತೆ ಕಾಣಿಸುತ್ತದೆ. ಹಿಂದೂಗಳು ದಾಳಿಗಿಳಿದರೆ ಸಾಬರ ಮಾರಣಹೋಮ ಮಾಡಬಹುದೆಂಬ ದುರಾಲೋಚನೆ ಭುವಿತ್‌ಗೆ ಇದ್ದರೆ ಅದು ಸಹಜ ಹಿಂದೂತ್ವದ ಹಿಡನ್ ಅಜೆಂಡಾ ತಾನೆ? ಹೀಗಾಗಿ ಭುವಿತ್‌ನ ಗುರಿ ಮಿಸ್ ಆಗಿ ಹರೀಶ್ ಕೊಲ್ಲಲ್ಪಟ್ಟಿಲ್ಲ; ಆತ ಗುರಿ ಮುಟ್ಟಿದ್ದಾನೆಂದೇ ಹೇಳಲಾಗುತ್ತಿದೆ. ಗಲಭೆ ಹುಟ್ಟು ಹಾಕಿ ಮೈಕಾಯಿಸಿಕೊಳ್ಳೋರಿಗೆ ಹಿಂದೂ ಹೆಣ ಬಿದ್ದರೇನು? ಸಾಬರ ಶವವಾದರೇನು? ಇದು ಭುವಿತ್‌ನ ಸಿಂಪಲ್ ಹಿಂದೂ ಪಾಲಿಸಿ. ನಿಜಕ್ಕೂ ಹಿಂದೂ ಮೇಲೆ ಪ್ರೀತಿ-ಮಮಕಾರ ಇದ್ದಿದ್ದೇ ಆದರೆ, ಬಲಿಯ ಪೂರ್ವಾಪರ ಪರಿಶೀಲಿಸುವ ಮುನ್ನೆಚ್ಚರಿಕೆ ವಹಿಸುತ್ತಿರಲಿಲ್ಲವಾ? ಭುವಿತ್ ಉದ್ದೇಶ ಸಾಬರ ಕೆಣಕುವುದಲ್ಲ; ಬದಲಾಗಿ ಬಹುಸಂಖ್ಯಾತ ಹಿಂದೂಗಳ ಪ್ರಚೋದಿಸಿ ಸಾಬರ ಸಾಮೂಹಿಕ ಹತ್ಯೆಗೆ ಇಳಿಸುವುದಾಗಿತ್ತು?

ಸಂಘ ಪರಿವಾರಿಗಳು ಹೋಮ್‌ಸ್ಟೇ, ಪಬ್ ಮೇಲೆ ದಾಳಿ ಮಾಡಿ ಹಿಂದೂ ಹುಡುಗಿಯರ ಮಾನವನ್ನೇ ಹರಾಜಾಕಿದ್ದು ಮತ್ತು ಲವ್ ಜಿಹಾದ್ ನೆಪದಲ್ಲಿ ಹಿಂದೂ ಹುಡುಗಿಯರ ಮಾನಹರಣ ಮಾಡಿದ್ದೆಲ್ಲ ನೆನಪಿಸಿಕೊಂಡರೆ ಹರೀಶ್ ಕೊಲೆ ಬಗ್ಗೆ ಸಂಶಯ ಮೂಡದೇ ಇರದು.

ಭುವಿತ್ ಜಾತಕ

ಈಗ ಜೈಲು ಪಾಲಾಗಿರುವ ಭುವಿತ್ ಶೆಟ್ಟಿ ಹಿಂದೂತ್ವದ ಅತಿರೇಕದಿಂದ ಹಾದಿ ತಪ್ಪಿದ ಬರೀ ಇಪ್ಪತ್ತೈದರ ಹರೆಯದ ಹುಡುಗ. ಬಂಟ ಸಮುದಾಯದ ಸ್ಥಿತಿವಂತ ಕುಟುಂಬದ ಈತ ಸಜ್ಜನರಾದ ಸಂಜೀವಶೆಟ್ಟರ ಮಗ. ಕಲ್ಲಡ್ಕ ಭಟ್ಟನ ಹೊಡಿ-ಬಡಿ-ಕಡಿ ಬೋಧನೆಯ ಪ್ರಯೋಗಶಾಲೆಯಲ್ಲಿ ತಯಾರಾಗಿರುವ ಭುವಿತ್ ಮಾಡಬಾರದ್ದೆಲ್ಲ ಮಾಡಿ ಬಂಟ್ವಾಳ ನಗರ ಪೊಲೀಸ್



ಆರೋಪಿಗಳ ಬಂಧಿಸಿ ಒಯ್ಯುತ್ತಿರುವುದು



...ಟರ್ ಎಂಬ ಬಿರುದು ಸಂಪಾದಿಸಿದ್ದಾನೆ. ...ದ ಪಾತಕ-ಪುಂಡಾಟ ಹೆತ್ತವರಿಗೇ ಸರಿ ...ಗಾಗಿ ಹೆತ್ತ ತಂದೆಯೇ ಈತನ ಜತೆ ...ತೂ ಆಡುವುದಿಲ್ಲವೆಂದು ಬಂಟ್ವಾಳದ ...ಹೇಳುತ್ತಾರೆ.

...ಡಿಪ್ಲೊಮಾ ಪಡೆದಿರುವ ಭುವಿತ್ ಒಳ್ಳೆಯ ...ಮತಾಂಧ ಟ್ವೀಟ್ ಮಾಡಬಲ್ಲ. ...ಪ್ರಚೋದನಕಾರಿ, ಹಿಂಸಾತ್ಮಕ ಪೋಸ್ಟ್ ...ತ ಸಿದ್ಧಹಸ್ತ. ಇದೆಲ್ಲ ಬಿಟ್ಟುಬಿಡು. ...ಎಂದು ಅಕ್ಕಭಾವ ಅದೆಷ್ಟು ಹೇಳಿದರೂ ...ದಲ್ಲಿ ಕಮ್ಯುನಲ್ ಗೂಂಡಾಗಿರಿ ಮಾಡುತ್ತ ... ಕಳೆದ ನವೆಂಬರ್ 12ರಂದು ...ಸ್‌ಡಿಪಿಐ ಮಾಡಿದ್ದ ಕಾರ್ಯಕ್ರಮದ ...ತೂರಿದ್ದು ಸಿಸಿ ಕ್ಯಾಮರಾದ ಫುಟೇಜ್‌ನಲ್ಲಿ ...ಸಾಗಿಸುವವರ ಮೇಲೆ ಹಲ್ಲೆ ಮಾಡಿದ್ದು ...ದ ದೇವರ ದೊರೆಗಳ ಹೀಯಾಳಿಸಿ ...ತಾಣದಲ್ಲಿ ಪೋಸ್ಟ್ ಹಾಕಿದ್ದಕ್ಕೆ ಕ್ರಿಮಿನಲ್ ...ಮೇಲಾಗಿದೆ.

... ಹಿಂದೂತ್ವದ ಗರಡಿ ಮನೆಯಲ್ಲಿ ...ನ್ ಎಂದು ಗುರುತಿಸಿಕೊಂಡಿದ್ದು ...ನ್ಯ ಪರ ಹೋರಾಟದ ಹೊತ್ತಲ್ಲಿ. ಆಗ ...ವ್ಯಾಪಾರಿ ದಂಡಿನ ವಿರುದ್ಧ ತಿರುಗಿ ಬಿದ್ದು ...ಪತಿ ನಡೆಸಿತ್ತು. ಕಲ್ಲಡ್ಕ ಭಟ್ಟರಿಗೂ- ...ಗೂ ಅದ್ಯಾವುದೋ ಕಾರಣಕ್ಕೆ ವೈಮನಸ್ಸು ...ಸೇಡು ಕಲ್ಲಡ್ಕ ಭಟ್ಟ ತೀರಿಸಿಕೊಳ್ಳಲು ... ದೇವಧೂತರ ಮೇಲೆ ಛೂಬಿಟ್ಟಿದ್ದ. ... ಸೌಜನ್ಯ ಕೇಸ್ ಬಳಸಿಕೊಂಡು ಧರ್ಮ ...ಣೆಯಲು ಸ್ಕೆಚ್ ಹಾ... ಕಾರ್ಯಾಚರಣೆಗೆ ...ತ್ತಲ್ಲಿ ಭಜರಂಗಿ ಭುವಿತ್ ಧರ್ಮಸ್ಥಳದ ...ಟಿ ಬಳಗವನ್ನು ಸಾಮಾಜಿಕ ತಾಣದಲ್ಲಿ ...ಸಿದ್ದ.

... 24x7' ಎಂಬ ವೆಬ್‌ಸೈಟ್‌ನಲ್ಲಿ ...ಎಂಬ ಗ್ರೂಪ್ ಈತ ಜಾಲತಾಣದಲ್ಲಿ ... ಮಂತ್ರಿ ಕಂ ಬಂಟ್ವಾಳದ ಶಾಸಕ ...ಮತ್ತು ಕಾಂಗ್ರೆಸ್‌ನ ಹಿರಿಯ ನಾಯಕ ...ರಿ ವಿರುದ್ಧ ಬಾಯಿಗೆ ಬಂದಂತೆ ಟ್ವೀಟ್ ...ಮೇಲೆ ಎಳೆದುಕೊಂಡಿದ್ದ ಈ ಎಂಪಿ

...ಲ್ಲಿ ಭೀಭತ್ಸ ಕೋಮು ಪ್ರಚೋದಕ ...ರಂತರವಾಗಿ ಈತ ಹಾಕುತ್ತ ಬಂದಿದ್ದಾನೆ. ...ವ ಅವಕಾಶವನ್ನೂ ಈತ ಬಿಡದೇ ... 'ಗರಡುಪುರಾಣ' ಎಂಬ ಟ್ವೀಟರ್ ...ಧಕ ಎಂ.ಎಂ. ಕಲಬುರ್ಗಿ ಹತ್ಯೆಯನ್ನು ... ಸಮರ್ಥಿಸಿಕೊಂಡಿದ್ದ. "ಹಿಂದೂತ್ವ ...ಗೆ ನಾಯಿಗಳಂತೆ ಸತ್ತು ಹೋಗುತ್ತಾರೆ... ...ರ್ತಿ... ಇಂದು ಕಲಬುರ್ಗಿ... ಮುಂದಿನ ... ಭಗವಾನ್...." ಎಂದು ಇಂಗ್ಲಿಷ್‌ನಲ್ಲಿ ...ಗಿ ಬಿತ್ತರಿಸಿದ್ದ!

...ದಿನ ಮುಂದಿನ ಗುರಿ ಭಗವಾನ್" ...ಸಿದ ಅಪರಾಧಕ್ಕಾಗಿ ಜೈಲು ಸೇರಿದ್ದ ...ಮೀನು ಪಡೆದು ಹೊರಬಂದ ನಂತರ ...ವಿಲ್ಲ. ಹವ್ಯಾಸಿ ಛಾಯಾಚಿತ್ರಗಾರನಾದ ...ಬುದ್ಧಿ ಹಿಂದೂ ಮುಂದಾಳುಗಳ ...ಗಿ ಕೊಲೆಗಡುಕನಾಗುವುದು ದುರಂತ. ...ಗ್ರಾಫರ್ ಆಗಬಹುದಿದ್ದ ಸಣ್ಣ ಪ್ರಾಯದ ...ಷ್ಯದ ಹಳ್ಳ ಓಡಿದಿದ್ದಾನೆ! ಕರಾವಳಿ ...ಂಜಿ, ಅನಾಹುತ ಹುಟ್ಟುಹಾಕಿದ ...ರದ್ದು!

...ವ್ರು ಸಂಕುಲಕ್ಕೆ ಸದ್ಬುದ್ಧಿಕೊಡಾದೀತಾ? ...ಸ್ವ ಬರ್ಬಾದ್ ಆಗಿದ್ದು ಹಿಂದೂತ್ವದ ...ನಾದೀತಾ?

■ ವರದಿಗಾರ

ಬಂಟ್ವಾಳದಲ್ಲಿ ಒಂದು "ಮಿಸ್ಟೇಕ್"

'ಆ ಗಂಡಸಿನ ಹೊಟ್ಟೆಯನ್ನು ಮೇಲಿಂದ ನೇರ ಕೊಯ್ಯುತ್ತ ಹೊಕ್ಕುಳವರೆಗೆ ಬಂದ ಚಾಕು, ಅವನ ಪೈಜಾಮದ ಲಾಡಿಯನ್ನು ಕತ್ತರಿಸಿಹಾಕಿತು.


ಚಾಕು ಹಿಡಿದವ ಒಮ್ಮೆ ಕೆಳಗೆ ಬಿದ್ದವನತ್ತ ಕಣ್ಣು ಹಾಯಿಸಿ, ಬೇಸರದಲ್ಲಿ "ಛೇ ಹೀಗಾಗಬಾರದಿತ್ತು...... ಮಿಸ್ಟೇಕ್" ಎಂದು ಉದ್ಗರಿಸಿದ.'

ಇದು ಸಾದತ್ ಹಸನ್ ಮಾಂಟೋನ ಪ್ರಖ್ಯಾತ ಕತೆಗಳಲ್ಲಿ ಒಂದು. ನಾಲ್ಕೇ ನಾಲ್ಕು ಸಾಲಿನ ಈ ಕತೆಯಲ್ಲಿ ಸಾಮಾನ್ಯ ಮನುಷ್ಯನೊಬ್ಬ ತನ್ನದೇ ಸಮುದಾಯದ ಇನ್ನೊಬ್ಬನನ್ನು 'ಅನ್ಯಮತೀಯ' ಎಂದು ತಪ್ಪಾಗಿ ತಿಳಿದು ಅವನಿಗೆ ಚಾಕು ಹಾಕಿದ್ದ. ಥೇಟು ನಮ್ಮ ನಿಮ್ಮ ಹಾಗಿರುವ ಸಾಮಾನ್ಯ ಜನ ಕೋಮುದ್ವೇಷದಲ್ಲಿ ಅಸಾಧಾರಣವೂ ಅಷ್ಟೇ ಅರ್ಥಹೀನವೂ ಆದ ಹಿಂಸೆ ಎಸಗುವುದನ್ನು ಮಾಂಟೋ ತನ್ನ ಕತೆಗಳಲ್ಲಿ ನಿರೂಪಿಸಿದ. ಅವನ ಕತೆಗಳಲ್ಲಿ ಕೋಮು ಹಿಂಸೆಗೆ ತುತ್ತಾಗುವವರು ಸಹ ಅಷ್ಟೇ ಸಾಮಾನ್ಯರೂ ಮುಖಹೀನರೂ ಆದ ಜನ. 1947ರ ದೇಶ ವಿಭಜನೆಯ ಹಿಂಸೆಯನ್ನು ಕಣ್ಣಾರೆ ಕಂಡಿದ್ದ ಮಾಂಟೋ ತಾನು ಹುಟ್ಟಿ ಬೆಳೆದ ಭಾರತದಲ್ಲಿ ಇರಲಾರದೆ ಪಾಕಿಸ್ತಾನಕ್ಕೆ ಹೋದ. ಆ ದೇಶದಲ್ಲಿ ಅವನು ಭಾರತದಲ್ಲಿ ಇದ್ದಷ್ಟು ಕೂಡ ನೆಮ್ಮದಿಯಾಗಿರಲಿಲ್ಲ; ಪಾಕಿಸ್ತಾನ ಇಸ್ಲಾಮಿಕ್ ಸರ್ವಾಧಿಕಾರ ರಾಷ್ಟ್ರವಾಗಿತ್ತು, ಮಾಂಟೋನಂತಹ ಲೇಖಕನಿಗೆ ಅಲ್ಲಿ ಜಾಗವಿರಲಿಲ್ಲ. ಅವನ ಇನ್ನೊಂದು ಪ್ರಖ್ಯಾತ ಕತೆ 'ತೋಬಾತೆಕ್ ಸಿಂಗ್'ನ ನಾಯಕನ ಹಾಗೆ ಮಾಂಟೋ ಕೂಡ ಭಾರತ, ಪಾಕಿಸ್ತಾನ-ಎಲ್ಲಿಯೂ ಸಲ್ಲದವನಾಗಿದ್ದ.

'ಮಿಸ್ಟೇಕ್' ಕತೆ ಕೋಮು ಹಿಂಸಾಚಾರದ ಘಟನೆಯನ್ನು ನಿರೂಪಿಸಿದರೂ, ಆ ಕತೆಯಲ್ಲಿ ಚಾಕು ಹಿಡಿದವನು ಯಾವ ಕೋಮಿನವ? ಅವನಿಗೆ ಬಲಿಯಾದವನ ಕೋಮು ಯಾವುದು? ಮಾಂಟೋ ಅದನ್ನು ಹೇಳುವ ಗೋಜಿಗೇ ಹೋಗುವುದಿಲ್ಲ. ಕತೆಗೆ ಅದು ಅಗತ್ಯವೂ ಅಲ್ಲ. ದೇಶ ವಿಭಜನೆಯ ದಿನಗಳಲ್ಲಿ ಹಿಂದೂಗಳು, ಸಿಖ್ಖರು (ಪಂಜಾಬ್‌ನಲ್ಲಿ) ಹಾಗೂ ಮುಸ್ಲಿಮರು ಪರಸ್ಪರರ ಮೇಲೆ ಭಾರೀ ಹಿಂಸೆ ನಡೆಸಿದ್ದರು. ಆದರೆ ಈಗ ಪಾಕಿಸ್ತಾನದ ಮುಸ್ಲಿಮ್ ಮತೀಯವಾದಿಗಳು ತಮ್ಮ ಸಮುದಾಯದವರು ಎಸಗಿದ ಹಿಂಸೆಯ ಬಗ್ಗೆ ಮೌನವಾಗಿದ್ದರೆ, ಭಾರತದಲ್ಲಿ ಹಿಂದೂತ್ವವಾದಿಗಳು ಮುಸ್ಲಿಮರ ಮೇಲೆ ಸಾಮಾನ್ಯ ಹಿಂದೂಗಳು ನಡೆಸಿದ ಹಿಂಸೆಯನ್ನು ಗುರುತಿಸುವುದೇ ಇಲ್ಲ. ಈ ಸ್ವಜನಪಕ್ಷಪಾತಕ್ಕೆ ಪ್ರತಿಯಾಗಿ ತನ್ನ ಕತೆಗಳಲ್ಲಿ ಜಾತಿಮತಗಳನ್ನು ಮೀರಿದ ಕೋಮುಹಿಂಸೆಯ ಸರ್ವೇ ಸಾಮಾನ್ಯತೆಯನ್ನು ಚಿತ್ರಿಸಿ ಮಾಂಟೋ ತನ್ನ ಕಾಲಕ್ಕೆ ಸಾಕ್ಷಿ ಆಗಿದ್ದಾನೆ; ಆ ಕಾಲ ದೇಶ ಸಂದರ್ಭದಲ್ಲಿ ಸ್ವತಃ ತಾನೇ ಅನ್ಯಧರ್ಮೀಯರ ಮೇಲೆ ಅಂತಹ ಹಿಂಸೆ ಎಸಗಬಹುದಿತ್ತು ಎಂಬ ಅರಿವಿನಲ್ಲಿ ಮಾಂಟೋ ಆ ಹಿಂಸೆಯ ಆತ್ಮಸಾಕ್ಷಿಯೂ ಆಗಿರುವ ಲೇಖಕ.

ಮಾಂಟೋನ 'ಮಿಸ್ಟೇಕ್' ಕತೆ ನಿರೂಪಿಸುವ ಪ್ರಸಂಗವನ್ನೇ ಯಥಾವತ್ ಹೋಲುವ ವಾಸ್ತವ ಘಟನೆಯೊಂದು ಮೊನ್ನೆ ಬಂಟ್ವಾಳದಲ್ಲಿ ಸಂಭವಿಸಿದೆ. ಇದೇ ನವೆಂಬರ್ 10ರಂದು ಮಡಿಕೇರಿಯಲ್ಲಿ ನಡೆದ ಟಿಪ್ಪು ಜನ್ಮದಿನಾಚರಣೆಯ ಸಂದರ್ಭದಲ್ಲಿ ನಡೆದ ಹಿಂಸಾಚಾರವನ್ನು ಪ್ರತಿಭಟಿಸಿ ಎಸ್.ಡಿ.ಪಿ.ಐ ಬಂಟ್ವಾಳದಲ್ಲಿ ಒಂದು ಸಾರ್ವಜನಿಕ ಸಭೆ ನಡೆಸಿತು. ಆ ಸಭೆಯ ಮೇಲೆ ಕಲ್ಲು ತೂರಾಟ ನಡೆದಾಗ ಪೊಲೀಸರು ಲಾಠೀಚಾರ್ಜು ಮಾಡಿ, ಸಭೆಯನ್ನು ಹಠಾತ್ತನೆ ಬರ್ಖಾಸ್ತುಗೊಳಿಸಿದರು. ಅವತ್ತು ಮುಸ್ಸಂಜೆ, ಕ್ರಿಕೆಟ್‌ಆಡಿ ಮನೆಗೆ ಮರಳುತ್ತಿದ್ದ ಇಬ್ಬರು ಗೆಳೆಯರು, ಹರೀಶ್ ಪೂಜಾರಿ ಮತ್ತು ಶಮೀಉಲ್ಲಾ ಜ್ಯೂಸ್ ಕುಡಿಯಲೆಂದು ಒಂದು ಅಂಗಡಿ ಹೊಕ್ಕರು. ಕಾರೊಂದರಲ್ಲಿ ಬಂದು ಅವರಿಗೋಸ್ಕರ ಎಂಬಂತೆ ಕಾದುಕೊಂಡು ಕೂತಿದ್ದ ಐದು ಜನರ ಗುಂಪು ಶಮೀಉಲ್ಲಾರನ್ನು ಗುರುತಿಸಿ ಅವರ ಮೇಲೆ ಹಲ್ಲೆ ನಡೆಸಿತು. ಶಮೀಉಲ್ಲಾ ತೀವ್ರವಾಗಿ ಗಾಯಗೊಂಡು ಅಲ್ಲಿಂದ ಓಟಕಿತ್ತರು. ಹರೀಶ್ ಪೂಜಾರಿ, ಶಮೀಉಲ್ಲಾರ ಜೊತೆಗಿದ್ದರು ಎಂಬ ಕಾರಣಕ್ಕೆ ಅವರೂ ಮುಸ್ಲಿಮ್ ಎಂದು ಭಾವಿಸಿ ಗುಂಪು ಅವರ ಮೇಲೂ ಮಾರಣಾಂತಿಕವಾಗಿ ಹಲ್ಲೆ ನಡೆಸಿತು. ಹರೀಶ್ ಪೂಜಾರಿ ಆಸ್ಪತ್ರೆಗೆ ಹೋಗುವ ದಾರಿಯಲ್ಲೇ [illegible].

ಟಿಪ್ಪು ಜನ್ಮದಿನಾಚರಣೆಯ ಕಾರಣಕ್ಕೆ, ಇನ್ನೊಬ್ಬ ಹಿಂದೂವಿನ ಹತ್ಯೆ ನಡೆದಿತ್ತು! ಈಗ ಬಿ.ಜೆ.ಪಿಗಳಿಗೆ



ಪ್ರತಿಭಟನೆ ಮಾಡಲು ಇನ್ನೊಂದು ಭರ್ಜರಿ ಕಾರಣ ದೊರೆಯಿತು. ಮಡಿಕೇರಿಯಲ್ಲಿ ಟಿಪ್ಪು ದಿನಾಚರಣೆ ನಡೆದ ದಿನವೇ ಸಂಭವಿಸಿದ ಬಿ.ಎಸ್.ಕುಟ್ಟಪ್ಪನವರ ಸಾವಿನ ವಿರುದ್ಧ ಬಿ.ಜೆ.ಪಿ ರಾಜ್ಯಾದ್ಯಂತ ಪ್ರತಿಭಟನೆ ಪ್ರಾರಂಭಿಸಿತ್ತು, ಅದೇ ದಿನ, ಅದೇ ಸಂದರ್ಭದಲ್ಲಿ ಒಬ್ಬ ಮುಸ್ಲಿಮ್ ಯುವಕ ಶಾಹುಲ್ ಹಮೀದ್ ಗುಂಡೇಟಿನಿಂದ ಸಾವಿಗೀಡಾಗಿದ್ದ. ಆದರೆ ಯಾರೂ ಅದನ್ನು ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ. ಈಗ ಬಂಟ್ವಾಳದಲ್ಲಿ ಇನ್ನೊಬ್ಬ ಹಿಂದೂವಿನ ಹತ್ಯೆಯಿಂದ ಬಿ.ಜೆ.ಪಿ.ಗೆ ಬಂಪರ್ ಹೊಡೆಯಿತು.

ಹರೀಶ್ ಪೂಜಾರಿ ಮನೆಗೆ ಬಿ.ಜೆ.ಪಿ. ನಾಯಕರು ಸಾಲುಗಟ್ಟಿ ಹೋಗಿ ಸಾಂತ್ವನ ಹೇಳಿದರು; ಸಹಾಯನಿಧಿಯ ಆಶ್ವಾಸನೆ ಕೊಟ್ಟರು. ಸಾರ್ವಜನಿಕ ಸಭೆ ನಡೆಸಿ ಮುಸ್ಲಿಮರನ್ನು ಬೈದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಹಿಡಿದು ಲೇಖಕ ಗಿರೀಶ್ ಕಾರ್ನಾಡರವರೆಗೆ ಬಿ.ಜೆ.ಪಿ.ಯನ್ನು ವಿರೋಧಿಸುವವರೆಲ್ಲರ ಮೇಲೆ ಇನ್ನೊಂದು ರೌಂಡ್ ಬೈಗುಳದ ಸೇವೆಯನ್ನೂ ನಡೆಸಿದರು.

ಆದರೆ ಈಗ ಪೊಲೀಸ್ ತನಿಖೆಯಿಂದ ಹರೀಶ್ ಪೂಜಾರಿ ಮತ್ತು ಶಮೀಉಲ್ಲಾರ ಮೇಲೆ ಹಲ್ಲೆಮಾಡಿದವರು ಖಟ್ಟರ್ ಭಜರಂಗಿಗಳು ಎಂದು ಪತ್ತೆಯಾಗಿದೆ. ಈ ಪ್ರಕರಣದಲ್ಲಿ ಬಂಟ್ವಾಳದ ಫೋಟೋಗ್ರಾಫರ್ ಭುವಿತ್ ಶೆಟ್ಟಿ (25) ಮತ್ತು



ಭುವಿತ್ ಶೆಟ್ಟಿ

ಅಚ್ಯುತ (28) ಎಂಬ ಇಬ್ಬರು ಆರೋಪಿಗಳು ಬಂಧಿತರಾಗಿದ್ದು, ಉಳಿದ ಮೂವರು ಆರೋಪಿಗಳನ್ನು ಪೊಲೀಸರು ಹುಡುಕುತ್ತಿದ್ದಾರೆ.

ಹರೀಶ್ ಪೂಜಾರಿ ಕೊಲೆ ಪ್ರಕರಣದ ಬಂಧಿತರಲ್ಲಿ ಒಬ್ಬನಾದ ಭುವಿತ್ ಶೆಟ್ಟಿ ಈಗಾಗಲೇ ತನ್ನ ಟ್ವಿಟರ್ ಸಂದೇಶದಿಂದಾಗಿ ಕುಖ್ಯಾತನಾದವ. ಇದೇ ಆಗಸ್ಟ್ 30 ರಂದು ಸಂಶೋಧಕ ಡಾ! ಎಂ.ಎಂ.ಕಲಬುರ್ಗಿಯವರು ಹತ್ಯೆಯಾದ ಸುದ್ದಿ ಪ್ರಸಾರವಾಗುತ್ತಿದ್ದಂತೆ, ಭುವಿತ್ ಶೆಟ್ಟಿ "ಆಗ ಅನಂತಮೂರ್ತಿ, ಈಗ ಕಲಬುರ್ಗಿ. ಹಿಂದೂ ಧರ್ಮವನ್ನು ಹೀಯಾಳಿಸುವವರು ನಾಯಿಯ ಹಾಗೆ ಸಾಯುತ್ತಾರೆ. ಭಗವಾನ್, ಮುಂದಿನ ಸರದಿ ನಿಮ್ಮದು" ಎಂದು ಟ್ವೀಟ್ ಮಾಡಿದ್ದ. ತನ್ನ ತೀರ ಇತ್ತೀಚಿನ ಟ್ವೀಟ್‌ಗಳಲ್ಲಿ ಟಿಪ್ಪು ಮತ್ತು ಗಿರೀಶ್ ಕಾರ್ನಾಡ್ ಇಬ್ಬರನ್ನೂ ಹೀನಾಮಾನ ನಿಂದಿಸಿದ್ದ; ಕೆಲವರ ಜೊತೆಗೆ ಚಪ್ಪಲಿ ಹಾರ ಹಾಕಿದ್ದ ಗಿರೀಶ್ ಕಾರ್ನಾಡರ ಫೋಟೋ ಕೂಡ ರವಾನಿಸಿದ್ದ. ಅನಂತಮೂರ್ತಿ, ಎಂ.ಎಂ.ಕಲಬುರ್ಗಿ, ಭಗವಾನ್ ಮತ್ತು ಗಿರೀಶ್ ಕಾರ್ನಾಡರನ್ನು ತನ್ನ ಆಜನ್ಮ ವೈರಿಗಳಿಗಿಂತ ಹೆಚ್ಚಾಗಿ ದ್ವೇಷಿಸುತ್ತಿದ್ದ ಭುವಿತ್ ಶೆಟ್ಟಿ ಆ ಲೇಖಕರ ಕೃತಿಗಳಲ್ಲಿ ಒಂದನ್ನಾದರೂ ಓದಿದ್ದಾನೋ ಇಲ್ಲವೋ! ಅದು ಹೇಗೂ ಇರಲಿ ತನ್ನದೇ ಊರಿನ ಹರೀಶ್ ಪೂಜಾರಿ ಮುಸ್ಲಿಮನೋ ಅಲ್ಲವೋ ಎಂದು ಅವನಿಗೆ ಗೊತ್ತಿರಲಿಲ್ಲ; ಅದನ್ನು ವಿಚಾರಿಸಿ ತಿಳಿದುಕೊಳ್ಳುವ ಗೋಜಿಗೂ ಹೋಗದೆ ಭುವಿತ್ ಅವರ ಮೇಲೆ ಹಲ್ಲೆ ನಡೆಸಿದ್ದಾನೆ. ಮುಸ್ಲಿಮನೊಬ್ಬ ಜೊತೆಗಿದ್ದುದರಿಂದ ಹರೀಶ್ ಪೂಜಾರಿ ಕೂಡ ಮುಸ್ಲಿಮನೇ ಎಂಬುದು ಅವನ ತರ್ಕವಾಗಿತ್ತು, ಮುಸ್ಲಿಮನೊಬ್ಬನಿಗೆ ಹೊಡೆಯುವುದಕ್ಕೆ ಅವನು ಮುಸ್ಲಿಮ ಎನ್ನುವ ಕಾರಣವೇ ಸಾಕು. ಇದು ಭುವಿತ್ ಶೆಟ್ಟಿಯ ನೈತಿಕತೆ. ಪೊಲೀಸು ಕಸ್ಟಡಿಯಲ್ಲಿ ಈಗ ಭುವಿತ್ "ಛೇ... ಮಿಸ್ಟೇಕ್" ಎಂದು ಕೈ ಹಿಸುಕಿಕೊಳ್ಳುತ್ತಿರಬಹುದು!

ಹಿಂದೂತ್ವದ ಸಿದ್ಧಾಂತದಿಂದ "ಬ್ರೇನ್‌ವಾಶ್" ಆದ ಬಜರಂಗಿಗಳು ಈ ಬಗೆಯ "ಮಿಸ್ಟೇಕ್"ಗಳನ್ನು ಜಾನುವಾರು ಸಾಗಾಣಿಕೆದಾರರ ಮೇಲೂ ಮಾಡಿದ್ದುಂಟು. ಕರಾವಳಿಯ ಹಳ್ಳಿಗಳಲ್ಲಿ ಜಾನುವಾರು ಸಾಕಿದ ರೈತರು ತಮ್ಮ ಎತ್ತು ಕೋಣಗಳು ಮುದಿಯಾದಾಗ, ದನ ಎಮ್ಮೆಗಳು ಗೊಡ್ಡಾಗಿ ಹಾಲೂ ಬತ್ತಿದಾಗ, ಅವುಗಳನ್ನು ಮಧ್ಯವರ್ತಿಗಳಿಗೆ ಮಾರುವ ಬದಲು ತಾವೇ ನೇರವಾಗಿ ಸಾಗಿಸಿ ಮಾರುವುದು ಅಪರೂಪವೇನಲ್ಲ. ಅವರು ಹೆಚ್ಚಾಗಿ ಕೆಳಜಾತಿಯ ಹಿಂದೂಗಳಾಗಿದ್ದು ಬಜರಂಗಿಗಳು ಅವರನ್ನು ಮುಸ್ಲಿಮರೆಂದು ತಿಳಿದು ಹಲ್ಲೆ, ಲೂಟಿ, ಪೊಲೀಸು ಕೇಸು ಇತ್ಯಾದಿ "ಮಿಸ್ಟೇಕ್"ಗಳನ್ನು ಎಸಗಿದ ಹಲವು ಪ್ರಸಂಗಗಳು ಕರಾವಳಿಯ ಹೆದ್ದಾರಿಗಳಲ್ಲಿ ನಡೆದಿವೆ.


ಈ ಬಗೆಯ "ಮಿಸ್ಟೇಕ್"ಗಳನ್ನು ಹಿಂದೂ ಮತಾಂಧರಷ್ಟೇ ಎಸಗುವುದಲ್ಲ. ಕರಾವಳಿಯ ಊರುಗಳಲ್ಲಿ ತಾವು ಇರುವುದೇ ಇಸ್ಲಾಮ್‌ನ ರಕ್ಷಣೆಗೆ ಎಂದು ನಂಬಿರುವ ಜೆಹಾದಿ ವೀರರಿಂದಲೂ ಇಂತಹ ಕೃತ್ಯಗಳು ನಡೆದಿವೆ.

ಹರೀಶ್ ಪೂಜಾರಿಯ ಹತ್ಯೆಯಷ್ಟು ದಾರುಣವಲ್ಲದಿದ್ದರೂ, ಅಷ್ಟೇ ಅರ್ಥಹೀನವಾದ ಘಟನೆಯೊಂದು ಕೆಲವು ತಿಂಗಳ ಹಿಂದೆ ಮಂಗಳೂರಿನ ಹೆದ್ದಾರಿಯೊಂದರಲ್ಲಿ ನಡೆಯಿತು. 27ರ ಹರೆಯದ ತರುಣನೊಬ್ಬ, ತನ್ನ ಚಿಕ್ಕಮ್ಮನ ಮಗಳನ್ನು ಬೈಕಿನ ಹಿಂದೆ ಕೂರಿಸಿಕೊಂಡು, ನಗರದ ಕೊಟ್ಟಾರದ ಹೊಂಡಾ ಶೋರೂಮು ಎದುರು ಪಾಸಾಗುತ್ತಿದ್ದ. ಅಷ್ಟರಲ್ಲಿ ಬೈಕನ್ನು ಫಾಲೋ ಮಾಡಿ ಆಟೋರಿಕ್ಷಾವೊಂದರಲ್ಲಿ ಬರುತ್ತಿದ್ದ ಇಸ್ಮಾಯಿಲ್ ದೇರಳಕಟ್ಟೆ ಮತ್ತು ಅವನ ದೋಸ್ತುಗಳು, ಬೈಕನ್ನು ಅಡ್ಡ ಹಾಕಿ, ಬೈಕ್ ಸವಾರನಿಗೆ "ನಿಮಗೆ ನಮ್ಮವರ ಹುಡುಗಿಯರೇ ಬೇಕಲ್ಲವಾ?" ಎಂದು ಅಬ್ಬರಿಸುತ್ತ ಚೆನ್ನಾಗಿ ಥಳಿಸಿದ. ಕಾಫಿರ್‌ಗಳಿಂದ ಹಾಳಾಗುತ್ತಿರುವ ಯುವತಿಯರ ಮಾನರಕ್ಷಣೆ ತನ್ನ ಪರಮ ಕರ್ತವ್ಯ ಎಂದು ಇಸ್ಮಾಯಿಲ್ ಭಾವಿಸಿರಬಹುದು. ಆದರೆ ಅವನಿಂದ ಪೆಟ್ಟು ತಿಂದದ್ದು ಮಾತ್ರ ಒಬ್ಬ ಮುಸ್ಲಿಮ್ ಯುವಕ ರಿಜ್ವಾನ್. ಬೈಕಿನಲ್ಲಿ ಅವನ ಹಿಂದೆ ಕೂತವಳು ಅವನ ತಂಗಿ ನಿಹಾ! ಇಸ್ಮಾಯಿಲ್ ಕೂಡಾ "ಛೇ... ಮಿಸ್ಟೇಕ್" ಎಂದು ಬೇಸರ ಪಟ್ಟುಕೊಂಡಿರಬೇಕು.

ಮಾಂಟೋ ಕತೆಯಲ್ಲಿ ಸಾಮಾನ್ಯ ಮನುಷ್ಯನೊಬ್ಬ ತನ್ನದೇ ಮತದವನೊಬ್ಬನಿಗೆ ಚಾಕು ಹಾಕಿ ತಪ್ಪು ಮಾಡಿದೆ ಎಂದು ಬೇಸರ ಪಟ್ಟುಕೊಳ್ಳುತ್ತಾನೆ. ಆದರೆ ಮತೀಯವಾದಿಗಳಿಗೆ ಅವರು ಯಾವ ಧರ್ಮದವರೇ ಇರಲಿ, ಈ ವ್ಯಥೆಯಾದರೂ ಕಾಡುತ್ತದೆಯೇ?

ಹರೀಶ್ ಪೂಜಾರಿಯ ಹತ್ಯೆಯನ್ನು ಭಜರಂಗಿ ಕಾರ್ಯಕರ್ತರೇ ನಡೆಸಿದ್ದರ ಕುರಿತು ಬಿ.ಜೆ.ಪಿ. ನಾಯಕರ ಪ್ರತಿಕ್ರಿಯೆ ಏನು? ಹದಿಹರೆಯದ ಮನುಷ್ಯ ಜೀವವೊಂದರ ಅಕಾಲಮೃತ್ಯು ಅವರನ್ನು ಬಾಧಿಸುತ್ತದೆಯೆ? ಮಡಿಕೇರಿ ಗಲಭೆಯಲ್ಲಿ ಬಿ.ಎಂ.ಕುಟ್ಟಪ್ಪ ಸಾವಿಗೀಡಾದ ಬಗ್ಗೆ ದೊಡ್ಡಗದ್ದಲ ಎಬ್ಬಿಸಿದ ಬಿ.ಜೆ.ಪಿ ಶಾಹುಲ್ ಹಮೀದ್‌ರ ಹತ್ಯೆಯನ್ನು ಗಮನಿಸಲೂ ಇಲ್ಲ. ಬಂಟ್ವಾಳದಲ್ಲಿ ಹರೀಶ್ ಪೂಜಾರಿ ಮನೆಗೆ ಕಣ್ಣಂಚಿನಲ್ಲಿ ನೀರು ರೆಡಿ ಮಾಡಿಕೊಂಡು ಹೋದ ಬಿ.ಜೆ.ಪಿ ನಾಯಕರು ಹಲ್ಲೆಯಲ್ಲಿ ಹರೀಶ್ ಪೂಜಾರಿಯ ಗೆಳೆಯ ಶಮೀಉಲ್ಲಾ ಗಂಭೀರವಾಗಿ ಗಾಯಗೊಂಡದ್ದನ್ನು ನೋಡಿಯೂ ನೋಡದವರಂತಿದ್ದರು. ಈಗ ಹರೀಶ್ ಪೂಜಾರಿಯ ಹತ್ಯೆಗೆ ಯಾರು ಕಾರಣ ಎಂಬುದು ಬಹಿರಂಗಗೊಂಡ ಮೇಲಾದರೂ ಬಿ.ಜೆ.ಪಿ. ನಾಯಕರು 'ಜೀವಕ್ಕಿಂತ ದೊಡ್ಡ ದೇವರಿಲ್ಲ; ದೇಹಕ್ಕಿಂತ ದೊಡ್ಡ ದೇಗುಲವಿಲ್ಲ' ಎಂಬ ಸತ್ಯವನ್ನು ಮನಗಾಣಬೇಕು.

■ ಜಿ.ರಾಜಶೇಖರ್



ಅಂತಃಕರಣ: ಕನ್ನಡ ಸಾಹಿತ್ಯ ಲೋಕದ ಹೊಸ ಮಿಂ

ಹೇಳಿಕೇಳಿ ಈತನಿಗೆ ಈಗ 10ರ ಹರೆಯ. ಅಂದರೆ ಮಕ್ಕಳು ಬದುಕಿನಲ್ಲಿ ಆಡಿ-ನಲಿಯುವ ಕಾಲ. ಎಂತಹದ್ದೇ ಆರ್ಥಿಕ ಸಂಕಷ್ಟದ ಕುಟುಂಬದಿಂದ ಬಂದ ಮಗುವೂ ಹತ್ತರ ಹರೆಯದಲ್ಲಿ ಯಾವುದನ್ನೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಇಂತಹದ್ದರಲ್ಲಿ ಶಿವಮೊಗ್ಗ ಸೇಕ್ರೆಡ್ ಹಾರ್ಟ್ ಶಾಲೆಯ ಹತ್ತರ ಹರೆಯದ ಅಂತಃಕರಣ ಬರೋಬ್ಬರಿ ಐದು ಪುಸ್ತಕಗಳನ್ನು ಬರೆದು ಸಾಹಿತ್ಯ ಲೋಕದಲ್ಲಿ ಸೆನ್ಸೇಶನ್ ಆಗಿ ಹೊರಹೊಮ್ಮಿದ್ದಾನೆ. ನಾವೆಲ್ಲಾ ಹತ್ತರ ಹರೆಯದಲ್ಲಿ ಪತ್ರಿಕೆ ಓದುತ್ತಿದ್ದರೆ ಅದು ಬರೀ ಕ್ರೀಡಾಪುಟಕ್ಕೆ ಸೀಮಿತವಾಗಿರುತ್ತಿತ್ತು, ಕ್ರಿಕೆಟ್ ಎಂಬ ಕ್ರೀಡೆಗೆ ಮಾತ್ರ ಹೆಚ್ಚಿನ ಮಕ್ಕಳ ಓದು ಕೇಂದ್ರೀಕೃತವಾಗಿರುತ್ತಿತ್ತು. ಈಗಲೂ ಅಷ್ಟೇ, ಹತ್ತರ ಹರೆಯದ ಮಕ್ಕಳ ಪತ್ರಿಕಾ ಓದು ಕ್ರೀಡೆಗೆ ಸೀಮಿತ. ಹೆಚ್ಚೆಂದರೆ ಸಿನಿಮಾ ತಾರೆಗಳ ಗಾಸಿಪ್‌ಗಳ ಕುರಿತ ಬರಹವನ್ನು ಓದುತ್ತಾರೆ. ಆದರೆ ಅಂತಕರಣ ಎಲ್ಲಾ ಮಕ್ಕಳಂತೆ ಆಡುತ್ತಾ, ನಲಿಯುತ್ತಾ, ಕಲಿಯುತ್ತಾ, ಓದುತ್ತಾ ಗಂಭೀರವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾನೆ. ನುರಿತ ಕ್ರೀಡಾ ಬರಹಗಾರರಿಗೂ ಕಮ್ಮಿಯಿಲ್ಲದಂತೆ "ವಿಶ್ವ ಕನ್ನಡಿಗ" ಎಂಬ ವೆಬ್ ಪೋರ್ಟಲ್‌ಗೆ ಅಚ್ಚುಕಟ್ಟಾಗಿ ಕ್ರೀಡಾ ಅಂಕಣ ಬರೆಯುತ್ತಾನೆ. ಆತನ ಕ್ರೀಡಾ ಬರಹಗಳು ಬರೇ ಕ್ರಿಕೆಟ್‌ಗಷ್ಟೆ ಸೀಮಿತವಾಗಿಲ್ಲ, ಕ್ರಿಕೆಟ್, ಕಬಡ್ಡಿ, ಫುಟ್ಬಾಲ್, ಟೆನಿಸ್, ಬ್ಯಾಡ್ಮಿಂಟನ್, ಹೆಚ್ಚಿನವರ್‍ಯಾರೂ ಅಷ್ಟೊಂದು ಗಂಭೀರವಾಗಿ ಪರಿಗಣಿಸದ ಮಹಿಳಾ ಕ್ರಿಕೆಟ್, ಅಥ್ಲೆಟಿಕ್ಸ್ ಇತ್ಯಾದಿ ಕ್ರೀಡೆಗಳ ಬಗ್ಗೆಯೂ ಅಧಿಕಾರದ ಧ್ವನಿಯಲ್ಲಿ ಬರೆಯುತ್ತಿದ್ದಾನೆ. ಆತನ ಕ್ರೀಡಾ ಬರಹಗಳನ್ನು ಗಂಭೀರವಾಗಿ ಓದುವ ಲಕ್ಷಾಂತರ ಓದುಗರೂ ಇದ್ದಾರೆ. ಅದೂ ಎಷ್ಟು ಅಚ್ಚುಕಟ್ಟಾಗಿ ಕ್ರೀಡಾಬರಹಗಳನ್ನು ಅಂತಃಕರಣ ಬರೆಯುತ್ತಾನೆಂದರೆ ಮೊದಲ ಎರಡು ಮೂರು ಪ್ಯಾರಾಗಳಲ್ಲಿ ತನ್ನ ಅಭಿಪ್ರಾಯಗಳನ್ನು ಬರೆಯುತ್ತಾನೆ. ಮುಂದಿನ ಪ್ಯಾರಾಗಳಲ್ಲಿ ಪ್ರಸಕ್ತ ವಿದ್ಯಮಾನ ಮತ್ತು ಇತಿಹಾಸದ ತುಣುಕುಗಳನ್ನೂ ಸೇರಿಸಿ ರಸವತ್ತಾಗಿ ಬರೆಯುತ್ತಾನೆ. ಅಂತಃಕರಣನ ಬರಹಗಳಲ್ಲಿ ಎಲ್ಲೂ ಕ್ಲಿಷ್ಟತೆಯಿರುವುದಿಲ್ಲ. ಆತನ ಬರಹಗಳನ್ನು ಓದುವಾಗ ಆತ ಪದಗಳಿಗಾಗಿ ತಡಕಾಡಿದ ಏಕೈಕ ನಿದರ್ಶನವೂ ಕಾಣಸಿಗುವುದಿಲ್ಲ. ಈಗಾಗಲೇ ಐದು ಪುಸ್ತಕಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಈ ಪೋರ 26 ಲೇಖನಗಳಿರುವ ಬರೋಬ್ಬರಿ 110 ಪುಟಗಳ 'ಗೇಮ್ಸ್ ಪೀರಿಯಡ್' ಎಂಬ ಪುಸ್ತಕವನ್ನು ಬರೆದಿದ್ದಾನೆ. ಅಂತಃಕರಣ ಕುರಿತ ಮಾಹಿತಿಗಳನ್ನು ನೋಡದೇ ಆತನ 'ಗೇಮ್ಸ್ ಪೀರಿಯಡ್' ಎಂಬ ಕೃತಿ ಓದಿದರೆ ಯಾರಿಗೂ ಅದು ಓರ್ವ ಬಾಲಸಾಹಿತಿಯ ಪುಸ್ತಕ ಎಂದು ಅನಿಸುವುದೇ ಇಲ್ಲ ಎಂದು ಖಚಿತವಾಗಿ ಹೇಳಬಲ್ಲೆ. ಅಂತಃಕರಣನ ಕ್ರೀಡಾ ಬರಹಗಳನ್ನು ಓದುವಾಗ ಕ್ರೀಡೆಯ ಕುರಿತಂತೆ ಆತನ ಓದಿನ ಆಳವೂ ನಮ್ಮರಿವಿಗೆ ಬರುತ್ತದೆ. ಈ ಚಿಕ್ಕ ಪ್ರಾಯದಲ್ಲೇ ಆತ ಅಂತರ್ಜಾಲವನ್ನು ಜಾಲಾಡುವ ಪರಿ ಎಂತಹದ್ದು ಎಂದೂ ತಿಳಿಯುತ್ತದೆ. "ರಮಣ್ ಲಂಬಾರ ನೆನಪಿನಲ್ಲಿ...." ಎಂಬ ಲೇಖನ ಓದುವಾಗ ನಾವೆಲ್ಲಾ ಮರೆತೇಬಿಟ್ಟ, ಅಂತಃಕರಣ ಹುಟ್ಟುವುದಕ್ಕಿಂತ ಏಳು ವರ್ಷಗಳ ಹಿಂದೆಯೇ ಇಹಲೋಕ ತ್ಯಜಿಸಿದ ಲಂಬಾರ ಸಾವಿನ ಸುತ್ತಲಿನ ಘಟನೆಗಳು, ಆತ ಹೆಲ್ಮೆಟ್ ಧರಿಸದೇ ಹೇಗೆ ಚೆಂಡಿನ ಹೊಡೆತಕ್ಕೆ ಬಲಿಯಾದ, ಆತ ಹೆಲ್ಮೆಟ್ ಧರಿಸದಿರಲು ಕಾರಣವೇನು ಹೀಗೆ ಅಗಾಧವಾದ ಮಾಹಿತಿಯನ್ನು ಕಲೆ ಹಾಕಿ ಕೆಲವೇ ವಾಕ್ಯಗಳಲ್ಲಿ ಅಂತಃಕರಣ ಕಟ್ಟಿಕೊಟ್ಟ ಪರಿ ಬೆರಗು ಹುಟ್ಟಿಸುವಂತಹದ್ದು.

ಅಂತಃಕರಣನ ಅಪ್ಪ ಹುಟ್ಟುವ ಮೊದಲಿನ ಕ್ರಿಕೆಟ್ ಲೋಕದ ಆಗುಹೋಗುಗಳು, ರನ್, ಎಸೆತ, ವಿಕೆಟ್ ಇತ್ಯಾದಿ ಅಂಕಿಅಂಶಗಳನ್ನು ಅಂತಃಕರಣ ಕಲೆ ಹಾಕಿದುದನ್ನು ನೋಡಿದರೆ ಆತ ಎಂತಹ ಗಂಭೀರ ಕ್ರೀಡಾ ಬರಹಗಾರ ಎಂಬುವುದರ ಅರಿವಾಗುತ್ತದೆ. ಅಂತಃಕರಣ 'ಗೇಮ್ಸ್ ಪೀರಿಯಡ್' ಕೃತಿಯನ್ನು ಬಹಳ ಅರ್ಥಪೂರ್ಣವಾಗಿ ಕ್ರಿಕೆಟ್ ಅಂಗಣದಲ್ಲಿ ಚೆಂಡಿನ ಏಟು ತಿಂದು ಪ್ರಾಣ ತ್ಯಜಿಸಿದ ರಮಣ್ ಲಂಬಾ ಮತ್ತು ಫಿಲಿಪ್ ಹ್ಯೂಸ್‌ರಿಗೆ ಅರ್ಪಿಸುವ ಮೂಲಕ ತನ್ನ ಕ್ರೀಡಾ ಪ್ರೀತಿ ಮತ್ತು ಸ್ಫೂರ್ತಿಯನ್ನು ತೋರಿಸಿದ್ದಾನೆ.

ಅಂತಃಕರಣನ ಬರಹಗಳು ಕೇವಲ ಕ್ರೀಡೆಗೆ ಮಾತ್ರ ಸೀಮಿತವಾಗಿಲ್ಲ, ಸಾಹಿತ್ಯದ ಇತರ ಪ್ರಕಾರಗಳಾದ ಕಥೆ, ಕಾದಂಬರಿ, ಪ್ರಬಂಧ, ಕವನ ಮುಂತಾದ ಪ್ರಕಾರಗಳಲ್ಲೂ ಕೈಯಾಡಿಸಿ ಅಂತಃಕರಣ ಸೈ ಎನಿಸಿಕೊಂಡಿದ್ದಾನೆ. ಅಂತಃಕರಣ ಒಂದೇ ಪುಸ್ತಕದಲ್ಲಿ ಬರೆದ ರಾಮ್‌ಪುರದ ಗೆಳೆಯರು, ಆಜಾದ್‌ನಗರದ ಆಟಗಾರರು ಎಂಬ ಎರಡು

ಪುಸ್ತಕ ಪರಿಚಯ

ಕಾದಂಬರಿಗಳು ಆತನ ವಯೋಸ...
ಎತ್ತಿತೋರಿಸುತ್ತದೆ. ಸೃಜನಶೀಲ ಪ್ರಕಾರದ...
ಎರಡೂ ಕಾದಂಬರಿಗಳನ್ನು ಓದುತ್ತಾ ಹೋ...
ವರದಿಯಂತೆ ಅನಿಸುವುದಿಲ್ಲ. ಅಂತೆಯೆ...
ಅನಗತ್ಯ ವರ್ಣನೆ ಮತ್ತು ಅನಗತ್ಯ ಓ...
ಎರಡೂ ಕಾದಂಬರಿಗಳಲ್ಲಿ ಕಾಣಸಿಗುವುದಿಲ್ಲ...
ಆಯ್ಕೆಯೂ ಆತನ ಪ್ರಾಯಕ್ಕೆ ಮೀರಿ...
ಕಾದಂಬರಿಗಳನ್ನು ಓದುವಾಗ ಈತ...
ಎಷ್ಟೊಂದು ಹಚ್ಚಿಕೊಂಡಿದ್ದಾನೆ, ಕ್ರೀಡೆಯ...
ವಿಪರೀತ ಆಸಕ್ತಿಯನ್ನು ತೋರಿಸುತ್ತದೆ. ಘ...
ಒಂದರ ಹಿಂದೆ ಇನ್ನೊಂದು ಪೋಣಿಸುವ...
ಅನನ್ಯವಾದುದು. ಆಜಾದ್‌ನಗರದ...
ಕಾದಂಬರಿಯಲ್ಲಿ ಆಜಾದ್‌ನಗರದ ಗಲ್ಲಿ...
ಆಡಲು ಪ್ರಾರಂಭಿಸಿದ ಹುಡುಗರು ರಣಜಿ ...
ಮಟ್ಟಕ್ಕೆ ತಲುಪುವ ಬಗೆಯನ್ನು ಅಂತಃಕರಣ...
ಕಟ್ಟಿಕೊಟ್ಟಿದ್ದಾನೆ. ಸಾಮಾನ್ಯವಾಗಿ ಹತ್ತರ ಹರ...
ಕ್ರಿಕೆಟನ್ನು ವೀಕ್ಷಿಸುತ್ತಾರಾದರೂ ಆ...

ಬಿಹಾರ ಚುನಾವಣೆ: ವ್ಯಾಘ್ರವನ್ನು ಸೋಲಿಸಿದ ತೋಳ7

ಬಿಹಾರದ ಚುನಾವಣೆಯಲ್ಲಿ ಮಹಾ ಒಕ್ಕೂಟ ಭರ್ಜರಿ ಜಯಗಳಿಸಿ ಮನೆ ಮಾತಾಗಿದೆ. ಕೋಮುವಾದವನ್ನೇ ಮೈದುಂಬಿಕೊಂಡಂತೆ ಹೋದಲ್ಲೆಲ್ಲಾ ಭರ್ಜರಿ ಭಾಷಣ ಮಾಡಿದ ಮೋದಿ ನೇತೃತ್ವದ ಪಡೆ ನೆಲಕಚ್ಚಿದೆ. ಗೋ ರಾಜಕಾರಣ, ಮುಸ್ಲಿಂ-ದಲಿತ ವಿರೋಧಿತನ, ಮೀಸಲಾತಿಯ ಪ್ರಶ್ನೆ, ಪಾಕಿಸ್ತಾನ ಪದದ ಹಿಂದೆ ಹೊರಟ ಬಿಜೆಪಿಗೆ ಬಿಹಾರದ ಜನತೆ ಸೊಪ್ಪು ಹಾಕಲಿಲ್ಲ, ಬದಲಾಗಿ ಇದೇ ಘಟನೆಗಳನ್ನು ಸಮರ್ಥವಾಗಿ ಬಳಸಿಕೊಂಡ ಮಹಾ ಒಕ್ಕೂಟವನ್ನು ಜನತೆ ಬೆಂಬಲಿಸಿತು.

ಮಾಂಜಿಯವರು ಕೇವಲ ತಮ್ಮ ಒಂದು ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಸಮರ್ಥರಾದರು. ಅವರು ಬಿಜೆಪಿ ಪರ ಸೇರಿದ್ದಕ್ಕೆ ಕಾರಣ ನಿತೀಶ್ ಕುಮಾರರೇ ಆಗಿದ್ದರು ಎನ್ನುವುದನ್ನು ನಾವು ಗಮನಿಸಬೇಕಿದೆ. ನಿತೀಶರ ಅಧಿಕಾರದ ದಾಹ ಮಾಂಜಿಯನ್ನು ಈ ಸ್ಥಿತಿಗೆ ಇಳಿಸಿತು. ರಾಮ್ ವಿಲಾಸ್ ಪಾಸ್ವಾನರ ಅವಕಾಶವಾದಿ ರಾಜಕಾರಣವೂ ಅವರನ್ನು ಸ್ವಂತ ನೆಲದಲ್ಲಿ ನೆಲಕಚ್ಚಿಸಿತು. ಇವರಿಬ್ಬರ ಬಗ್ಗೆ ನಾನೇಕೆ ಇಲ್ಲಿ ಪ್ರಸ್ತಾಪಿಸಿದೆನೆಂದರೆ ಬಿಹಾರದ ದಲಿತ ರಾಜಕಾರಣ ಅಧೋಗತಿಗೆ ಇಳಿದುಹೋಗಿರುವುದರಿಂದ. ಬಿಹಾರದ ದಲಿತರಿಗೆ ತಮ್ಮನ್ನು ಪ್ರತಿನಿಧಿಸುವ ಅವರದೇ ನಾಯಕರೂ ಇಲ್ಲ, ಇತರ ನಾಯಕತ್ವದ ಪಾರ್ಟಿಗಳೂ ಇಲ್ಲ, ಈಗಿರುವ ಎರಡೂ (ಬಿಜೆಪಿ ಒಕ್ಕೂಟ ಮತ್ತು ಮಹಾ ಒಕ್ಕೂಟ) ನಾಯಕತ್ವವೂ ಐತಿಹಾಸಿಕ ದಲಿತ ವಿರೋಧಿಗಳ ಕೈಯಲ್ಲಿಯೇ ಅಡಗಿ ಕುಳಿತಿದೆ.

ಕೋಮುವಾದಿ ಶಕ್ತಿ ಸೋತಿದ್ದಕ್ಕೆ, ದೇಶದ ಕೋಮುವಾದದ ವಿರೋಧಿಗಳು ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ ಕೋಮುವಾದವು ಕೇವಲ ಧರ್ಮ-ಧರ್ಮಗಳ ನಡುವಿನ ಸಮಸ್ಯೆಯಲ್ಲ, ಅದರಲ್ಲಿ ಜಾತಿವಾದವೂ ಸೇರಿದೆ ಎಂಬುದನ್ನು ವಿಚಾರವಾದಿಗಳು ಮರೆತಿದ್ದಾರೆ. ಆದ್ದರಿಂದ



ಈ ಚುನಾವಣೆಯ ಫಲಿತಾಂಶವನ್ನು ದಲಿತರ ಪರವಾಗಿ ಯಾರೂ ವಿಶ್ಲೇಷಣೆಯನ್ನೇ ಮಾಡುವ ಗೋಜಿಗೆ ಹೋಗಲಿಲ್ಲ, ಆದರೆ ಅಕ್ಷರಶಃ ದಲಿತರಿಗೆ ಈ ಚುನಾವಣೆ ಅತ್ತ ದರಿ ಇತ್ತ ಪುಲಿ ಎಂಬ ಸನ್ನಿವೇಶವನ್ನು ಉಂಟುಮಾಡಿತ್ತು, ದಲಿತರ ಪಾಲಿಗೆ ಒಂದು ಕಡೆ ಕೋಮುವಾದವಾದರೇ ಮತ್ತೊಂದು ಕಡೆ ಜಾತಿವಾದ.

ಇಂದು ನಿತೀಶ್‌ಕುಮಾರ್ ಪರವಾಗಿ ಮಾತನಾಡುವವರಿಗೇನು ಕಡಿಮೆ ಇಲ್ಲ, ಅದಕ್ಕೆ ಬಲವಾದ ಕಾರಣ ಕೋಮುವಾದವನ್ನು ಹಿಮ್ಮೆಟ್ಟಿಸಿದ ಮಹಾ ಒಕ್ಕೂಟದ ಚಾಣಾಕ್ಷತನ. ಇದನ್ನು ನಾವೆಲ್ಲರೂ ಒಪ್ಪಲೇಬೇಕು. ಆದರೆ ಕೋಮುವಾದವೆಂದರೆ ಕೇವಲ ಧರ್ಮಕ್ಕೆ ಸಂಬಂಧಿಸಿದ್ದೇ? ಜಾತಿಜಾತಿಗಳ ನಡುವೆ ನಡೆಯುತ್ತಿರುವ ವೈಷಮ್ಯಗಳನ್ನು ಏನೆಂದು ಕರೆಯಬೇಕು? ಇವು ಕೋಮುವಾದದ ಭಾಗವಲ್ಲವೆ? ಹೌದೆಂದಾದರೆ ಬಿಜೆಪಿಗೂ, ಮಹಾ ಒಕ್ಕೂಟಕ್ಕೂ ನಡುವಿನ ಅಂತರವೇನು? ನನಗಂತೂ ಒಂದೇ ನಾಣ್ಯದ ಎರಡು ಮುಖಗಳಂತೆ ಕಾಣುತ್ತವೆ. ಅದಕ್ಕೆ ಕಾರಣವೂ ಇದೆ.

ಬಿಹಾರದ ರಣವೀರ ಸೇನೆ ಹೆಸರನ್ನು ಎಲ್ಲರೂ ಕೇಳಿರುತ್ತೀರಿ. ಕುಖ್ಯಾತಿಗೆ ಹೆಸರುವಾಸಿಯಾ...
ಬಿಹಾರದ ದಲಿತರು ಜಮೀನ್ದಾರರ ವಿ...
ಕೂಲಿಯ ವಿರುದ್ಧ ತಿರುಗಿಬಿದ್ದಾಗ ಅವರನ್ನು...
ಭೂಮಿಹಾರ್ ಮತ್ತು ರಜಪೂತ್...
ನಾಯಕತ್ವದಲ್ಲಿ ಹುಟ್ಟಿಕೊಂಡ ಶಸ್ತ್ರಸಜ್ಜಿತ...
ಈ ರಣವೀರ ಸೇನೆ. ಇದರ ಅಂದಿನ ಮು...
ಬ್ರಹ್ಮೇಶ್ವರ್ ಸಿಂಗ್ "ನಾವು ದಲಿತ ಮಕ್ಕಳ...
ಏಕೆಂದರೆ ಅವರು ಬೆಳೆದು ದೊಡ್ಡವರಾಗಿ...
ನಾವು ದಲಿತ ಹೆಂಗಸರನ್ನು ಕೊಲ್ಲುತ್ತೇವೆ...
ನಕ್ಸಲರಿಗೆ ಜನ್ಮ ನೀಡುತ್ತಾರೆ" ಎಂದು...

ನಕ್ಸಲೀಯರ ಸಹಾಯದಿಂದ ದಲಿತರು...
ಹೆಚ್ಚು ಸಂಬಳವನ್ನು ಪಡೆದುಕೊಂಡದ್ದು...
ಅದಕ್ಕೆ ದಲಿತರು ನೂರಾರು ಜೀವಗಳನ್ನು...
ಇದೇ ರಣವೀರ ಸೇನೆಯಿಂದ. ಸುಮಾರು...
ಕೊಂದಿರುವ ರಣವೀರ ಸೇನೆಯ ರ...
ನರಮೇಧಗಳಿಂದ ಕೂಡಿದೆ. ಅವರು ಅದೆ...
ದಾಳಿ ಮಾಡುತ್ತಾರೆಂದರೆ 1997 ರಲ್ಲಿ...
ಕೊಂದಿದ್ದರು. ಅವರಲ್ಲಿ 16 ಮಕ್ಕಳ...
ಹೆಂಗಸರಿದ್ದರು. ಗರ್ಭಿಣಿ ಹೆಂಗಸಿನ...
ಮಗುವನ್ನು ಹೊರತೆಗೆದು ಮೇಲಕ್ಕೆಸೆದು...
ಸಿಡಿಸಿದ್ದರು! ಆದರೆ ನ್ಯಾಯಾಲಯಗಳು...
ಕೊಂದವರನ್ನು ಖುಲಾಸೆಗೊಳಿಸುತ್ತಲೇ...

ಈ ಮೇಲಿನ ಕೃತ್ಯಗಳೆಲ್ಲವೂ ಲ...
ಯಾದವ್ ಮತ್ತು ಅವರ ಪತ್ನಿ ರಾಬ...
ಆಡಳಿತಾವಧಿಯಲ್ಲಿ ನಡೆದಿರುವವು. 1...
ರಣವೀರ ಸೇನೆಯನ್ನು ನಿಷೇಧಿಸಿದೆಯಾದ...
ಆಳುವವರ ನಾಟಕವೆಂಬುದರಲ್ಲಿ ಸಂಶಯ...
ಬಿಜೆಪಿಯ ಸಖ್ಯದೊಂದಿಗೆ ನಿತೀಶ್ ಕು...



...ರಾಷ್ಟ್ರೀಯ ಆಟಗಾರನಾಗಲು ದಾಟಬೇಕಾದ ...ಬಳುಗಳ ಬಗ್ಗೆ ತಿಳಿದಿರುವುದಿಲ್ಲ, ರಣಜಿ, ಆ ಬಳಿಕ ...ಯ ತಂಡಕ್ಕೆ ಆಯ್ಕೆಯಾಗುವುದು ಇವೆಲ್ಲಾ" ...ಕರಣನ ಕಲ್ಪನಾಲೋಕದ ಹರಹನ್ನು ತೋರಿಸುತ್ತದೆ.

...ಮಿಂಚಿನ ಬೆಳಕು' ಎಂಬ ಅಂತಃಕರಣನ ಪ್ರಬಂಧ ...ನದ ವಸ್ತು ವಿಷಯಗಳು ಅಂತಃಕರಣ ತನ್ನ ವಯಸ್ಸಿನ ... ಪಟ್ಟು ಪ್ರಬುದ್ಧ ಎನ್ನುವುದಕ್ಕೆ ಸಾಕ್ಷಿಯೊದಗಿಸುತ್ತದೆ. ... ಭಾಷೆ ಮತ್ತು ವಾಕ್ಯರಚನೆ ಆತನ ವಯಸ್ಸು ಮತ್ತು ...ತಿಯನ್ನು ತೋರಿಸುತ್ತದೆ.

...ಮಿಂಚಿನ ಬೆಳಕು' ಕೃತಿಯ ಮೊದಲ ಭಾಗದ ಇಪ್ಪತ್ತು ...ಧಗಳು ಮಕ್ಕಳ ಲೋಕದ್ದಾದರೆ ಎರಡನೇ ಭಾಗದ ...ರೋಗಳು, ಕ್ರಾಂತಿಕಾರಿ ಹೋರಾಟ ಮತ್ತು ನಾನು ... ಪುಸ್ತಕಗಳಲ್ಲಿ ಏಳು ಲೇಖನಗಳು ಅಂತಃಕರಣನ ...ಸ್ಸಿಗೆ ಮೀರಿದ ಪ್ರಬುದ್ಧತೆಗೆ ಸಾಕ್ಷಿ ಒದಗಿಸುತ್ತದೆ. ...ಕರಣನ ಅಪ್ಪ ಸರ್ಜಾಶಂಕರ ಹರಳೀಮಠ ಕನ್ನಡದ ...ಖ ಪ್ರಗತಿಪರ ಲೇಖಕರಲ್ಲೊರ್ವರು. ಅಪ್ಪನ ಚಿಂತನೆ, ... ಮತ್ತು ಮಾತುಗಳು ಅಂತಃಕರಣನ ಮೇಲೆ ಪ್ರಭಾವ ...ದ್ದಕ್ಕೆ, ಕ್ರಾಂತಿಕಾರಿ ಭಗತ್‌ಸಿಂಗ್ ಮತ್ತು ...ವಲೋಕದ ಬೆಳಕಿನ ಕಿರಣ ಭಾರತರತ್ನ ಬಿ.ಆರ್. ...ೇಡ್ಕರ್ ಲೇಖನಗಳೇ ಸಾಕ್ಷಿ.

...ಮ್ಮನ ಸಿಟ್ಟು' ಅಂತಃಕರಣನ ಕವಿತೆಗಳ ಸಂಕಲನ. ...ಲ್ಲಿ ಒಟ್ಟು 40 ಕವಿತೆಗಳಿವೆ. ಇಲ್ಲಿನ ವಸ್ತುಗಳೆಲ್ಲವೂ ...ಕರಣನ ಬಾಲಪ್ರಪಂಚದ್ದೇ. ಇಲ್ಲಿ ಅಂತಃಕರಣ ತನ್ನ ...ಂಬ, ಶಾಲೆ, ದೇಶ, ಆಟ, ಕಂಪ್ಯೂಟರ್, ಮೆಚ್ಚಿನ ..., ಪರಿಸರ ಇತ್ಯಾದಿ ವಿಷಯಗಳ ಮೇಲೆ ತನ್ನದೇ ...ಭಾಷೆಯಲ್ಲಿ ಪುಟ್ಟ ಪುಟ್ಟ ಕವನಗಳನ್ನು ಹೆಣೆದಿದ್ದಾನೆ. ... ಕವನಗಳಲ್ಲಿ ಅಂತಃಕರಣನ ವಯಸ್ಸಿಗೆ ಮೀರಿದ ...ಗಳಿಲ್ಲ.

'ಮೆರವಣಿಗೆ' ಅಂತಃಕರಣನ ಕಥಾಸಂಕಲನ. 33 ಪುಟ್ಟ ಪುಟ್ಟ ಕತೆಗಳಿರುವ 'ಮೆರವಣಿಗೆ'ಯಲ್ಲಿನ ಎಲ್ಲಾ ಕತೆಗಳು ಒಳ್ಳೆಯ ಸಂದೇಶಗಳನ್ನು ನೀಡುತ್ತವೆ. ಅಂತಃಕರಣನ ಕತೆಗಳಲ್ಲಿ ಆತನ ಓದಿನ ಪ್ರಭಾವ ಇದ್ದೇ ಇದೆ. ಹೆಚ್ಚಿನ ವರ್ಣನೆಗಳಿಲ್ಲದೆ ಕಥೆಯನ್ನು ಸರಳವಾಗಿ ನಿರೂಪಿಸಿದ್ದಾನೆ. ಕೆಲವು ಕತೆಗಳಲ್ಲಿ ಮಕ್ಕಳಿಗೆ ಪ್ರಿಯವಾದ ಕಾರ್ಟೂನ್ ಲೋಕದ ಪ್ರಭಾವವಿದೆ. 'ಷದಕ ಗೆದ್ದ ಷದಕೇಶ' ಎಂಬ ಕತೆ 'ಚಿಲ್ಡ್ರನ್ಸ್ ಆಫ್ ಹೆವನ್' ಎಂಬ ಸಿನಿಮಾದ ಪ್ರೇರಣೆಯಿಂದ ಬರೆದಿದ್ದು ಎಂದು ಅಂತಃಕರಣ ಹೇಳಿಕೊಂಡಿದ್ದಾನೆ. ಇರಾನಿ ಭಾಷೆಯ ಸಿನಿಮಾವನ್ನು ಅಂತಃಕರಣನಂತಹ ಹತ್ತರ ಹರೆಯದ ಪೋರ ವೀಕ್ಷಿಸಬೇಕೆಂದರೆ ಅದಕ್ಕೆ ಹೆತ್ತವರ ಮಾರ್ಗದರ್ಶನವಿದ್ದೇ ಇರುತ್ತದೆ.

"ಬರವಣಿಗೆ ಎಂದರೆ ತನ್ನ ಅನುಭವಕ್ಕೆ ಭಾಷೆಯ ಉಡುಗೆ ತೊಡಿಸಿದ ಹಾಗೆ. ಅದರಾಚೆಗೆ ಓರ್ವ ಲೇಖಕ ಹೋದರೆ ಅದು ಕೃತಕವಾಗುತ್ತದೆ. ಓದುಗ ಅದನ್ನು ಒಪ್ಪಿಕೊಳ್ಳುವುದಿಲ್ಲ, ಈ ಸಂಕಲನದಲ್ಲಿ ಕೂಡ ಲೇಖಕ ತನ್ನ ಅನುಭವದಾಚೆ ಹೋಗುವ ಪ್ರಯತ್ನ ಮಾಡುವುದಿಲ್ಲ" ಎಂದು ಮುನ್ನುಡಿಯಲ್ಲಿ ಖ್ಯಾತ ಸಾಹಿತಿ ಡಾ| ನಾ. ಡಿ'ಸೋಜ ಬರೆದಿರುವುದು ಇಲ್ಲಿನ ಕಥೆಗಳ ಸಹಜತೆಗೆ ನಿದರ್ಶನ. ಈಗಾಗಲೇ ನಾಗಮಂಗಲದ ಆದಿಚುಂಚನಗಿರಿಯಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಯ ಅಧ್ಯಕ್ಷತೆಯ ಗೌರವಕ್ಕೆ ಭಾಜನನಾಗಿರುವ ಅಂತಃಕರಣನಿಗೆ 2014ನೇ ಸಾಲಿನ 'ವಿದ್ಯಾಸಾಗರ ಬಾಲ ಪುರಸ್ಕಾರವೂ' ಸಂದಿದೆ. ಅಂತಃಕರಣ ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ 2015 ನೇ ಸಾಲಿನ ಬೇಂದ್ರೆ ಪ್ರಶಸ್ತಿಯೂ ಸಂದಿದೆ. ಮೊನ್ನೆ ನವೆಂಬರ್ 14 ಮಕ್ಕಳ ದಿನಾಚರಣೆಯಂದು ರಾಜ್ಯ ಸರಕಾರ 'ಅಸಾಧಾರಣ ಪ್ರತಿಭೆ' ಎಂಬ ಪ್ರಶಸ್ತಿಯನ್ನೂ ನೀಡಿದೆ, ಮಾತ್ರವಲ್ಲ ಅಂತಃಕರಣನ ಹೆಸರನ್ನು ರಾಷ್ಟ್ರ ಪ್ರಶಸ್ತಿಗೂ ಶಿಫಾರಸ್ಸು ಮಾಡಿದೆ.

ಶಿವಮೊಗ್ಗದ ಜಿಲ್ಲಾ ಪತ್ರಿಕೆ 'ಎಚ್ಚರಿಕೆ'ಯಲ್ಲಿ ಅಂತಃಕರಣನ ಅಂಕಣ ಕಣ್ಣಮಿಂಚು ಪ್ರತಿ ಶನಿವಾರ ಪ್ರಕಟವಾಗುತ್ತಿದೆ. ವಿಜಯವಾಣಿ, ಸಂಯುಕ್ತ ಕರ್ನಾಟಕ, ಗೌರಿ ಲಂಕೇಶ್, ಬಾರುಕೋಲು, ನಿಮ್ಮ ಅಂತರಂಗ, ಸಹಕಾರಿ ದನಿ, ನಾಗರಿಕ, ಚೆತ್ತಿಂಗ್ಳು, ಮುನ್ನುಡಿ ಇತ್ಯಾದಿ ಪತ್ರಿಕೆಗಳಲ್ಲಿ ಅಂತಃಕರಣನ ಕತೆ, ಕವನ, ಪ್ರಬಂಧಗಳು ಆಗಾಗ ಪ್ರಕಟವಾಗುತ್ತಿರುತ್ತವೆ. ಮುಂದೊಂದು ದಿನ ಕನ್ನಡ ಸಾಹಿತ್ಯ ಲೋಕದಲ್ಲಿ ಬಹುದೊಡ್ಡ ಹೆಸರು ಮಾಡಲಿರುವ ಎಲ್ಲಾ ಲಕ್ಷಣಗಳೂ ಅಂತಃಕರಣನ ಬರಹಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ. ಅಂತಃಕರಣನಿಗೆ ಗುಡ್‌ಲಕ್, ಕೀಪಿಟ್ ಅಪ್ ಎಸ್ನೋಣ.

■ ಇಸ್ಮತ್ ಫಜೀರ್

...ವೇನು? ಈ ಮೇಲಿನ ಅಮಾನವೀಯ ಹತ್ಯೆಗಳ ... ನಡೆಸಿ ವರದಿ ನೀಡಲು ನೇಮಿಸಿದ ನಿವೃತ್ತ ಜಸ್ಟೀಸ್ ...ರ್ ದಾಸ್ ಕಮಿಶನನ್ನು ನಿತೀಶ್ ಕುಮಾರ್ ಏಕಾಏಕಿ ...ಮಾಡಿದರು. ಆದಾಗಲೇ ತಯಾರಿಸಿರುವ ವರದಿಯನ್ನು ...ರಕ್ಕೆ ನೀಡಲೂ ಸಹ ಅವಕಾಶ ನೀಡದೆ ಆ ...ತಿಯನ್ನೇ ರದ್ದುಗೊಳಿಸಲಾಯಿತು. ಇಂದಿನ ಮಹಾ ...ಟದಲ್ಲಿರುವವರ್‍ಯಾರೂ ಅಂದು ತುಟಿಬಿಚ್ಚಲಿಲ್ಲ, ಅದಕ್ಕೆ ... ಸತ್ತವರು ದಲಿತರು! ಕೊಂದವರು ಮೇಲ್ಜಾತಿಗೆ ...ದ ರಣವೀರ ಸೇನೆ.

...ತ್ತೀಚೆಗೆ ಲಾಲೂ ಸಖ್ಯ ತೊರೆದ ಆರ್‌ಜೆಡಿ ಸಂಸದ ... ಯಾದವ್ "ನಿತೀಶ್ ಕುಮಾರ್ ಮತ್ತು ಲಾಲೂ ...ದ್ ಯಾದವ್ ಇಬ್ಬರೂ ಸಹ ರಣವೀರ ಸೇನೆಯ ...ವಾದಿಗಳನ್ನು ರಕ್ಷಿಸುತ್ತಿದ್ದರು" ಎಂದು ಹೇಳಿದ್ದಾರೆ. ...ಾ ಪೋಸ್ಟ್ ಸ್ಟಿಂಗ್ ಆಪರೇಷನ್ನಿನಲ್ಲಿ ರಣವೀರ ...ಯ ಸದಸ್ಯರುಗಳು ತಮಗೆ ಸಹಾಯ ಮಾಡಿದ ... ರಣವೀರ ಸೇನೆಯನ್ನು ಸಲುಹಿ ಕಾಪಾಡಿದ ...ೀಯ ಮುಖಂಡರುಗಳ ಹೆಸರನ್ನು ಬಹಿರಂಗಪಡಿಸಿ ... ಅವರು ಮಾಜಿ ಪ್ರಧಾನಿ ಚಂದ್ರಶೇಖರ್‌ರವರ ... ಸೇರಿದಂತೆ ಬಿಜೆಪಿಯ ಮುರಳಿ ಮನೋಹರ್ ..., ಸಿ.ಪಿ.ಠಾಕೂರ್ ಹೆಸರನ್ನೂ ಹೇಳಿದ್ದಾರೆ. ಜೊತೆಗೆ ...ಯು-ಬಿಜೆಪಿ ಸರ್ಕಾರದ ಉಪಮುಖ್ಯಮಂತ್ರಿ ಸುಶೀಲ್ ...ದಿಯ ಹೆಸರೂ ಕೇಳಿಬಂದಿದೆ.

...ಣವೀರ ಸೇನೆಯ ಉಗ್ರರ ಬಳಿ ಇದ್ದ ಎಕೆ-47, ... ಮತ್ತು SLR ಬಂದೂಕುಗಳ ಹಿಂದೆ ಇದೇ ... ವ್ಯಕ್ತಿಗಳ ಕೈವಾಡವಿದೆ. ಅದಲ್ಲದೇ ರಜೆಯ ...ಸುವ ಮತ್ತು ನಿವೃತ್ತಿ ಹೊಂದಿರುವ ಯೋಧರಿಂದ ...ಸೇನೆಗೆ ತರಬೇತಿ ಕೊಡಿಸಿರುವ ಮಾಹಿತಿ ...ಗೊಂಡಿದೆ. ಹೀಗೆ ಒಂದು ಖಾಸಗಿ ಕುಖ್ಯಾತ ...ಸುವುದಕ್ಕೆ ಅಂದಿನ ಲಾಲೂ ಪ್ರಸಾದ್ ಯಾದವ್ ... ನಿತೀಶ್ ಕುಮಾರ್ ಸರ್ಕಾರದ ಕೃಪಾಕಟಾಕ್ಷವೇ ... ಹೀಗಿರುವಾಗ ಈಗ ಕೋಮುವಾದಿಗಳ ವಿರುದ್ಧ ಜಾತಿವಾದಿಗಳು ಜಯಗಳಿಸಿದ್ದಾರೆ ಅಷ್ಟೆ. ಇದನ್ನು ಪ್ರಗತಿಪರರು, ದಲಿತಪರರು ಒಪ್ಪಿಕೊಂಡು ಸಂಭ್ರಮಿಸಬೇಕೇ? ತಿಳಿದೋ ತಿಳಿಯದೆಯೋ ಸಂಭ್ರಮಿಸಿಬಿಟ್ಟಿದ್ದೇವೆ.


ಒಂದಂತೂ ನಿಜ. ಇಂದಿನ ಸನ್ನಿವೇಶ ಎರಡರಲ್ಲಿ ಒಂದನ್ನು ಆರಿಸುವಂತೆ ನಮ್ಮನ್ನು ಒತ್ತಾಯಿಸುತ್ತಿದೆ. ಒಂದು ವ್ಯಾಘ್ರ ಮತ್ತೊಂದು ತೋಳ. ಒಬ್ಬ ಮಹಾನ್ ಭ್ರಷ್ಟ ಮತ್ತೊಬ್ಬ ಅಲ್ಪ ಭ್ರಷ್ಟ. ನಾವೂ ಸಹ ತೋಳದ ಗೆಲುವನ್ನು ನಮ್ಮ ಗೆಲುವೆಂದೂ, ಅಲ್ಪ ಭ್ರಷ್ಟನ ವಿಜಯವನ್ನು ನಮ್ಮ ದಿಗ್ವಿಜಯವೆಂದೂ ನಂಬಿಕೊಂಡುಬಿಡುತ್ತೇವೆ. ವಿಚಾರವಾದಿಗಳ ವಿಷಯದಲ್ಲಂತೂ ಈಗ ಇದೇ ಸತ್ಯ.

ಹೀಗೆ ಕೋಮುವಾದದ ವಿರುದ್ಧ ಜಾತಿವಾದವನ್ನು ಬೆಂಬಲಿಸುತ್ತಾ ಹೋದರೆ ನಮ್ಮ ಮುಂದೆ ಮತ್ತೊಂದು ಮಾನವತಾವಾದ ಶಕ್ತಿಯನ್ನು ಅಸ್ತಿತ್ವಕ್ಕೆ ತರುವ ಅವಕಾಶದ ಕನಸೂ ಕಾಣದಂತಾಗಿ ಬರಿದಾಗಿ ಬಿಡುತ್ತೇವೇನೋ ಎಂಬ ಭಯ ಕಾಡುತ್ತಿದೆ. ಈ ಚುನಾವಣೆಯ ಫಲಿತಾಂಶದ ನಂತರ ಲಾಲೂ ಪ್ರಸಾದ್ ಯಾದವ್ ಮತ್ತು ನಿತೀಶ್ ಕುಮಾರ್ ಗಂಗೆಯಲ್ಲಿ ಮಿಂದೆದ್ದು ಹಿಂದಿನ ಪಾಪಗಳೆಲ್ಲವನ್ನೂ ಕಳೆದುಕೊಂಡು ಬಿಟ್ಟರೇನೋ ಎಂಬ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಲಾಲೂ ಮಕ್ಕಳನ್ನು ಗದ್ದುಗೆಗೆ ಏಕಾಏಕಿ ಏರಿಸಿದ್ದು ಯಾರಿಗೂ ಅನುವಂಶೀಯ ದುಷ್ಟ ರಾಜಕಾರಣವೆಂದು ಎನಿಸುತ್ತಿಲ್ಲ, ಅವರನ್ನು ಬೆಂಬಲಿಸುವವರೂ ಸಹ ಅದೇ ಭ್ರಮೆಯಲ್ಲಿ ಬಿದ್ದಿರುವುದು ನನ್ನ ಭಯವನ್ನು ಇಮ್ಮಡಿಗೊಳಿಸಿದೆ. ನಮ್ಮ ಶತ್ರುಗಳಿಬ್ಬರೂ ಕಾದಾಟಕ್ಕಿಳಿದಿರುವಾಗ ಒಂದು ಪಾಳಯ ಸೇರಿಬಿಡುವುದು ಅಪಾಶವಾದ. ಆದರೆ ನಾವು ಏಕಲವ್ಯನ ಅನುಯಾಯಿಗಳು. ಪಾಂಡವರು ಮತ್ತು ಕೌರವರ ಯುದ್ಧದಲ್ಲಿ ಯಾರ ಜೊತೆಯೂ ಸೇರದೆ ಇಬ್ಬರನ್ನೂ ಸಮಾನ ಶತ್ರುಗಳೆಂದು ಕೊಂಡ ಏಕಲವ್ಯ ನಮಗಿಂದು ಆದರ್ಶವಾಗಬೇಕೆಂದು ನನಗನಿಸುತ್ತಿದೆ. ಇದರ ಬಗ್ಗೆ ಗಂಭೀರವಾಗಿ ಯೋಚಿಸುವ ಸರದಿ ನಮ್ಮದಾಗಬೇಕಾಗಿದೆ.

■ ವಿಕಾಸ ಆರ್ ಮೌರ್ಯ, ಬೆಂಗಳೂರು

ತುಳಸಿ ಸುತ್ತ ವೈದಿಕರ ಗೊಡ್ಡು ಪುರಾಣಗಳು

ಈ ವಾರ ತುಳಸಿ ಹಬ್ಬ ಬಂದಾಗ ಪತ್ರಿಕೆಗಳಲ್ಲೆಲ್ಲಾ ತುಳಸಿಯ ಕುರಿತ ಅವೇ ಹಳೆಯ ಪುರಾಣ ಕಥೆಗಳು ಹೊರಬಂದಿವೆ. ತುಳಸಿಯಲ್ಲಿ ಅದ್ಭುತ ಔಷಧ ಗುಣಗಳು ಇರುವುದು ನಿಜ. ಅದು ಅನೇಕ ರೋಗಗಳಿಗೆ ದಿವ್ಯ ಔಷಧವೆಂಬುದೂ ನಿಜ. ಈ ಗಿಡದ ಗಾಳಿಯಲ್ಲಿ ಕೀಟನಾಶಕ ಗುಣವೂ ಇರುವುದು ನಿಜ. ಯುರೋಪ್ ಅಮೆರಿಕಾದಲ್ಲಿ ನಡೆದ ಸಂಶೋಧನೆಗಳಲ್ಲೂ ಇದು ದೃಢಪಟ್ಟಿದೆ. ಹಾಗಾಗಿ ತುಳಸಿ ಎಲೆಗಳ ಮತ್ತು ಕಡ್ಡಿಯ ಸೇವನೆಯಿಂದ ಮತ್ತು ಗಿಡದ ಹತ್ತಿರದ ಗಾಳಿಯ ಸೇವನೆಯಿಂದ ನಿಜವಾಗಿ ನಮ್ಮ ಆರೋಗ್ಯಕ್ಕೆ ಆಗುವ ಲಾಭದ ಬಗ್ಗೆ ಜನರಿಗೆ ತಿಳಿಹೇಳುವ ಬದಲು ಮೌಢ್ಯಭರಿತ ಪುರಾಣಗಳನ್ನು ಜೋಡಿಸುವ ಅಗತ್ಯವಿದೆಯೇ? ನೇರವಾಗಿ ಗಿಡದ ಔಷಧ ಗುಣದ ಬಗ್ಗೆ ಹೇಳಿದರೆ ಅದು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುವುದಿಲ್ಲ ಎಂಬ ಕಾರಣಕ್ಕೆ ಹಿಂದಿನ ಕಾಲದಲ್ಲಿ ಪೌರಾಣಿಕ ಕಥೆಯ ಲೇಪನ ಕೊಟ್ಟಿರಬಹುದು. ಆದರೆ ಈ ಆಧುನಿಕ ಕಾಲದಲ್ಲಿ ಅದರ ಅವಶ್ಯಕತೆ ಇಲ್ಲ.



ಋತುಮತಿಯಾದ ಮಹಿಳೆಗೆ ನಿಜವಾಗಿ ಆ ಸಮಯ ದಲ್ಲಿ ತುಳಸಿಯ ಗಾಳಿ ಮತ್ತು ಅದರ ಎಲೆಗಳ ಸೇವನೆ ಅತಿ ಅಗತ್ಯ. ಆ ಸಮಯದಲ್ಲಿ ಅವಳ ರಕ್ತಹೀನತೆ ನಿವಾರಿಸಲು ಬೇಕಾಗುವ ಅನೇಕ ವಿಟಮಿನ್ ಮತ್ತು ಖನಿಜ ತುಳಸಿ ಯಿಂದ ಸಿಗುತ್ತದೆ. ವಿಪರ್ಯಾಸವೆಂದರೆ ಋತುಮತಿಯಾದ ಮಹಿಳೆ ತುಳಸಿಯ ಎಲೆಯನ್ನು ಮುಟ್ಟಬಾರದು, ಗಿಡದ ಹತ್ತಿರವೂ ಹೋಗಬಾರದು ಎಂಬ ಮೂಢನಂಬಿಕೆಯನ್ನು ಮೂರ್ಖ ವೈದಿಕರು ಹುಟ್ಟು ಹಾಕಿದ್ದಾರೆ. ಮನೆಯಲ್ಲಿ ಜನನ-ಮರಣದ ಸೂತಕವಿದ್ದರೂ ಆ ಮನೆಯವರು ತುಳಸಿ ಗಿಡವನ್ನು ಮುಟ್ಟಬಾರದು, ನೀರು ಹಾಕಬಾರದು ಎಂಬ ಮಹಾಮೂರ್ಖ ನಂಬಿಕೆ ಯನ್ನೂ ಯಾರೋ ಶತಮೂರ್ಖರು ಹುಟ್ಟು ಹಾಕಿದ್ದಾರೆ. ಬೇಸಿಗೆಯಲ್ಲಿ ಹದಿಮೂರು ದಿನ ನೀರಿಲ್ಲದೇ ಗಿಡ ಬದುಕುವುದೇ?

ತುಳಸಿಯೂ ಒಂದು ಸಸ್ಯ. ಹಾಗಾಗಿ ಇತರ ಸಸ್ಯಗಳಂತೆ ಅದಕ್ಕೂ ಗೊಬ್ಬರ ಮತ್ತು ಸೂರ್ಯ ರಶ್ಮಿ ಬೇಕು. ಆದರೆ ನಗರ ಪ್ರದೇಶದ ಫ್ಲಾಟುಗಳಲ್ಲಿ ವಾಸಿಸುವವರು ತುಳಸಿಗಿಡ ನೆಡುತ್ತಾರೆ. ಆದರೆ ಅದಕ್ಕೆ ನೀರು ಬಿಟ್ಟು ಬೇರೆ ಏನೂ ಹಾಕುವುದಿಲ್ಲ, ಆದುದರಿಂದ ನಗರದ ಫ್ಲಾಟುಗಳ ತುಳಸಿ ಗಿಡ ಯಾವಾಗಲೂ ಸೊರಗಿಕೊಂಡೇ ಇರುತ್ತದೆ. ಯಾವುದೇ ಸಸ್ಯಕ್ಕೆ ದೈವತ್ವ ಆರೋಪಿಸಿದರೂ ಅದಕ್ಕೆ ಗೊಬ್ಬರ ಹಾಗೂ ಸೂರ್ಯನ ಬೆಳಕು ಬೇಕೆಂಬ ಸಾಮಾನ್ಯ ಜ್ಞಾನ ಅನೇಕರಿಗಿಲ್ಲ.

ಗೊಬ್ಬರ ಹಾಕಿದರೂ ತರಕಾರಿ ತ್ಯಾಜ್ಯದ ಗೊಬ್ಬರ ಮಾತ್ರ ಹಾಕಬೇಕು, ಮೀನು-ಕೋಳಿಯ ತ್ಯಾಜ್ಯದ ಗೊಬ್ಬರ ಹಾಕಬಾರದು ಎಂಬ ಮಡಿವಂತ ಮೂಢ ನಂಬಿಕೆ ಕೆಲವರು ಹೊತ್ತಿದ್ದಾರೆ. ಪುರಾಣಕಥೆಯಂತೆ ತುಳಸಿ ಮತ್ತು ವೃಂದಾ ಇಬ್ಬರೂ ರಾಕ್ಷಸ ಪುತ್ರಿಯರು ಹಾಗೂ ರಾಕ್ಷಸರದೇ ಪತಿವ್ರತಾ ಪತ್ನಿಯರು. ಹಾಗಾಗಿ ಅವರು ಮಾಂಸಾಹಾರ ಸೇವಿಸಿರಲೇ ಬೇಕು. ಹಾಗಿರುವಾಗ ತುಳಸಿ- ವೃಂದಾ ಇಬ್ಬರೂ ಗಿಡವಾಗಿ ಹುಟ್ಟಿರುವಾಗ ಅವರಿಗೆ ಮಾಂಸಾಹಾರದ ಗೊಬ್ಬರ ಹಾಕಬಾರದು ಎಂಬ ನಿಯಮವೇ ತರ್ಕವಿಹೀನ.

ತುಳಸಿಯ ವಿಷಯದಲ್ಲಿ ಅನೇಕ ಗೊಂದಲಗಳಿವೆ. ಮೊಟ್ಟ ಮೊದಲನೆಯದಾಗಿ ತುಳಸಿ ಕಟ್ಟೆಗೆ ಕೆಂಪು ಬಣ್ಣ ಕೊಡಬೇಕೇ ಅಥವಾ ಬಿಳಿ ಬಣ್ಣ ಕೊಡಬೇಕೇ ಎಂಬ ಬಗ್ಗೆ ಒಮ್ಮತವಿಲ್ಲ, ಕೆಲವರು ಬಿಳಿ ಬಣ್ಣ ಸರಿಯೆಂದರೆ ಹಲವರು ಕೆಂಪು ಬಣ್ಣ ಸರಿ ಎನ್ನುತ್ತಾರೆ. ಇನ್ನು ಈ ಬಣ್ಣಗಳಿಗೂ ಸಂಬಂಧಿಸಿ ಒಂದು ಅಜ್ಜಿ ಕಥೆ ಹುಟ್ಟಿಕೊಳ್ಳಬಹುದೇನೋ.

ತುಳಸಿಯ ಪುರಾಣ ಕತೆಗಳಲ್ಲಿಯ ಗೊಂದಲವೆಂದರೆ ತುಳಸಿ ಮತ್ತು ವೃಂದ ಇಬ್ಬರೂ ಒಂದೆಯೇ ಅಥವಾ ಬೇರೆ ಬೇರೆ ವ್ಯಕ್ತಿಗಳೇ ಎಂಬುದು. ಶಿವ ಪುರಾಣದ ಪ್ರಕಾರ ಶಿವನ ಕೋಪಾಗ್ನಿ ಸಮುದ್ರದಲ್ಲಿ ಬಿದ್ದು ಜಲಂಧರ ಹುಟ್ಟುತ್ತಾನೆ. ಅವನೇ ಮುಂದೆ ಪತಿವ್ರತೆ ವೃಂದಾಳನ್ನು ಮದುವೆಯಾಗಿ ಅವಳ ಪಾತಿವ್ರತ್ಯದ ಕವಚದಿಂದ ಬಲಿಷ್ಟನಾಗುತ್ತಾನೆ. ಆದರೆ ವಿಷ್ಣು ಭಾಗವತದ ಪ್ರಕಾರ ಕೃಷ್ಣನ ಗೆಳೆಯ ಸುಧಾಮನೇ ರಾಧೆಯ ಶಾಪದಿಂದ ಇನ್ನೊಂದು ಜನ್ಮದಲ್ಲಿ ಶಂಕಚೂಡ ಎಂಬ ರಾಕ್ಷಸನಾಗಿ ಹುಟ್ಟಿ ಪತಿವ್ರತೆ ತುಳಸಿಯನ್ನು ಮದುವೆಯಾಗಿ ಬಲಿಷ್ಟನಾಗುತ್ತಾನೆ. ಆದರೆ ಎರಡೂ ಕಥೆಯಲ್ಲಿ ವಿಷ್ಣುವೇ ವೃಂದಾ ಹಾಗೂ ತುಳಸಿಯನ್ನು ಮೋಸದಿಂದ ಕೆಡಿಸುತ್ತಾನೆ ಮತ್ತು ಶಿವನು ಈ ಎರಡೂ ರಾಕ್ಷಸರನ್ನು ಕೊಲ್ಲುತ್ತಾನೆ. ಹಾಗಾದರೆ ಸರಿಯಾದ ಕಥೆ ಯಾವುದು? ಎರಡೂ ಕಥೆಯಲ್ಲಿ ವೃಂದಾ ಮತ್ತು ತುಳಸಿ ಇಬ್ಬರೂ ಲಕ್ಷ್ಮೀದೇವಿಯ ಅಂಶ ಬಂದ ಹುಟ್ಟಿದವರು. ಹಾಗಾಗಿ ವಿಷ್ಣುವಿನಿಂದ ಕೆಡಿಸಲ್ಪಟ್ಟದ್ದರಲ್ಲಿ ತಪ್ಪಿಲ್ಲ ಎಂಬ ವಾದವಿದೆ. ಹಾಗಾದರೆ ವಿಷ್ಣುಪತ್ನಿ ಲಕ್ಷ್ಮಿದೇವಿಯು ಎರಡೆರಡು ರಾಕ್ಷಸರೊಂದಿಗೆ ಸಂಸಾರ ನಡೆಸಿದ್ದು ಲಕ್ಷ್ಮಿದೇವಿಯ ಶೀಲದ ಪಾವಿತ್ರ್ಯ ಹರಣವಾದಂತೆ ಆಯಿತಲ್ಲವೇ?

ಇನ್ನೊಂದು ಪುರಾಣಕಥೆಯ ಪ್ರಕಾರ ಗಣಪತಿ ದೇವರಿಗೆ ತುಳಸಿದಳ ಈಗಲೂ ಅರ್ಪಿಸದೇ ಇರುವುದಕ್ಕೆ ಕಾರಣ ರಾಕ್ಷಸಿಯಾಗಿದ್ದ ತುಳಸಿಯು ಗಣಪತಿಯನ್ನು ಮೋಹಿಸಿ ಮದುವೆಯಾಗುವಂತೆ ಪೀಡಿಸಿ ಅವನ ತಪಸ್ಸು ಭಂಗ ಮಾಡುತ್ತಾಳೆ. ಅದರಿಂದ ಕುಪಿತನಾದ ಗಣಪತಿ ಅವಳು ಸಸ್ಯವಾಗಿ ಹೋಗಲಿ ಎಂದು ಶಪಿಸುತ್ತಾನೆ. ಅವಳು ಕ್ಷಮೆ ಕೇಳಿದ ನಂತರ ನನ್ನ ಹೊರತು ಎಲ್ಲಾ ದೇವರ ಪೂಜೆಗೆ ತುಳಸಿ ಅರ್ಹವಾಗಲಿ ಎಂದು ಗಣಪತಿ ಶಾಪ-ಕಮ್-ವರ ಕೊಡುತ್ತಾನೆ. ಹಾಗಾಗಿ ಗಣಪತಿ ಪೂಜೆಗೆ ತುಳಸಿದಳ ನಿಷಿದ್ಧವಂತೆ. ಶಿವಪುರಾಣದ ಪ್ರಕಾರ ಜಲಂಧರನ ಹೆಂಡತಿ ವೃಂದಾ ಸತಿಸಹಗಮನ ಮಾಡಿ ಸತ್ತ ಮೇಲೆ ಅವಳ ಬೂದಿಯಲ್ಲಿ ಪಾರ್ವತಿ ಸರಸ್ವತಿ ಲಕ್ಷ್ಮಿಯರು ತುಳಸಿ ನೆಲ್ಲಿಕಾಯಿ ಮತ್ತು ಮಧುಮಾಲತಿ ಗಿಡಗಳ ಬೀಜ ನೆಡುತ್ತಾರೆ. ಅದಕ್ಕಾಗಿ ಈ ಮೂರು ಗಿಡಗಳನ್ನು ಒಟ್ಟಾಗಿ ಪೂಜಿಸಲಾಗುತ್ತದೆ ಮತ್ತು ಇವು ಮೂರೂ ಅಪಾರ ಔಷಧಿ ಗುಣ ಹೊಂದಿವೆ ಯಂತೆ. ಇದರ ಅರ್ಥ ವೃಂದಾ ಸಾಯುವುದಕ್ಕೆ ಮೊದಲೇ ತುಳಸಿ ಬೀಜ ಇತ್ತು; ವೃಂದಾಳೇ ತುಳಸಿಗಿಡವಾಗಿ ಜನಿಸಿದ್ದಲ್ಲ ಎಂದಾತಾಯಿತು.

ಭಾಗವತ ಪುರಾಣದ ಪ್ರಕಾರ ಶಂಕಚೂಡನ ಚರಿತ್ರೆಯಲ್ಲಿ ತುಳಸಿ ಸತ್ತ ನಂತರ ಗಂಡಕಿ ನದಿಯ ರೂಪದಲ್ಲಿ ಹುಟ್ಟುತ್ತಾಳೆ ಮತ್ತು ಕೇವಲ ಅವಳ ಕೂದಲು ಗಂಡಕಿ ದಡದಲ್ಲಿ ತುಳಸಿ ಗಿಡವಾಗಿ ಹುಟ್ಟುತ್ತದೆ. ಹಾಗಾದರೆ ನಾವು ಈಗ ಪೂಜಿಸುವ ತುಳಸಿ ಗಿಡ ಕೇವಲ ತುಳಸಿದೇವಿಯ ಕೂದಲೇ ಅಥವಾ ಇಡೀ ಶರೀರವೇ ಎಂಬ ಗೊಂದಲವಿದೆ.


ತುಳಸಿಯ ಶಾಪದಂತೆ ವಿಷ್ಣು ಗಂಡಕಿ ನದಿಯಲ್ಲಿ ಸಾಲಿಗ್ರಾಮ ಕಲ್ಲಾಗಿ ಹುಟ್ಟುತ್ತಾನೆ. ಅದಕ್ಕಾಗಿ ಈಗಲೂ ವೈಷ್ಣವರು ಸಾಲಿಗ್ರಾಮವನ್ನು ಮನೆಯಲ್ಲಿ ಪೂಜಿಸುತ್ತಾರೆ. (ಕರಾವಳಿಯ ದೇವಸ್ಥಾನದಲ್ಲಿಯ ಮಾಧ್ವ ಅರ್ಚಕರು ಸಾಲಿಗ್ರಾಮವನ್ನು ಶಿವ ದೇವಸ್ಥಾನದಲ್ಲೂ ಗುಟ್ಟಾಗಿ ಪೂಜಿಸಿ ದಿನಾಲೂ ಶಿವನನ್ನು ಅವಮಾನಿಸುತ್ತಾರೆ.) ಆದರೆ ಈ ಸಾಲಿಗ್ರಾಮ ನಿಜವಾಗಿ ಕಲ್ಲು ಅಲ್ಲವೇ ಅಲ್ಲ! ಅದು ಬಸವನ ಹುಳದ ಜಾತಿಯ ಒಂದು ಹುಳದ ದೇಹದ ಪಳೆಯುಳಿಕೆ. ಲಕ್ಷಾಂತರ ವರ್ಷಗಳ ಹಿಂದೆ ಇವು ಗಂಡಕಿ ನದಿಯ ಭಾಗದಲ್ಲಿ ಮಾತ್ರ ವಾಸಿಸುತ್ತಿದ್ದು ಆಗ ಸತ್ತ ಈ ಹುಳುಗಳ ದೇಹ ನದಿಯ ತಳ ಸೇರಿ ಭೂಮಿಯ ಒತ್ತಡ ಹಾಗೂ ಶಾಖದಿಂದ ಕಲ್ಲಿನಂತಾದವು. ಹಾಗಾಗಿ ಈಗ ವೈಷ್ಣವರು ಪೂಜಿಸುತ್ತಿರುವ ಸಾಲಿಗ್ರಾಮ ಒಂದು ಹುಳದ ಶವ ಎನ್ನಬಹುದು.

ಶಿವಪುರಾಣ ಮತ್ತು ಭಾಗವತ ಬರೆದು ಹೆಚ್ಚೆಂದರೆ ಮೂರು ಸಾವಿರ ವರ್ಷಗಳಾಗಿವೆ. ಇದರ ಅರ್ಥ ವೃಂದಾ-ತುಳಸಿಯ ಕಥೆ ಅಥವಾ ಗಂಡಕಿನದಿ-ಸಾಲಿಗ್ರಾಮ ಕಲ್ಲಿನ ಕತೆಯೂ ಕೇವಲ ಮೂರು ಸಾವಿರ ವರ್ಷ ಹಳೆಯದು ಮಾತ್ರ. ಆದರೆ ನಿಜದಲ್ಲಿ ಗಂಡಕಿ ನದಿ ಮತ್ತು ಸಾಲಿಗ್ರಾಮ ಹುಳುಗಳು ಕೋಟ್ಯಾಂತರ ವರ್ಷಗಳ ಹಿಂದೆಯೇ ಡೈನೋಸಾರ್ ಯುಗದಲ್ಲಿಯೇ ಇದ್ದವು. ತುಳಸಿ-ನೆಲ್ಲಿಕಾಯಿ-ಮಾಲತಿ ಗಿಡಗಳು ಲಕ್ಷಾಂತರ ವರ್ಷ ಹಿಂದೆಯೇ ಇದ್ದವು. ಆಗ ಮನುಷ್ಯ ಜಾತಿಯೇ ಭೂಮಿ ಮೇಲೆ ಇರಲಿಲ್ಲ; ಅಂದರೆ ಈ ಗೊಂದಲಮಯ ತುಳಸಿ ಪುರಾಣಕ್ಕೆ ವೈಜ್ಞಾನಿಕ ಆಧಾರವೇ ಇಲ್ಲ ಅನ್ನಬಹುದು.

ಹಾಗಾಗಿ ಕಹಿಬೇವು ಅಶ್ವಥ ನೆಲ್ಲಿಕಾಯಿ ಮಾಲತಿ ಗಿಡದಂತೆ ತುಳಸಿಯೂ ಒಂದು ಅದ್ಭುತ ಔಷಧಿ ಸಸ್ಯ ಹಾಗೂ ಪ್ರಾಕೃತಿಕ ಕೀಟನಾಶಕ ಎಂದು ಪರಿಗಣಿಸಬೇಕು. ಅದಕ್ಕಾಗಿ ತುಳಸಿಯನ್ನು ಕುರುಡಾಗಿ ಪೂಜಿಸುವ ಬದಲು ಅದರ ಗಾಳಿ ಮತ್ತು ಎಲೆ ಸೇವಿಸಬೇಕು. ದೇವಸ್ಥಾನದಲ್ಲಿ ಅರ್ಚಕರು ಕೊಡುವ ತುಳಸಿ ದಳವನ್ನು ಕಿವಿಗೆ ಇಟ್ಟುಕೊಂಡು ಹಾಳು ಮಾಡುವ ಬದಲು ಅದನ್ನು ತೊಳೆದು ತಿಂದರೆ ಆರೋಗ್ಯಕ್ಕೆ ಅತ್ಯುತ್ತಮ.

ವೈದಿಕರಿದ್ದಲ್ಲಿ ಲೈಂಗಿಕ ರಸಿಕತೆ ಇರಲೇಬೇಕು ತಾನೇ. ಅದರಂತೆ ಶೂದ್ರರೆಲ್ಲ ಇದಕ್ಕೆ ತುಳಸಿ ಪೂಜೆ ಎಂದು ಕರೆದರೆ ವೈದಿಕರೆಲ್ಲಾ ಅದಕ್ಕೆ ತುಳಸಿ-ವಿವಾಹ ಎಂದು ಕರೆದು ತುಳಸಿ ಗಿಡ ಮತ್ತು ಸಾಲಿಗ್ರಾಮ ಕಲ್ಲಿಗೆ ಪ್ರತಿವರ್ಷ ಮದುವೆ ಶಾಸ್ತ್ರ ಮಾಡಿ ತಮ್ಮ ರಸಿಕತನ ತೋರುತ್ತಾರೆ. ಎಷ್ಟಾದರೂ ವೈಷ್ಣವ ಪುರಾಣಗಳ ಕೇಂದ್ರ ಬಿಂದುವೇ ಸೆಕ್ಸ್ ತಾನೇ!

■ ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು



ಟಿಪ್ಪು: ಚರಿತ್ರೆಯ ಕಾಲದ ನಾಣ

ಬಡತನ, ನಿರುದ್ಯೋಗ, ಅನಕ್ಷರತೆ ಮುಂತಾದ ಸಕಲೆಂಟು ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಜೊತೆಗೆ ಅಭದ್ರತೆ, ತಳಮಳ ಎದುರಿಸುತ್ತಿರುವ ಮುಸ್ಲಿಂ ಸಮುದಾಯಕ್ಕೆ ಸರ್ಕಾರ ಮಾಡಬೇಕಾದ್ದು ಬೇಕಾದಷ್ಟಿತ್ತು. ಮುಸ್ಲಿಂ ಸಮುದಾಯದ ಸಮಗ್ರ ಅಧ್ಯಯನ ನಡೆಸಿ ಸಾಚಾರ್ ಸಮಿತಿ ನೀಡಿದ ವರದಿಯನ್ನು ದಕ್ಷವಾಗಿ ಅನುಷ್ಠಾನಗೊಳಿಸಿದ್ದರೂ ಆ ಸಮುದಾಯದ ಸ್ಥಿತಿ ಉತ್ತಮಗೊಳ್ಳಬಹುದಿತ್ತು. ಆದರೆ ಜಾತಿಗೊಂದು ಜಯಂತಿ ನಿಗದಿಪಡಿಸಿ ಆ ಸಮುದಾಯವನ್ನೇ ಉದ್ಧಾರ ಮಾಡಿದೆವೆಂದು ಬೀಗುವ ಆಳುವವರಿಂದ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವಂತಿರಲಿಲ್ಲ. ಇದುವರೆಗೆ ಕೆಲ ಸಂಘಸಂಸ್ಥೆಗಳು ಆಚರಿಸಿಕೊಂಡು ಬರುತ್ತಿದ್ದ ಟಿಪ್ಪು ಜಯಂತಿಯನ್ನು ಈ ಸಲದಿಂದ ಸರ್ಕಾರವೇ ಆಚರಿಸಲು ತೀರ್ಮಾನಿಸಿತು. ಮತ್ತಿನ್ನಾವ ಜಯಂತಿ, ಪುಣ್ಯತಿಥಿಗಳಲ್ಲೂ ಹೀಗಾಗಿರಲಿಲ್ಲ, ಟಿಪ್ಪು ಜಯಂತಿಯ ಆಸುಪಾಸು ಸಂಪೂರ್ಣ ವಿರುದ್ಧ ಕ್ರಿಯೆ, ಪ್ರತಿಕ್ರಿಯೆಗಳನ್ನು ಈ ನಾಡು ಕಂಡಿತು. ಮೈಸೂರು ಆಳಿದ ಅರಸನ ಆರಾಧನೆ, ನಿಂದನೆ ಎರಡೂ ನಡೆದವು. ಒಂದು ವರ್ಗವು ಟಿಪ್ಪುವನ್ನು ಅನನ್ಯ ದೇಶಪ್ರೇಮಿ, ಸೆಕ್ಯುಲರ್ ರಾಜ, ಜಮೀನ್ದಾರಿ ಪದ್ಧತಿ ಕೊನೆಗೊಳಿಸಲೆತ್ನಿಸಿದ ಕ್ರಾಂತಿಕಾರಿ ಸುಲ್ತಾನ, ಶೃಂಗೇರಿ-ನಂಜನಗೂಡು- ಮೇಲುಕೋಟೆ ಮುಂತಾದ ದೇವಾಲಯಗಳಿಗೆ ದತ್ತಿಕಾಣಿಕೆ ನೀಡಿದ ಸಹಿಷ್ಣುವೆಂದು ಬಿಂಬಿಸಿದರೆ; ಮತ್ತೊಂದು ವರ್ಗವು ಅವನು ಸೋತ ಪ್ರದೇಶಗಳಲ್ಲಿ ಮಾಡಿದ ಲೂಟಿ ಮತ್ತು ನಾಶವನ್ನು ನೆನಪಿಸಿಕೊಂಡು ಕಾಫಿರರನ್ನು ಸೋಲಿಸಿ ಹಿಂಸಿಸಿ ಇಸ್ಲಾಂ ಸಾಮ್ರಾಜ್ಯ ಕಟ್ಟಹೊರಟ ಮತಾಂಧ ಎಂದು ಜರೆಯಿತು.



ಭಿನ್ನ ಅಭಿಪ್ರಾಯಗಳು ಪ್ರಜಾಪ್ರಭುತ್ವದಲ್ಲಿ ಇರುವಂಥವೇ ಎಂದಿಟ್ಟುಕೊಂಡು ವಿರುದ್ಧ ಪ್ರತಿಕ್ರಿಯೆಗಳನ್ನು ಅತ್ತ ಸರಿಸುವಂತಿಲ್ಲ. ಧಾರ್ಮಿಕ ಅಸಹನೆ ಉತ್ತುಂಗ ಮುಟ್ಟಿರುವ 2015ರಲ್ಲಿ ಕನ್ನಡಿಗ ಮುಸ್ಲಿಮರಿಗೆ ಟಿಪ್ಪು ಸುಲ್ತಾನ್ ಮಾದರಿ ನಾಯಕನ ಗುಣಗಳ ಹೊಂದಿದ್ದನೆ? ಮಹಾಹತುಶಾಹಿಕಾಲದ ರಾಜನಿಗೆ ಪ್ರಜಾಪ್ರಭುತ್ವ ಭಾರತಕ್ಕೆ ಮಾದರಿಯಾಗುವ ಸೆಕ್ಯುಲರ್ ಲಕ್ಷಣಗಳಿದ್ದವೆ? ಮುಸ್ಲಿಂ ಸಮುದಾಯದ ಬದುಕು ಸುಧಾರಿಸುವುದು ಆಳುವವರ ಇಂಥ ನಡೆಗಳಿಂದಲೇ? ಎಂದು ವಸ್ತುನಿಷ್ಠವಾಗಿ ನೋಡಬೇಕಾದ ಅವಶ್ಯಕತೆಯಿದೆ. ಏಕೆಂದರೆ ಕಾಲದ ನಡಿಗೆಯ ಯಾವುದೇ ಒಂದು ಬಿಂದುವಿನಲ್ಲಿ ಇಟ್ಟ ಹೆಜ್ಜೆ ಮತ್ತು ಆಯ್ಕೆ ತಪ್ಪಾದರೆ ಅದರ ಜವಾಬ್ದಾರಿಗಳನ್ನು ಆ ಕಾಲದ ಎಲ್ಲರೂ ಸಮವಾಗಿ ಹೊತ್ತುಕೊಳ್ಳಬೇಕಾಗುತ್ತದೆ.

ಟಿಪ್ಪು ಚರಿತ್ರೆಕಾಲದ ಒಂದು ನಾಣ್ಯ. ಈ ಮಾತು ಟಿಪ್ಪುವಿಗಷ್ಟೆ ಅಲ್ಲ, ಬಹುಪಾಲು ಚಾರಿತ್ರಿಕ ವ್ಯಕ್ತಿಗಳಿಗೆ, ಅದರಲ್ಲೂ ರಾಜರಿಗೆ ಅನ್ವಯಿಸುತ್ತದೆ. ಆ ನಾಣ್ಯಗಳಿಗೆ ಎರಡು ಭಿನ್ನ ಮುಖಗಳಿರುತ್ತವೆ. ಎರಡು ಮುಖಗಳನ್ನು ಆ ಕಾಲದ ಅಗತ್ಯವು ರೂಪುಗೊಳಿಸಿರುತ್ತದೆ. ಚರಿತ್ರೆ ಕಾಲದ ನೀತಿಕೋಶವೇ ಬೇರೆ. ನ್ಯಾಯ, ನೀತಿ ಎಂಬ ಪದಗಳ ಅರ್ಥವೇ ಬೇರೆ. ಅವನ್ನು ಇವತ್ತು ಎಳೆತರುವುದು, ಹೋಲಿಸುವುದು ಸಾಧುವಲ್ಲ. ಕೊನೆಗೂ ಚರಿತ್ರೆಯೆಂದರೆ ಏನೆಂದು ನಿರ್ಣಯವಾಗಬೇಕಾದ್ದು ಆಕರಗಳಿಂದ ಮಾತ್ರವಲ್ಲ, ನ್ಯಾಯಸೂಕ್ಷ್ಮದ ಮನಸುಗಳಲ್ಲೇ ಎಂದು ನೆನಪಿಸಿಕೊಳ್ಳುತ್ತ ಟಿಪ್ಪು ಸುಲ್ತಾನನ ಎರಡು ಭಿನ್ನ ವ್ಯಕ್ತಿತ್ವಗಳನ್ನು ಪೂರ್ವಗ್ರಹಗಳನ್ನಿಟ್ಟುಕೊಳ್ಳದ ಚರಿತ್ರೆಯ ಆಕರಗಳಿಂದ ಇಲ್ಲಿಡಲಾಗಿದೆ.

ನಾಣ್ಯ 1: ಯುದ್ಧ-ಆಡಳಿತ

ಟಿಪ್ಪು ಮೈಸೂರಿನ ಆಳರಸರಲ್ಲಿ ಒಬ್ಬ. ಕ್ರಿ. ಶ. 1750, ನವೆಂಬರ್ 20ರಂದು ಬೆಂಗಳೂರು ಬಳಿಯ ದೇವನಹಳ್ಳಿಯಲ್ಲಿ ಹುಟ್ಟಿದ. ಕೇವಲ 49 ವರ್ಷ ಬದುಕಿದ ಅವನ ಶೌರ್ಯ, ಬಲಿದಾನ, ಸ್ವಾಭಿಮಾನ ಕುರಿತು ಕತೆಗಳೇ ಇವೆ. ಯುದ್ಧದ ನಾನಾ ಕಲೆಗಳಲ್ಲಿ ನಿಷ್ಣಾತರಾದ ಕುಟುಂಬದಿಂದ ಬಂದವ ಟಿಪ್ಪು. ಅಸಮರ್ಥ ಹಾಗೂ ಅದಕ್ಷ ಮೈಸೂರರಸನನ್ನು ಸಿಂಹಾಸನದಿಂದ ಕೆಳಗಿಳಿಸಿ, ತಾನು ಪ್ರವಾದಿ ಮಹಮದರ ಕುರೇಶಿ ಪಂಗಡದವನೆಂದು ಸಾರಿ ರಾಜನಾದ ಹೈದರಾಲಿಯ ಮಗ. ಟಿಪ್ಪುವಿನ ಅಜ್ಜ ಆರ್ಕಾಟ್ ನವಾಬನ ಸೇನೆಯಲ್ಲಿ ರಾಕೆಟ್ ಪಡೆಯ ಮುಖ್ಯಸ್ಥನಾಗಿದ್ದ. ಕಡಪಾ ಕೋಟೆಯ ಕಾವಲಿನ ಮುಖ್ಯಸ್ಥನ ಮಗಳು ಟಿಪ್ಪುವಿನ ಅಮ್ಮ. ಇಂಥ ವಾತಾವರಣದಲ್ಲಿ ಬೆಳೆದ ಟಿಪ್ಪುವಿಗೆ ಆಡಳಿತ,-ಯುದ್ಧ ವ್ಯೂಹ, ತಂತ್ರಗಾರಿಕೆ ಎಲ್ಲವೂ ಬಹು ಸಹಜವಾಗಿ ನೀರು ಕುಡಿದಂತೆ ಸಿದ್ಧಿಸಿತ್ತು.

ಅನಕ್ಷರಸ್ಥನಾಗಿದ್ದ ಹೈದರಾಲಿ ಮಗ ಟಿಪ್ಪುವಿಗೆ ಸಣ್ಣಂದಿನಿಂದಲೇ ಸಕಲ ವಿದ್ಯೆಗಳನ್ನು ಕಲಿಸುವ ವ್ಯವಸ್ಥೆ ಮಾಡಿದ. ಉರ್ದು, ಪರ್ಷಿಯನ್, ಕನ್ನಡ, ಅರೇಬಿಕ್, ಕುರಾನ್, ಇಸ್ಲಾಮೀ ನ್ಯಾಯಶಾಸ್ತ್ರ ಕುದುರೆ ಸವಾರಿ, ತೋಪು ಚಲಾಯಿಸುವುದು ಮುಂತಾದವುಗಳನ್ನೆಲ್ಲ ಕಲಿಸಲಾಯಿತು. ಹಲವು ಪರಿಣತಿಗಳಲ್ಲಿ ಜ್ಞಾನ ಸಂಪಾದಿಸಿದ ಟಿಪ್ಪು ಹೊಸ ಮೂಲೂದಿ ಇಸ್ಲಾಮಿ ಪಂಚಾಂಗ ದಿನಗಣನೆಯನ್ನು ಚಾಲ್ತಿಗೆ ತಂದ.

ಮೈಸೂರು ತನ್ನ ತಂದೆಯ ಕೈವಶವಾಗುತ್ತಿದ್ದದ್ದನ್ನು ಟಿಪ್ಪು ಹದಿವಯಸ್ಸಿನಲ್ಲಿ ಗಮನಿಸುತ್ತಿದ್ದ. ರಾಜಕಾರಣದ ಒಳಹೊರಗುಗಳ ಅರಿಯುತ್ತ ತಾನೂ ರೂಪುಗೊಂಡ. ಹದಿವಯಸ್ಸಿನಲ್ಲಿಯೇ ಮೊದಲ ಮೈಸೂರು ಯುದ್ಧ ಆರ್ಕಾಟ್ ಮೇಲಿನ ದಾಳಿಯಲ್ಲಿ ಭಾಗವಹಿಸಿ ಹದಿನೇಳರ ಹೊತ್ತಿಗೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಂತಾಗಿದ್ದ. ಟಿಪ್ಪುವಿಗೆ ಯುದ್ಧವಿದ್ಯೆ ಹೇಳಿಕೊಟ್ಟವರು ಫ್ರೆಂಚ್ ಕಮ್ಯಾಂಡರುಗಳು. 1782ರಲ್ಲಿ ಎರಡನೆ ಮೈಸೂರು ಯುದ್ಧ ನಡೆಯುತ್ತಿರುವಾಗಲೇ ಕ್ಯಾನ್ಸರಿನಿಂದ ಹೈದರಾಲಿ ತೀರಿಕೊಂಡಾಗ ತಂದೆ ಅರ್ಧಕ್ಕೆ ಬಿಟ್ಟುಹೋದ ಯುದ್ಧ ಗೆದ್ದು ತನಗೆ ಅನುಕೂಲಕರವಾದ ಷರತ್ತು ವಿಧಿಸಿ ಬ್ರಿಟಿಷರೊಂದಿಗೆ ಒಪ್ಪಂದ ಮಾಡಿಕೊಂಡ. ಹೀಗೆ 32 ವರ್ಷದ ಟಿಪ್ಪು ವಿಶಾಲ ರಾಜ್ಯದ ಅಧಿಪತಿಯಾದ. ಬೆಂಗಳೂರಿನ ಲಾಲ್‌ಬಾಗನ್ನು ಪೂರ್ಣಗೊಳಿಸಿದ. ರಸ್ತೆ ಕೆರೆಕಟ್ಟೆ, ಅರಮನೆಗಳ ನಿರ್ಮಿಸಿದ. ಮೈಸೂರು ರೇಶಿಮೆ ಉದ್ದಿಮೆಯಾಗಿ ಬೆಳೆಯಲು ಅನುವಾಗುವಂತೆ ಹೊಸ ತೆರನ ಕಂದಾಯ ವ್ಯವಸ್ಥೆ ಜಾರಿಗೆ ತಂದ. ಫಾತುಲ್ ಮುಜಾಹಿದೀನ್ ಎಂಬ ಮಿಲಿಟರಿ ಕೈಪಿಡಿ ಬರೆದ. ಪಾನ ನಿಷೇಧ ಜಾರಿಗೊಳಿಸಿದ.

ಹೈದರಾಲಿ ರಾಕೆಟ್ಟುಗಳನ್ನು ಅಭಿವೃದ್ಧಿಪಡಿಸಿ ಅದರ ಒಂದು ಪಡೆಯನ್ನೇ ಇಟ್ಟಿದ್ದರೆ, ಟಿಪ್ಪು ಕಬ್ಬಿಣದ ಹೊರಕವಚ ಹೊಂದಿದ 'ಮೈಸೂರು ರಾಕೆಟ್ಟು'ಗಳನ್ನು ಅಭಿವೃದ್ಧಿಪಡಿಸಿದ. ಮುಂದೆ ಚೂಪಾದ ಬ್ಲೇಡು ಕಟ್ಟಿ, ಕಬ್ಬಿಣದ ಕೇಸುಗಳೊಳಗೆ ಮದ್ದಿನಪುಡಿ ತುಂಬಿದ್ದರಿಂದ ಅವುಗಳ ದೂರಗಾಮಿತ್ವ ಎರಡು ಕಿ.ಮೀ.ನಷ್ಟು ಹೆಚ್ಚಾಯಿತು. ಮೊದಲು ಈ ರಾಕೆಟ್ಟುಗಳನ್ನು ಎದುರುಗೊಂಡಾಗ ಬ್ರಿಟಿಷರ ತಂತ್ರಜ್ಞಾನ ಅದಕ್ಕಿಂತ ಹಿಂದಿತ್ತು. ಎಂದೇ ಮೊದಲ ಯುದ್ಧಗಳನ್ನು ಟಿಪ್ಪು ಗೆಲ್ಲಲು ಸಾಧ್ಯವಾಯಿತು. ರಾಜ್ಯದ ಗಡಿಗಳನ್ನು ದಕ್ಷಿಣ, ಪಶ್ಚಿಮದತ್ತ ವಿಸ್ತರಿಸಲು ಸುಲಭವಾಯಿತು.

ಆದರೆ..

ಒಂದು ಕಡೆ ರಾಜ್ಯದ ಗಡಿ ವಿಸ್ತಾರಗೊಳ್ಳತೊಡಗಿದ್ದರೆ ಮತ್ತೊಂದು ಕಡೆ ಸಂಕುಚಿತಗೊಳ್ಳತೊಡಗಿತ್ತು. 1786ರ ಹೊತ್ತಿಗೆ ಮರಾಠರಿಗೆ ಮತ್ತು ನಿಜಾಮನ ಸೇನೆಗೆ ಉತ್ತರ ಕರ್ನಾಟಕದ ಬಹುಭಾಗ ಬಿಟ್ಟುಕೊಡಬೇಕಾಯಿತು. ಮರಾಠ ಪೇಶ್ವೆ ಮಾಧವ ರಾಯನ ದಳಪತಿ ನಾನಾ ಫಡ್ನವೀಸನ ಸೇನೆ ಬದಾಮಿ, ಕಿತ್ತೂರು, ಗಜೇಂದ್ರಗಡದವರೆಗೆ ತುಂಗಭದ್ರಾನದಿ ತನಕದ ಪ್ರದೇಶವನ್ನು ಮೈಸೂರಿನಿಂದ ಮರುವಶಪಡಿಸಿಕೊಂಡಿತು. ಅದೋನಿಯು ಹೈದರಾಬಾದ್ ನಿಜಾಮನ ಪಾಲಾಯಿತು. ಮರಾಠರೊಡನೆ ಒಪ್ಪಂದವಾಗಿ ಟಿಪ್ಪುವು ಯುದ್ಧಖರ್ಚು 48 ಲಕ್ಷ ರೂಪಾಯಿ, ವಾರ್ಷಿಕ ಕಪ್ಪ 12 ಲಕ್ಷ ರೂಪಾಯಿ ಕೊಡಬೇಕಾಯಿತು. ಈ ಸೋಲಿನ ಸಿಟ್ಟಿನಿಂದ ಕುದಿಯುತ್ತಿದ್ದ ಟಿಪ್ಪು ಗಮನವನ್ನು ಮಲಬಾರಿನೆಡೆ ಹರಿಸಿದ. ಅತ್ತ ಮಲಬಾರಿಗೆ ದೊಡ್ಡ ಸೇನೆ ಒಯ್ದಾಗ ಇತ್ತ ಬ್ರಿಟಿಷರು ಮಿತ್ರಸೇನೆಯೊಡಗೂಡಿ ಮೂರನೇ ಮೈಸೂರು ಯುದ್ಧ ಕೆದರಿದರು. ಆ ಯುದ್ಧದಲ್ಲಿ ಸೋಲು ಖಚಿತವೆನಿಸತೊಡಗಿದಾಗ ಸೈನ್ಯಕ್ಕೆ ಅನ್ನನೀರು ಪೂರೈಕೆ ಸಿಗದಂತೆ ಮಾಡಿ ಒಪ್ಪಂದಕ್ಕೆ ಬರುವಂತೆ ಮಾಡಿದ. ಮಿತ್ರಸೇನೆಯೊಂದಿಗೆ ಒಪ್ಪಂದವೇನೋ ಆಯಿತು. ಆದರೆ ತನ್ನ ಅರ್ಧ ಪ್ರಾಂತ್ಯ ಬಿಟ್ಟುಕೊಟ್ಟು 3 ಕೋಟಿ 30 ಲಕ್ಷ ರೂಪಾಯಿ ಯುದ್ಧ ಖರ್ಚನ್ನು ಕೊಡಬೇಕಾಯಿತು. ಅಷ್ಟು ಹಣ ಸಂದಾಯವಾಗುವವರೆಗೆ ತನ್ನಿಬ್ಬರು ಮಕ್ಕಳನ್ನು ಲಾರ್ಡ್ ಕಾರ್ನ್‌ವಾಲೀಸನ ಬಳಿ ಮದರಾಸಿನಲ್ಲಿ ಒತ್ತೆಯಿರಿಸಿ ಎರಡು ಕಂತಿನಲ್ಲಿ ಪೂರ್ತಿ ಹಣ ಕೊಟ್ಟು ಮಕ್ಕಳನ್ನು ಬಿಡಿಸಿ ತರಬೇಕಾಯಿತು.

ಹೆತ್ತವಳ ಒಡಲ ಸಂಕಟವೇನಾಗಿತ್ತೋ, ಸ್ವಂತ ಮಕ್ಕಳ ಒತ್ತೆಯಿಟ್ಟದ್ದು ಅನನ್ಯ ದೇಶಪ್ರೇಮವೆಂದು ಕೊಂಡಾಡಲ್ಪಟ್ಟಿತು.

ಕೊನೆಯ ಮೈಸೂರು ಯುದ್ಧದಲ್ಲಿ ಬ್ರಿಟಿಷ್ ಪಡೆ ಕೋಟೆ ಒಡೆದು ಒಳ ಪ್ರವೇಶಿಸಿದಾಗ ಟಿಪ್ಪುವಿನ ಮಿಲಿಟರಿ ಸಲಹಾಕಾರನಾಗಿದ್ದ ಫ್ರೆಂಚ್ ಅಧಿಕಾರಿ ಸುರಕ್ಷಿತ ಜಾಗಕ್ಕೆ ಓಡಿಹೋಗುವಂತೆ ಅಥವಾ ಶರಣಾಗುವಂತೆ ಟಿಪ್ಪುವಿಗೆ ಹೇಳಿದ. ಆದರೆ 'ಒಂದು ದಿನ ಹುಲಿಯಂತೆ ಬದುಕುವುದು, ಸಾವಿರವರ್ಷ ಕುರಿಯಂತೆ ಬದುಕಿರುವುದಕ್ಕಿಂತ ಉತ್ತಮ'ವೆಂದು ಟಿಪ್ಪು ಹೋರಾಟವನ್ನೇ ಆಯ್ದುಕೊಂಡ.


ಹುಲಿಯಂತೆ ಬದುಕಬೇಕೆಂದು ತಮ್ಮ ರಾಜ ಬಯಸಿದ್ದಕ್ಕೆ ಮೈಸೂರಿನ 11,000 ಸೈನಿಕರು ಪ್ರಾಣ ತೆರಬೇಕಾಯಿತು. ಕಾವೇರಿ ಕೆಂಪಾಗಿ ಹರಿಯಿತು.

ನಾಣ್ಯ 2: ಸ್ವದೇಶಿ - ಪರದೇಶಿ

ಯಾವ ಎರಡನೆ ಮೈಸೂರು ಯುದ್ಧದ ಗೆಲುವು ಟಿಪ್ಪುವನ್ನು ರಾಜನನ್ನಾಗಿಸಿತೊ ಅದೇ ಯುದ್ಧವು ಅವನ ಅತಿಗಳ ಕುರಿತೂ ಹೇಳುತ್ತದೆ. ಬ್ರಿಟಿಷರನ್ನೇನೋ ಸೋಲಿಸಲಾಯಿತು, ಆದರೆ ತಂಜಾವೂರನ್ನು ಟಿಪ್ಪುವಿನ ಪಡೆಗಳು ಬುಡಮಟ್ಟ ನಾಶಮಾಡಿದವು. ತಂಜಾವೂರು ಚೇತರಿಸಿಕೊಳ್ಳಲು ಒಂದು ಶತಮಾನ ಹಿಡಿಯಿತು. ದನಕರು, ಬೆಳೆ ನಾಶವಷ್ಟೆ ಅಲ್ಲ, 12,000 ಮಕ್ಕಳನ್ನು ಟಿಪ್ಪು ಅಪಹರಿಸಿದ ಎಂಬ ದಾಖಲಾತಿಯೂ ಇದೆ.

ವಸಾಹತುಶಾಹಿ ಬ್ರಿಟಿಷರ ವಿರುದ್ಧ ಹೋರಾಡಿದ ಅಪ್ರತಿಮ ಹೋರಾಟಗಾರ ಟಿಪ್ಪು. ಆದರೆ ಅವ ಹೋರಾಡಿದ್ದು, ಖ್ಯಾತ ಮೈಸೂರು ರಾಕೆಟ್ಟುಗಳನ್ನು ಬಳಸಿದ್ದು ಕೇವಲ ಬ್ರಿಟಿಷರ ವಿರುದ್ಧ ಮಾತ್ರವಲ್ಲ; ಆಚೀಚಿನ ರಾಜರುಗಳಾದ ಮರಾಠರು, ತಂಜಾವೂರು-ಮಲಬಾರ್-ಶಿರಾ- ಬಿದನೂರು-ಕೊಡಗು-ತಿರುವಾಂಕೂರು ಆಳ್ವಿಕರು, ಆರ್ಕಾಟಿನ ನವಾಬ, ಹೈದರಾಬಾದಿನ ನಿಜಾಮ ಇವರ ವಿರುದ್ಧ. ಕೊನೆಯತನಕ ಟಿಪ್ಪುವಿನ ಕಡುವೈರಿಗಳು ಮರಾಠರು ಮತ್ತು ಹೈದರಾಬಾದಿನ ನಿಜಾಮ.

ಗತವೈಭವದ ಕನವರಿಕೆಯಲ್ಲಿ ಕೊನೆಯುಸಿರೆಳೆಯುತ್ತಿದ್ದ ಮುಘಲ್ ಸಾಮ್ರಾಜ್ಯದ ದೊರೆ ಶಾ ಅಲಂಗೆ ಟಿಪ್ಪು ತಾನೇತಾನಾಗಿ ಅಧೀನತೆಯನ್ನು ಪ್ರದರ್ಶಿಸುತ್ತಿದ್ದ. ಶಾ ಅಲಂನನ್ನು ಹಿಜ್ರಾ ಒಬ್ಬ ಕುರುಡನನ್ನಾಗಿಸಿ ಪದಚ್ಯುತಗೊಳಿಸಿದ ನಂತರ ಟಿಪ್ಪು ಮರಾಠರನ್ನು ಸೋಲಿಸಲು ಆಫ್ಘನಿಸ್ತಾನದ ದುರಾನಿ ರಾಜರನ್ನು ಸಂಪರ್ಕಿಸಿದ. ಬ್ರಿಟಿಷರ ವಿರುದ್ಧ ಆಕ್ರಮಣಕ್ಕೆ ತುರ್ತು ಸಹಾಯ ಮಾಡುವಂತೆ ಟರ್ಕಿಯ ಒಟ್ಟೊಮನ್ ರಾಜರ ಸಹಾಯ ಕೇಳಿದ. ಆದರೆ ಇವರಿಗೆಲ್ಲ ರಷ್ಯಾದ ವಿರುದ್ಧ ಹೋರಾಡಲು ಬ್ರಿಟಿಷರ ಸಹಾಯ ಬೇಕಿದ್ದರಿಂದ ಟಿಪ್ಪುವಿಗೆ ಸಹಾಯ ಮಾಡಲಾರದೆ



ಹೋದರು. ಕೊನೆಗೆ ಬ್ರಿಟಿಷರ ವಿರುದ್ಧ ಫ್ರೆಂಚ್ ... ನೆಪೋಲಿಯನ್ ಬೋನಪಾರ್ಟೆಯ ಸಹಾ... ಪ್ರಯತ್ನಿಸಲಾಯಿತು.

ಈ ಸಂಕೀರ್ಣ ಸಂಬಂಧಗಳಲ್ಲಿ ಯಾರು... ಯಾರು ಪರದೇಶಿ? ಅವೆಲ್ಲ ದೇಶಕಾ... ನಿರ್ಧರಿಸಬೇಕಾದ ಸಂಗತಿ.

ನಮ್ಮೂರು ಉತ್ತರಕನ್ನಡದ ಹೊನ್ನಾವರ... ವಸಾಹತುಶಾಹಿಗಳಿಗೆ, ಆದಿಲ್ ಶಾಹಿಗಳಿಗೆ, ... ಪಾಳೆಯಪಟ್ಟುಗಳಿಗೆ, ಮೈಸೂರರಸರಿಗೆ ಬಹಳ ... ಏಕೆಂದರೆ ಅದು 200-300 ಟನ್ ತೂಕದ ಹ... ನಿಲ್ಲಿಸಬಲ್ಲ ಪ್ರಾಕೃತಿಕ ಬಂದರಾಗಿತ್ತು. ... ಬಿದನೂರನ್ನು ತನ್ನ ಆಡಳಿತ ಕೇಂದ್ರವಾಗಿ ಮಾ... ಹೈದರಾಲಿ ಹೊನ್ನಾವರ ಮತ್ತು ಮಂಗಳೂರಿನಲ್ಲಿ ... ಇಟ್ಟ. 1769ರಲ್ಲಿ ಬ್ರಿಟಿಷ್ ಪಡೆ ಅವನ ವಿರು... ಬಂದಾಗ ಹೈದರಾಲಿಯ ಅಶ್ವದಳ ಅವನಿಗೇ ... ಹೊನ್ನಾವರ ಕೈತಪ್ಪಿಹೋಯಿತು. ಅದನ್ನು ಮತ್ತೆ ... ವಶಪಡಿಸಿಕೊಂಡ. ಆದರೆ 1784ರಲ್ಲಿ ... ಟೋರಿಯಾನೋ ಎಂಬ ಬ್ರಿಟಿಷ್ ಸೈನ್ಯಾಧಿಕಾರಿ... ತಿಂಗಳ ಕಾಲ ಹೊನ್ನಾವರ ಬಂದರವನ್ನು ತನ್ನ... ಇಟ್ಟುಕೊಂಡಾಗ ಅವನಿಂದ ಹೊನ್ನಾವರವನ್ನು ... ಶಹರವನ್ನು ಸಂಪೂರ್ಣ ನಾಶಮಾಡಿದ. ... ವ್ಯಾಪಾರೀ ಕೇಂದ್ರವಾಗಿ ಜನರಿಂದ ಗಿಜಿಗುಡುತ್ತಿದ್ದ... ಸುಟ್ಟು, ನಿರ್ಜನ ಸುಡುಗಾಡಿನಂತಾಯಿತು. ... ಅವನ ಮರಣಾನಂತರ ಐದು ಅಂಗಡಿಗಳು ಹೊ... ತೆರೆಯಲ್ಪಟ್ಟವು. 1800ರಲ್ಲಿ ಒಂದೇಒಂದು... ಮನೆಯೂ ಇಲ್ಲಿರಲಿಲ್ಲ. 1801ರಲ್ಲಿ ಬಂದಿ... ಬುಕಾನನ್ ಅಲ್ಲಿಲ್ಲಿ ಅಡಗಿಕೊಂಡಿದ್ದ ವ್ಯಾಪಾರಿಗ... ಒಬ್ಬೊಬ್ಬರಾಗಿ ಹಿಂದಿರುಗಿ ಬರುತ್ತಿದ್ದಾರೆಂದು ...

ತನ್ನ ರಾಜ್ಯದ ಗಡಿಯಾಚೆ ಇರುವ, ... ಆಡುವ, ಬೇರೆ ದಿರಿಸು ತೊಡುವ, ತನ್ನ ... ನಂಬದ ಎಲ್ಲರೂ ಶತ್ರು/ಅನ್ಯ ಎಂಬ ... ರಾಷ್ಟ್ರೀಯತೆಯಾಗಿದ್ದ ಕಾಲದಲ್ಲಿ ಯಾವುದು ... ಯಾವುದು ದೇಶದ್ರೋಹ? ಅದನ್ನು ಈ... ನಿರ್ಧರಿಸಬಹುದೆ?

ನಾಣ್ಯ 3: ಧರ್ಮಾಂಧ-ಧರ್ಮ...

ಟಿಪ್ಪು ಹಿಂದೂ ಬಹುಸಂಖ್ಯಾತರ ... ಆಳುತ್ತಿದ್ದ ಮುಸ್ಲಿಂ ರಾಜ. ಆಸ್ಥಾನದ ಮುಖ... ಹಿಂದೂಗಳನ್ನು, ಆದರಲ್ಲೂ ಬ್ರಾಹ್ಮ... ನೇಮಿಸಿಕೊಂಡಿದ್ದ. ಆತ 'ಬ್ರಾಹ್ಮಣರ ಕುರಿತು ... ದೊರೆ' ಎಂದು ಬಣ್ಣಿಸಲ್ಪಟ್ಟ. ಅದು ... ರಾಜನೀತಿಯಾಗಿತ್ತು. ದಿವಾನ್ ಪೂರ್ಣಯ್ಯನಿ...


ಾಂಟೆಯವರೆಗೆ ಬಹಳ ಜಾಗಗಳಲ್ಲಿ ಮುಸ್ಲಿಮೇತರರು ನದ ಸೇವೆಯಲ್ಲಿದ್ದರು. 156 ದೇವಾಲಯಗಳಿಗೆ ಮಿತ ವಾರ್ಷಿಕ ದತ್ತಿ ನೀಡುತ್ತಿದ್ದ. ಎಷ್ಟೋ ವಾಲಯಗಳಿಗೆ ಕಾಯಂ ಉತ್ಪನ್ನದ ಮಾರ್ಗವಾಗಿ ಭೂಮಿ ಬಳಿ ನೀಡಿದ. ನಂಜನಗೂಡು, ಮೇಲುಕೋಟೆ, ರಂಗಪಟ್ಟಣದ ದೇವಾಲಯಗಳೂ ಸೇರಿದಂತೆ ಹಲವು ಾಲಯಗಳಿಗೆ ಚಿನ್ನ ಬೆಳ್ಳಿ ಉಡುಗೊರೆ ನೀಡಿದ. 91ರಲ್ಲಿ ಮರಾಠರು ಶೃಂಗೇರಿ ಮಠ ಮತ್ತು ಾಲಯದ ಮೇಲೆ ದಾಳಿ ಮಾಡಿ, ಹಲವರನ್ನು ಕೊಂದು, ಟೆ ಮಾಡಿದಾಗ ಮಠದ ಸ್ವಾಮಿಗಳು ಸಹಾಯ ಕೋರಿ ುವಿನೊಡನೆ ಪತ್ರ ವ್ಯವಹಾರ ನಡೆಸಿದರು. ಟಿಪ್ಪು ನೀಡಿ ವಸ್ತುಗಳನ್ನು ದೇಣಿಗೆಯಾಗಿ ನೀಡಿದ. ರಂಗಪಟ್ಟಣದಲ್ಲಿ ಅವನ ಅರಮನೆಯ ಸನಿಹವೇ ರಂಗನಾಥ ಮಂದಿರದ ಪೂಜಾಧ್ವನಿಯೂ, ಮಸೀದಿಯ ಯೂ ಒಟ್ಟೊಟ್ಟು ಕೇಳಿಬರುತ್ತಿದ್ದವು.

ಈ ವಿವರಗಳು ತನ್ನ ರಾಜ್ಯದಲ್ಲಿ ಅವ ರ್ಮಸಹಿಷ್ಣುವಾಗಿದ್ದ ಎಂದು ತಿಳಿಸುತ್ತವೆ.

ಆದರೆ ಅವನೇ ಹೇಳಿಕೊಂಡಂತೆ ಆತ ಇಸ್ಲಾಮಿನಲ್ಲಿ ಶ ನಂಬಿಕೆಯಿಟ್ಟು ಅಲ್ಲಾಹುವಿನ ರಾಜ್ಯ ತರಬಯಸಿದ್ದ ನ. ರಾಜ್ಯದೆಲ್ಲೆಡೆ ಸಾಧ್ಯವಾದಷ್ಟು ಮಸೀದಿ ನಿರ್ಮಾಣ ಿದ. ತಾನು ಗೆದ್ದ ಪ್ರದೇಶಗಳ ಕಾಫಿರರನ್ನು ಕೊಂದ ಅವರನ್ನು 'ಮತಾಂತರದ ಗೌರವ'ಕ್ಕೊಳಪಡಿಸಿದ್ದರ ಗೆ ಹಲವು ಪತ್ರಗಳಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಘಲ್ ಸಾಮ್ರಾಜ್ಯ ಅವನತಿ ಕಾಣುವ ಹೊತ್ತಿಗೆ ್ವಾಯ ಸ್ಥಿತಿಗೆ ಬಂದ ಟಿಪ್ಪು ಒಂದು ವಿಶಾಲ ಮುಸ್ಲಿಂ ಮ್ರಾಜ್ಯ ಕಟ್ಟುವ ಕನಸು ಹೊಂದಿ ಬಾದಶಾಹ್ ಎಂದು ನ್ನೇ ತಾನು ಕರೆದುಕೊಂಡ. ಮಾರ್ಕ್ವಿಸ್ ಆಫ್ ವೆಲ್ಲೆಸ್ಲಿಗೆ ಉಡುಗೊರೆ ನೀಡಿದ ಕತ್ತಿಯ ಮೇಲೆ ಅಲ್ಲಾನ ್ಯ ಸ್ಥಾಪನೆಗೆ ತನ್ನ ಪ್ರಯತ್ನಗಳನ್ನು ಉತ್ಪ್ರೇಕ್ಷೆಯಿಂದ ಣಿಸಿದ್ದಾನೆ. ಶ್ರೀರಂಗಪಟ್ಟಣ ಅರಮನೆಯ ಆವರಣದ ದ ಬಂಡೆಯ ಮೇಲೆ 'ಕಾಫಿರರು ನಾಶವಾಗಲಿ, ಅವರ ಯುಸ್ಸು ಕಡಿಮೆಯಾಗಲಿ, ಕುರುಡಾಗಲಿ, ಅವಮಾನ ಂದು ಮುಖ ಕರಿ ಆಗಲಿ..' ಇತ್ಯಾದಿ ಕೆತ್ತಲಾಗಿದೆ.

1784ರಲ್ಲಿ ಮಂಗಳೂರು ಒಪ್ಪಂದವಾದದ್ದೇ ಅಲ್ಲಿದ್ದ ಥೊಲಿಕ್ ಕ್ರೈಸ್ತರನ್ನು ಶ್ರೀರಂಗಪಟ್ಟಣಕ್ಕೆ ಗಡೀಪಾರು ಡಿ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಂಡ. ಮಸ್ ಮನ್ರೋ (ಮಂಗಳೂರು ಕಲೆಕ್ಟರ್) ಪ್ರಕಾರ 000 ಕ್ರೈಸ್ತರು ಬಂಧಿತರಾಗಿ ಶ್ರೀರಂಗಪಟ್ಟಣಕ್ಕೆ ಒಲ್ಪಟ್ಟರು. 7000 ಜನ ಪಾರಾದರು. ಆರು ವಾರ ಡಿಗೆಯಲ್ಲಿ ಘಟ್ಟ ಹತ್ತಿ ಶ್ರೀರಂಗಪಟ್ಟಣಕ್ಕೆ ಹೋದ ಧಿತರು ಅವನ ಸಾವಿನವರೆಗೂ 15 ವರ್ಷ ಕಾಲ ಧಿತರಾಗಿಯೇ ಇದ್ದರು. ಬಂಧಿತರಲ್ಲಿ ಒಬ್ಬನಾಗಿದ್ದ ಷ್ ಅಧಿಕಾರಿ ಜೇಮ್ಸ್ ಸ್ಕರಿ ಪ್ರಕಾರ 30,000 ರನ್ನು ಇಸ್ಲಾಮಿಗೆ ಮತಾಂತರಿಸಲಾಯ್ತು. (ಗೆಜೆಟಿಯರ್ ಾರ 30,000 ಜನರಿಗೆ ಬಲವಂತವಾಗಿ ಸುನ್ನತಿ ನಡೆಸಿ ಸೂರಿಗೆ ಕಳಿಸಲಾಯಿತು.) ಹೊತ್ತುತಂದ ಹೆಂಗಸರು, ಹೆಣ್ಮಕ್ಕಳನ್ನು ಅವನ ಸೈನ್ಯದವರು 'ಇಟ್ಟು'ಕೊಂಡರು ಥವಾ ಮದುವೆ ಮಾಡಿಕೊಂಡರು. ಪ್ರತಿರೋಧ ೋರಿದವರ ಮೂಗು, ಕಿವಿ, ಮೇಲ್ತುಟಿ ಕತ್ತರಿಸಲಾಯಿತು. ಸರ್ ಮಿರಾಂಡಾ ಸೇರಿದಂತೆ 21 ಜನ ಪಾದ್ರಿಗಳನ್ನು ಸು ಬಂದರೆ ನೇಣಿಗೇರಿಸುವುದಾಗಿ ಹೇಳಿ, 2 ಲಕ್ಷ . ದಂಡ ವಿಧಿಸಿ ಗೋವಾಕ್ಕೆ ಗಡೀಪಾರು ಡಲಾಯಿತು. ಮಂಗಳೂರಿನ 27 ಚರ್ಚುಗಳನ್ನು ಶ ಮಾಡಲಾಯಿತು. ಸ್ಕರಿ ನಂತರ ನೆನಪಿಸಿಕೊಳ್ಳುವಂತೆ ಷ್ ಸೈನಿಕರ ಮೇಲೆ ಅವನ ಸೇಡು ವಿಶೇಷವಾಗಿರುತ್ತಿತ್ತು. ವಂತದ ಸುನ್ನತಿಗೊಳಪಡಿಸಲಾಗುತ್ತಿತ್ತು. ಅವರು ಗಸರಂತೆ ಚೋಲಿ ಧರಿಸಿ ಆಸ್ಥಾನದಲ್ಲಿ ನರ್ತನ ಬೇಕಿತ್ತು, ಅವನು ಬಿಡುಗಡೆಯಾದಾಗ ಕುರ್ಚಿ ಮೇಲೆ ರುವುದು, ನೈಫ್ ಪೋರ್ಕ್ ಬಳಸುವುದನ್ನೇ ುಬಿಟ್ಟಿದ್ದೆ ಎಂದು ಹೇಳಿಕೊಂಡಿದ್ದಾನೆ.

ಮಲಬಾರಿನ, ತಂಜಾವೂರಿನವರ, ಕೊಡಗಿನವರ ೃತಿಕ ನೆನಪುಗಳಲ್ಲಿ ಟಿಪ್ಪುವಿನ ಕೆಲವು ಉದಾತ್ತ ನೆಗಳ ಉಲ್ಲೇಖವಿದ್ದರೂ, ಅವನ ಕ್ರೌರ್ಯದ ಕತೆಗಳ



ಸಂಖ್ಯೆ ದೊಡ್ಡದಿದೆ. 1763ರಲ್ಲಿ ಹೈದರಾಲಿ ಮೊದಲ ಬಾರಿಗೆ ಮಲಬಾರನ್ನು ಆಕ್ರಮಿಸಿದಾಗ ಸಣ್ಣಪುಟ್ಟ ದೊರೆಗಳು ತಿರುವಾಂಕೂರಿಗೆ ಓಡಿಹೋದರು. ಕಲ್ಲಿಕೋಟೆಯ ಜಾಮೊರಿನ್ ದೊರೆ ತನ್ನ ಅರಮನೆಗೆ ಬೆಂಕಿ ಹಚ್ಚಿ ತಾನು ಆತ್ಮಹತ್ಯೆ ಮಾಡಿಕೊಂಡ. ನಾಯರ್ ಸಮುದಾಯವು ಟಿಪ್ಪುವಿನ ಯುದ್ಧ-ತಂತ್ರಗಳಲ್ಲಿ ಇನ್ನಿಲ್ಲದ ಹೊಡೆತ ತಿಂದಿತು. ಇತಿಹಾಸಕಾರರ ಪ್ರಕಾರ ಕೇರಳದ ಎಲ್ಲ ಸೈನಿಕರು ಹೆಚ್ಚುಕಮ್ಮಿ ನಾಯರ್ ಸಮುದಾಯದವರು. ಅವರ ಜನಸಂಖ್ಯೆ ಅಂದಿನ ಕೇರಳದ ಜನಸಂಖ್ಯೆಯ ಐದನೇ ಒಂದು ಭಾಗ. ಮಲಬಾರನ್ನು ಮೈಸೂರಿನ ಸೇನೆ ಸುತ್ತುವರೆದಾಗ ಆರು ರಾಜವಂಶಗಳು ಮತ್ತು ಬಹಳಷ್ಟು ನಾಯರ್ ಕುಟುಂಬಗಳು ತಿರುವಾಂಕೂರಿನ 'ಧರ್ಮರಾಜ'ನ ಆಶ್ರಯಕ್ಕೆ ಓಡಿಹೋದವು. ಧರ್ಮರಾಜನ ಪ್ರಬಲ ಕೋಟೆ ತಮ್ಮನ್ನು ಕಾಪಾಡೀತೆಂಬ ನಂಬಿಕೆ ಅವರದು. ಆದರೆ 1789ರ ಯುದ್ಧದಲ್ಲಿ ಆ ಕೋಟೆ ನುಚ್ಚುನೂರಾದಾಗ ಬಹಳಷ್ಟು ನಾಯರ್‌ಗಳು ಕಾಡಿಗೆ ಓಡಿಹೋದರು. ಕೆಲವರು ಸೈನಿಕರ ಕೈಗೆ ಸಿಕ್ಕು ಇಸ್ಲಾಮಿಗೆ ಮತಾಂತರಗೊಂಡರು. ಭೂಮಿ, ಶಸ್ತ್ರಾಸ್ತ್ರ ಹಕ್ಕು ಕಳೆದುಕೊಂಡ ಕಾಡುಪಾಲಾದ ನಾಯರ್‌ಗಳು ಸುಮ್ಮನಿರಲಿಲ್ಲ. ಪದೇಪದೇ ಒಗ್ಗೂಡಿ ದಾಳಿ ನಡೆಸುತ್ತಿದ್ದರು. ಇದನ್ನು ಕೆ. ಎಂ. ಫಣಿಕ್ಕರ್ ಸ್ವಾತಂತ್ರ್ಯ ಹೋರಾಟ ಎಂದು ಕರೆಯುತ್ತಾರೆ. ಆಗ ಮಲಬಾರಿನಲ್ಲಿದ್ದ ಬಹುವಿವಾಹ ಮತ್ತು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಟಿಪ್ಪು ನಿರ್ಬಂಧಿಸಿದ. ಒಂದಕ್ಕಿಂತ ಹೆಚ್ಚು ಮದುವೆಯಾದರೆ ಹೆಂಗಸರನ್ನು ಬಲವಂತವಾಗಿ ಇಸ್ಲಾಮಿಗೆ ಮತಾಂತರಗೊಳಿಸಲಾಗುವುದು ಎಂಬ ಬಹಿರಂಗ ಪ್ರಕಟಣೆ ಕೊಟ್ಟ. 25 ವರ್ಷ ಇದು ಹಾಗೇ ಮುಂದುವರೆಯಿತು. ಬೇಕಲಕೋಟೆಯ ಗವರ್ನರ್ ಬುದ್ರೂಜ್ ಖಾನನಿಗೆ ಬರೆದ ಪತ್ರದಲ್ಲಿ ಟಿಪ್ಪು, 4 ಲಕ್ಷ ಹಿಂದೂಗಳನ್ನು ಬಲವಂತವಾಗಿ ಇಸ್ಲಾಮಿಗೆ ಮತಾಂತರಿಸಲಾಗಿದ್ದು ತಿರುವಾಂಕೂರಿನ ರಾಮನ್ ನಾಯರನನ್ನೂ, ಅವನ ಪ್ರಜೆಗಳನ್ನೂ ಮತಾಂತರಗೊಳಿಸುವ ಕನಸೇ ರೋಮಾಂಚಕಾರಿ ಎಂದು ಹೇಳಿಕೊಂಡಿದ್ದಾನೆ.

ಆದರೆ ಟಿಪ್ಪುವಷ್ಟೇ ಅಲ್ಲ, ಆ ಕಾಲದ ಎಲ್ಲ ರಾಜರೂ ತಂತಮ್ಮ ಧರ್ಮ ರಕ್ಷಿಸುವ. ಧರ್ಮ ಕಾರ್ಯಗಳ ಉತ್ಪ್ರೇಕ್ಷಿಸಿ ಹೇಳುವ ಪರಿಪಾಠ ಇಟ್ಟುಕೊಂಡಿದ್ದರು. ಟಿಪ್ಪುವಿನಿಂದ ತಮ್ಮನ್ನು ಕಾಪಾಡುವನೆಂದು ಜನ ನಂಬಿದ 'ಧರ್ಮರಾಜ' - ಆಧುನಿಕ ತಿರುವಾಂಕೂರು ಜನಕ ಮಾರ್ತಾಂಡ ವರ್ಮನಾದರೂ ಎಂಥವನಾಗಿದ್ದ? ಆತ ಡಚ್ ವಸಾಹತುಶಾಹಿಯ ಅವನತಿಗೆ ನಿರ್ಣಾಯಕ ಕೊನೆ ಹಾಡಿದ ಭಾರತದ ರಾಜನೇನೋ ಹೌದು. ಆದರೆ ಅದಕ್ಕೂ ಮುನ್ನ ಪಟ್ಟವೇರಲು ಸೋದರ ಸಂಬಂಧಿಗಳ ಕಗ್ಗೊಲೆ ನಡೆಸಿ, ಅವರ ಹೆಂಡಿರನ್ನು ಮೀನುಗಾರರಿಗೆ 'ಇಟ್ಟುಕೊಳ್ಳಲು' ಕೊಟ್ಟು; ಅವರ ಅರಮನೆಗಳ ನಾಶಮಾಡಿ, ಅಲ್ಲಿ ಗುಂಡಿ ತೋಡಿಸಿ ಕೆರೆಕಟ್ಟೆ ಕಟ್ಟಿಸಿದ್ದ!

ಮಲಬಾರಿನ ಜನ ಮಾರ್ತಾಂಡವರ್ಮನ ಬೆಂಕಿಯಿಂದ ಮೈಸೂರಿನ ಟಿಪ್ಪು ಬಾಣಲೆಗೆ ಬಿದ್ದರು. ಇವರಲ್ಲಿ ಯಾರ ನಡೆ ಜನಪರ, ಯಾರ ನಡೆ ಜನವಿರೋಧಿ ಎಂದು ಈ ಕಾಲದಲ್ಲಿ ನಿಂತ ನಾವು ಹೇಳುವುದು?

ಕೊಡಗನ್ನು ವಶಪಡಿಸಿಕೊಳ್ಳಲು ಹೈದರಾಲಿ ಮತ್ತು ಟಿಪ್ಪು ಪದೇಪದೇ ಆಕ್ರಮಣ ನಡೆಸಿದರು. ಅದಕ್ಕೆ ಮುಖ್ಯ ಕಾರಣ ಕೊಡಗು ವಶವಾದರೆ ಮಂಗಳೂರು ಬಂದರಿನ ಒಡೆತನ ಸಿಗುವುದೆನ್ನುವುದು. ಆದರೆ ಸ್ವಾಭಿಮಾನಿ ಮತ್ತು ಸ್ವಾತಂತ್ರ್ಯಪ್ರೇಮಿ ಕೊಡವರು ಎಂದೂ ಮಣಿಯಲಿಲ್ಲ. ತಮ್ಮ ಗುಡ್ಡಬೆಟ್ಟಗಳ ನಾಡಿನಲ್ಲಿ ಗೆರಿಲ್ಲಾ ಯುದ್ಧತಂತ್ರಗಳ ಮೂಲಕ ಅವನ ಸೇನೆಯನ್ನು ಸದಾ ಮಣಿಸಿದರು. ಹೀಗಿರುತ್ತ ಸ್ನೇಹಹಸ್ತ ಚಾಚಿ ಟಿಪ್ಪು ಮಡಿಕೇರಿಗೆ ಹೋದ. ಈ ಸಮ್ಮಿಲನಕ್ಕೆ ಭಾರೀ ಸಂಖ್ಯೆಯ ಕೊಡವರು ರಾಜಧಾನಿಯಲ್ಲಿ ಸೇರಿದರು. ಆಗ ಇದ್ದಕ್ಕಿದ್ದಂತೆ ಅವರ ಮೇಲೆ ಕರ್ನೂಲಿನ ನವಾಬ ಸೇನೆಯೊಂದಿಗೆ ಎರಗಿದ. ಅವ ಟಿಪ್ಪುವಿನ ಗೆಳೆಯ, ಅದು ಟಿಪ್ಪುವಿನ ತಂತ್ರವೇ ಆಗಿತ್ತು. 500 ಕೊಡವರು ಅಲ್ಲೆ ಸತ್ತರು. 40,000 ಜನ ಕಾಡಿಗೆ ಓಡಿದರು. ರಾಜನೊಡನೆ ಸಾವಿರಾರು ಜನರನ್ನು ಬಂಧಿಸಿ ಶ್ರೀರಂಗಪಟ್ಟಣಕ್ಕೊಯ್ಯಲಾಯಿತು. ಹಿಂಸೆ, ಸಾವು, ಬಲವಂತದ ಮತಾಂತರ.. ಈ ಸಂಖ್ಯೆ ಅವನ ಆಸ್ಥಾನ ಇತಿಹಾಸಕಾರರದೂ ಸೇರಿದಂತೆ 70000-85000 ನಡುವೆ ತೂಗಾಡುತ್ತದೆ. ಈ ಸಂಖ್ಯೆಗಳಲ್ಲಿ ಯಾವುದು ನಿಜ? ಯಾವುದು ಉತ್ಪ್ರೇಕ್ಷೆ? ಈ ದಾಖಲೆಗಳು ನಂಬಲರ್ಹವೆ?

ಒಟ್ಟಾರೆ ಚರಿತ್ರೆಯೊಂದು ಕಣಜದ ಗೂಡು. ಕೈಹಾಕಿದರೆ ಅವು ಕುಟುಕಿಯಾವೇ ಹೊರತು ಒಂದು ಹನಿ ಮಧುವೂ ದೊರೆಯಲಾರದು.

ರಾಜರ ಕಿಂಗ್‌ಸೈಜ್ ಅಹಮು: ಬಲಿಪಶು ಯಾರು?

ಇದು ನಾಣ್ಯದ ಎರಡು ಮುಖಗಳ ಅವಲೋಕನ. ಬಹುಶಃ ಚರಿತ್ರೆಯ ಯಾವ ಪುಟ ತೆರೆದರೂ ಅದಕ್ಕೆ ಎರಡೆರಡು ಅರ್ಥ, ಸಾಧ್ಯತೆಗಳು ಇದ್ದೇ ಇವೆ. ಮಧ್ಯಯುಗದಲ್ಲಿ ಈ ನೆಲವನ್ನಾಳಿದ ಛಪ್ಪನ್ನಾರು ನೃಪತಿಗಳಲ್ಲಿ ಯಾವುದೇ ರಾಜನ ಚರಿತ್ರೆ ತೆಗೆಯಿರಿ, ಅವರು ತಂತಮ್ಮ ಮನೆತನದವರನ್ನು/ರಾಜ್ಯದವರನ್ನು ಕೊಲ್ಲಿಸಿ ಪಟ್ಟಕ್ಕೆ ಬಂದಿದ್ದಾರೆ. ಹೆಂಗಸರ ಮೇಲೆ, ಅದರಲ್ಲೂ ಶತ್ರು ರಾಜ್ಯದ ಹೆಂಗಸರ ಮೇಲೆ ಇನ್ನಿಲ್ಲದಂತೆ ದೌರ್ಜನ್ಯವೆಸಗಿದ್ದಾರೆ. ವಿರೋಧಿ ರಾಜನ ಧರ್ಮ ಮತ್ತು ರಾಜಸ್ವದ ಕುರುಹುಗಳನ್ನು ನಿರ್ದಯವಾಗಿ ನಾಶ ಮಾಡಿದ್ದಾರೆ. ಎಲ್ಲೋ ಅಪರೂಪಕ್ಕೊಬ್ಬ ಛತ್ರಪತಿ ಶಾಹೂ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂಥವರನ್ನು ಬಿಟ್ಟರೆ ಎಲ್ಲ ರಾಷ್ಟ್ರೀಯತೆಗಳು ತಮ್ಮ 'ಕುಲತಿಲಕ'ರೆಂದು ಆರಾಧಿಸುವ ರಾಜರುಗಳು ಲೆಕ್ಕವಿಲ್ಲದಷ್ಟು ಹೆಂಗಸರು ವಿಧವೆಯರಾಗಲು; ಸತಿ ಹೋಗಲು ಕಾರಣ ರಾಗಿದ್ದಾರೆ. ರಾಜರ ದೇಶಪ್ರೇಮವೆಂಬ ವೈಯಕ್ತಿಕ ಪ್ರತಿಷ್ಠೆ ಕಾಯಲು ಯುದ್ಧ ಮಾಡಿ ಇನ್ನೆಷ್ಟೋ ಜನ ಅಂಗವಿಕಲರಾಗಿ, ಮತ್ತಿನ್ನೆಷ್ಟೋ ಬಡ, ರೈತಾಪಿ ಜನರು ಯುದ್ಧದ ಖರ್ಚು ತೆರಲು ಅರೆಹೊಟ್ಟೆಯಲ್ಲಿ ಸತ್ತಿದ್ದಾರೆ. ರಾಜರು ಕೊಟ್ಟ ಕೋಟಿಗಟ್ಟಲೆ ರೂಪಾಯಿ ದಂಡ, ಯುದ್ಧಖರ್ಚು ಎಲ್ಲಿಂದ ಬಂತು? ಅವೆಲ್ಲ ತನ್ನ ರಾಜ್ಯದ ಅಥವಾ ಗೆದ್ದ ರಾಜ್ಯದ ಬಡರೈತರನ್ನು, ಜನಸಾಮಾನ್ಯರನ್ನು ಸುಲಿದೇ ಬಂತು.

ಹೀಗೆ ರಾಜರುಗಳ ಕಿಂಗ್ ಸೈಜ್ ಅಹಮನ್ನು ಪೋಷಿಸಲು ಜನಸಾಮಾನ್ಯ ತೆತ್ತ ಬೆಲೆ ಗಮನಿಸಿದರೆ; ರಾಜತ್ವ, ಶೌರ್ಯ ಮತ್ತು ರಾಷ್ಟ್ರೀಯತೆಯ ಆಚೆಗೆ ಗಮನ ಹರಿಸಿದರೆ ಕೆಡುಕಿಲ್ಲದೆ ಯಾವ ರಾಜನ ಇತಿಹಾಸವೂ ಬಿಚ್ಚಿಕೊಳ್ಳಲು ಸಾಧ್ಯವಿಲ್ಲ. ಬಹುಶಃ ರಾಜ್ಯ, ಪಟ್ಟ, ಸಿಂಹಾಸನ ಗಳಿಸಿ ಉಳಿಸಿಕೊಳ್ಳಲು ಆ ಕಾಲದ ರಾಜರಿಗೆ ಅದು ಅವಶ್ಯವಾಗಿದ್ದಿರಲೂಬಹುದು. ಏಕೆಂದರೆ ಆಗಿನ್ನೂ ಮಾರ್ಕ್ಸ್, ಲಿಂಕನ್, ಗಾಂಧಿ, ಅಂಬೇಡ್ಕರ್, ಲೋಹಿಯಾ ಹುಟ್ಟಿರಲಿಲ್ಲ. ಆಗಿನ್ನೂ ಪ್ರಜಾಪ್ರಭುತ್ವದ ಕನಸು ಯಾರಿಗೂ ಬಿದ್ದಿರಲಿಲ್ಲ. ಅದರಲ್ಲೂ ಬುದ್ಧನ ಮರೆತ ಭಾರತವು ಆಂತರಿಕ ಯುದ್ಧಗಳಲ್ಲಿ ಹರಿಸಿದ ರಕ್ತಹೊಳೆ ಅರಬಿ ಸಾಗರವನ್ನೂ, ಬಂಗಾಳ ಕೊಲ್ಲಿಯನ್ನೂ, ಹಿಂದೂ ಸಾಗರವನ್ನೂ ಕೆಂಪಾಗಿಸಿತ್ತು.

ಇರಲಿ, ಅವರೆಲ್ಲ ಹಾಗಿದ್ದರು, ಆಗಿಹೋಯಿತು.

ಆದರೆ ಕರ್ನಾಟಕದ ಹಿಂದೂ/ಕ್ರೈಸ್ತ/ಮುಸ್ಲಿಂ ಧಾರ್ಮಿಕ ಸಮುದಾಯಗಳ ನೆನಪುಗಳಲ್ಲಿ ತದ್ವಿರುದ್ಧ ಚಿತ್ರಣ ಹೊಂದಿದ ಎಂದೋ ಆಳಿದ ರಾಜ ಟಿಪ್ಪುವನ್ನು ಇವತ್ತು ಮುಸ್ಲಿಮರಿಗೆ ಐಡೆಂಟಿಟಿ ಕೊಡುವ ನಾಯಕನಂತೆ ಬಿಂಬಿಸುವುದು ಎಷ್ಟು ಸರಿ?

ಚರಿತ್ರೆಯಲ್ಲಿರಬೇಕಾದವರನ್ನು ಅಲ್ಲಿ ಹಾಗೇ ಬಿಡದೆ ಅವರನ್ನು ಎತ್ತಿ ತಂದು ಧರ್ಮಾಂಧನೋ, ಧರ್ಮ ಸಹಿಷ್ಣುವೋ; ದೇಶಭಕ್ತನೋ ದೇಶದ್ರೋಹಿಯೋ ಎಂದು ಚರ್ಚಿಸುವುದು; ಚರ್ಚೆ ಹುಟ್ಟುಹಾಕುವುದು ಆಳಿದ ರಾಜನಿಗೂ ಶೋಭೆಯಲ್ಲ, ಪ್ರಜಾಪ್ರಭುತ್ವದ ಸರ್ಕಾರಕ್ಕೆ ಖಂಡಿತಾ ಶೋಭೆಯಲ್ಲ. ಟಿಪ್ಪುವಿಗೆ ಹಜರತ್ ಎಂದು ಸಂಬೋಧಿಸಿ ಜಯಂತಿ ಆಚರಿಸುವ ಸರ್ಕಾರದ ನಡೆ ಇತಿಹಾಸವನ್ನು ಕೋಮುವಾದೀಕರಣಗೊಳಿಸಲು ಸಹಾಯಮಾಡುವುದಷ್ಟೇ ಅಲ್ಲ, ವಸ್ತುನಿಷ್ಠವಾಗಿ ಇತಿಹಾಸವನ್ನು ತಿಳಿಯದಂತೆಯೂ ಮಾಡುತ್ತದೆ.

ಹಿಂದೂಪರ ಸಂಘಟನೆ, ಪಕ್ಷಗಳಿಗೆ ಮುಸಲ್ಮಾನರು ಎಂದರೆ ಅಬ್ದುಲ್ ಕಲಾಮರಂಥ ರುದ್ರವೀಣೆ ಬಾರಿಸುವ, ಸಂಸ್ಕೃತ ಕಲಿತು ವೇದ ಓದುವ, ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಗೋವುಗಳು ಬೇಕು. ಅದೇ ಸೆಕ್ಯುಲರ್ ಕಾಂಗ್ರೆಸ್ಸಿಗೆ ಹಿಂದೂಪರ ಮನಸುಗಳು ಖಂಡತುಂಡ ವಿರೋಧಿಸುವ ಟಿಪ್ಪುವಿನಂಥ ರಾಜನೇ ಏಕೆ ಬೇಕು? ಉಳಿದೆಲ್ಲ ಜಾತಿ, ಸಮುದಾಯಗಳಿಗೆ ವಾಲ್ಮೀಕಿ, ಕನಕ, ನಾರಾಯಣಗುರು, ಬಸವಣ್ಣನಂತಹ ಸಾಂಸ್ಕೃತಿಕ ಅಥವಾ ಸಮಾಜ ಸುಧಾರಣೆಗೆ ಶ್ರಮಿಸಿದ ಸುಧಾರಣಾವಾದಿ ನಾಯಕರಿದ್ದರೆ ಮುಸ್ಲಿಮರಿಗೆ ಮಾತ್ರ ಆಳಿದ ರಾಜನೊಬ್ಬನನ್ನು ಸಮುದಾಯದ ನಾಯಕನೆಂಬಂತೆ ಬಿಂಬಿಸುವುದು ಏಕೆ? ಪಿಯಾಸುನ್ನಿ, ಹಿಂದೂಮುಸ್ಲಿಂ ಭಾವೈಕ್ಯಕ್ಕೆ ಶ್ರಮಿಸಿದ ಬಿಜಾಪುರದ ದೊರೆ; ಗುಲಬರ್ಗಾದ ಸೂಫಿ ಬಂದೇ ನವಾಜರ ಶಿಷ್ಯ; ಕವಿ, ಕಲಾವಿದ ಇಬ್ರಾಹಿಂ ಆದಿಲ್ ಶಾಹ ಇವತ್ತು ಯಾರಿಗೂ ನೆನಪಾಗುತ್ತಿಲ್ಲ ಏಕೆ? ಶಿಶುನಾಳ ಶರೀಫರಾಗಲೀ, ಮುಸ್ಲಿಮರಲ್ಲಿ ಆಧುನಿಕ ಶಿಕ್ಷಣಕ್ಕೆ ಶ್ರಮಿಸಿದ ಸರ್ ಸಯ್ಯದ್ ಅಹ್ಮದ್ ಖಾನ್ ಅವರಾಗಲೀ, ವರ್ತಮಾನಕ್ಕೆ ತಕ್ಕಂತೆ ಇಸ್ಲಾಮನ್ನು ಪ್ರಸ್ತುತಗೊಳಿಸಿದ ಅಸ್ಘರ್ ಅಲಿ ಇಂಜಿನಿಯರರಾಗಲೀ ಅಥವಾ ಈ ನಾಡಿನ ಉದ್ದಗಲ ಸೌಹಾರ್ದ ಬಾಳ್ವೆಗೆ ಶ್ರಮಿಸಿದ; ಇವತ್ತಿಗೂ ಅಳಿದುಳಿದ ಸೌಹಾರ್ದದ ನಿಜಕುರುಹುಗಳಾದ ದರ್ಗಾದ ಸಂತರಾಗಲೀ ಯಾರಿಗೂ ಬೇಕಾಗಿಲ್ಲ ಏಕೆ?

ಇನ್ನಾದರೂ ರಕ್ತ ಪಿಪಾಸುತನವೇ ಸಿಂಹಾಸನದ ಆಧಾರವಾಗಿದ್ದ ರಾಜ-ಗೌಡ-ನಾಯಕ-ಸುಲ್ತಾನ-ದೊರೆಗಳನ್ನು ನಮ್ಮ ವಿಮಾನ ನಿಲ್ದಾಣ, ಪಾರ್ಕು, ರೈಲ್ವೇಸ್ಟೇಷನ್ನು, ರಸ್ತೆಗಳಿಗೆ ಹೆಸರಾಗಿ ಇಡುವ, ರಾಜಾರಾಧನೆ ನಡೆಸುವ ಪರಿಪಾಠ ನಿಲ್ಲಿಸಿ ಅವರವರ ಗೋರಿಗಳಲ್ಲಿ ಅವರು ಆರಾಮಾಗಿ ಮಲಗಲು ಬಿಡಬೇಕು. ಈ ನೆಲದ ಸಾಂಸ್ಕೃತಿಕ ಏಳಿಗೆಗಳ ಕಾಪಿಟ್ಟ, ಸೌಹಾರ್ದ ಕಾಪಾಡಿದ ಹೊಸಚಹರೆಗಳನ್ನು ಮಾದರಿಯಾಗಿ ಇಟ್ಟುಕೊಳ್ಳಬೇಕು.

ಇವತ್ತು ಮುಸ್ಲಿಂ ಧರ್ಮ ಮತ್ತು ಸಮುದಾಯ ಹಿಂದೆಂದಿಗಿಂತ ಒಳಸಂಕಷ್ಟವನ್ನೆದುರಿಸುತ್ತಿದೆ. ವಿಶ್ವದ ಅತಿಹೆಚ್ಚು ಸಿರಿವಂತರು ಹಾಗೂ ಅತಿ ಹೆಚ್ಚು ಬಡವರು ಇಸ್ಲಾಮಿನ ಅನುಯಾಯಿಗಳಾಗಿದ್ದಾರೆ. ಒಂದೆಡೆ ಬಂಡವಾಳದಿಂದ ಹರಿದುಬರುವ ದುಡ್ಡು ಮೈಗೂಡಿಸುವ ಆಧುನಿಕತೆ; ಮತ್ತೊಂದೆಡೆ ಯಾವುದೂ ಬದಲಾಗಬಾರದೆನ್ನುವ ಗಾಢ ನಂಬಿಕೆಯ ಧರ್ಮ - ಈ ಎರಡರ ಹಗ್ಗಜಗ್ಗಾಟದಲ್ಲಿ ಕೊನೆಗು ಬಲಿಯಾಗುತ್ತಿರುವುದು ಯಾವುದು ಹಾಗೂ ಯಾರು ಎನ್ನುವುದರ ಬಗೆಗೆ ಅಂತಾರಾಷ್ಟ್ರೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮುಸ್ಲಿಂ ಸಮಾಜ ಚಿಂತಿಸಬೇಕಿದೆ. ಅದರಲ್ಲೂ ಬಡ, ಕೆಳವರ್ಗದವರೇ ಹೆಚ್ಚಿರುವ ಭಾರತದ ಮುಸ್ಲಿಮರು ಈ ದೇಶದಲ್ಲಿ ಧರ್ಮವನ್ನು ಎಷ್ಟು, ಹೇಗೆ ಇಟ್ಟುಕೊಳ್ಳಬೇಕೆಂದು ಯೋಚಿಸಬೇಕಿದೆ.

ಹೀಗಿರುತ್ತ ಕರ್ನಾಟಕದ ಮುಸ್ಲಿಮರಿಗೆ ಟಿಪ್ಪು ಜಯಂತಿ ಆಚರಿಸುವುದು ನೆಮ್ಮದಿಯ ಭಾವ, ಸುರಕ್ಷಿತ ಭಾವ ಮೂಡಿಸುವುದೆಂಬ ಭ್ರಮೆ ಸರ್ಕಾರ, ಸಮಾಜಕ್ಕೆ ಇದ್ದರೆ ಅದು ಆತ್ಮಘಾತುಕ ಭೋಳೇತನವಲ್ಲದೆ ಮತ್ತೇನಲ್ಲ. ಇನ್ನಾದರೂ ಪ್ರಜಾಪ್ರಭುತ್ವ ದೇಶದ ಸೆಕ್ಯುಲರ್ ಸರ್ಕಾರಗಳು ಇಸ್ಲಾಂ ಸೇರಿದಂತೆ ಎಲ್ಲ ಧರ್ಮಗಳು ಮತ್ತು ಅದರ ಅನುಯಾಯಿಗಳಿಗೆ ಧರ್ಮವನ್ನು ಚಲನಶೀಲಗೊಳಿಸುವ ಅವಕಾಶ ಮಾಡಿಕೊಡಬೇಕು. ಒಳವಿಮರ್ಶೆ ಇಲ್ಲದೇ ಇರುವ ಯಾವುದೇ ಸಾಂಸ್ಥಿಕ ವ್ಯವಸ್ಥೆಯೂ ಜಡ್ಡುಗಟ್ಟಿ ಹೋಗುತ್ತದೆ. ಅದೇ ಹಾದಿಯಲ್ಲಿ ಧರ್ಮಗಳು ನಡೆಯದಂತೆ ತಡೆಯಲು ದಿಟ್ಟ ದನಿಗಳು ಕೇಳಲು ಅವಕಾಶ ಮಾಡಿಕೊಡಬೇಕು. ಅದಕ್ಕೆ ಪೂರಕವಾಗಿ ಶಿಕ್ಷಣ, ಉದ್ಯೋಗಾವಕಾಶ, ಸಮಾಜದ ಆಗುಹೋಗುಗಳಲ್ಲಿ ಒಳಗೊಳ್ಳುವಿಕೆ ಮುಂತಾದ ನಡೆಗಳು ಸಮುದಾಯವನ್ನು ಸುರಕ್ಷಿತ, ಸುಸ್ಥಿರ ಬದುಕಿಗೆ ಕೊಂಡೊಯ್ಯಬಲ್ಲವೇ ಹೊರತು ಜಾತಿ/ಧರ್ಮಕ್ಕೊಂದು ಜಯಂತಿ ಆಚರಿಸುವಂಥ ಸಾಂಕೇತಿಕ ಕ್ರಿಯೆಗಳಿಂದಲ್ಲ ಎಂದು ಆಳುವವರಿಗೆ ತಿಳಿಸಬೇಕಿದೆ.

■ ಡಾ. ಎಚ್.ಎಸ್. ಅನುಪಮಾ



ಮೋದಿ ಸರ್ಕಾರದಡಿ ಹೆಚ್ಚುತ್ತಿರುವ ದಲಿತ ದೌರ್ಜನ್ಯ

ಅಸಹಿಷ್ಣುತೆಯ ಸಾಕಾರಮೂರ್ತಿಯಂತಿರುವ ನರೇಂದ್ರ ಮೋದಿ ದೇಶದ ಪ್ರಧಾನಿಯಾದಂದಿನಿಂದ ಸಂಘ ಪರಿವಾರಿಗರ ಅಸಹಿಷ್ಣುತೆಯ ಕೃತ್ಯಗಳು ಮೇರೆ ಮೀರಿವೆ. ಅವರ ಮೌಖಿಕ, ದೈಹಿಕ, ಸಾಂಸ್ಕೃತಿಕ ದಾಳಿಗಳು ಹಿಂದೆಂದೂ ಇರದ ತೀವ್ರತೆಯನ್ನು ಪಡೆದುಕೊಂಡಿವೆ. ಸಾಂಸ್ಕೃತಿಕ ಸಂಘಸಂಸ್ಥೆಗಳಲ್ಲಿ ಅರ್ಹ ವಿದ್ವಾಂಸರ ಬದಲು ಆರೆಸ್ಸೆಸ್ ನಿಷ್ಠರ ತೂರಿಕೆ, ಪುಸ್ತಕ ಬಿಡುಗಡೆಗೆ ಅಡ್ಡಿ ಲವ್ ಜಿಹಾದ್ ಚಳವಳಿ, ಘರ್ ವಾಪಸಿ, ಚರ್ಚ್ ದಾಳಿಗಳು, ಬೀಫ್ ದಾಳಿಗಳ ಜೊತೆಗೆ ದಲಿತ ದೌರ್ಜನ್ಯ ಪ್ರಕರಣಗಳ ಸಂಖ್ಯೆಯಲ್ಲೂ ಭಾರಿ ಏರಿಕೆಯಾಗಿದೆ.

ಜಾತಿವ್ಯವಸ್ಥೆಯ ಕಪಿಮುಷ್ಟಿಯಿಂದ ಹೊರಬರಲು ಇನ್ನೂ ಸಾಧ್ಯವಾಗದೆ ಒದ್ದಾಡುತ್ತಿರುವ ದಲಿತರ ಮೇಲೆ ಕಳೆದ ಒಂದೂವರೆ ವರ್ಷಗಳಿಂದೀಚೆಗೆ ಜಾತಿವಾದಿ ಉಗ್ರರ ದಾಳಿಗಳು ಹೆಚ್ಚಾಗತೊಡಗಿವೆ. ಮೋದಿಯ ರಾಜ್ಯಭಾರದಲ್ಲಿ ದಲಿತ ವರ್ಗಗಳ ಬಗ್ಗೆ ಅಸಹಿಷ್ಣುತೆಯ ಮಟ್ಟ ಎಷ್ಟೊಂದು ಹೆಚ್ಚಿದೆ ಎಂಬುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಒಂದು ಜ್ವಲಂತ ನಿದರ್ಶನವೆಂದರೆ ಇದೇ ವರ್ಷದ ಮೇ ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ ನಡೆದಂತಹ ದಲಿತ ವಿದ್ಯಾರ್ಥಿಯೋರ್ವನ ಹತ್ಯೆ. .ಸಾಗರ್ ಶೆಜವಾಲ್ ಎಂಬ ದಲಿತ ವಿದ್ಯಾರ್ಥಿಯ ಮೊಬೈಲ್‌ನಲ್ಲಿ ಅಂಬೇಡ್ಕರ್‌ರನ್ನು ಕೊಂಡಾಡುವ ರಿಂಗ್ ಟೋನ್ ಮೊಳಗುತ್ತಿದ್ದುದನ್ನು ಸಹಿಸಲಾಗದ ಕೆಲವು ಮೇಲ್ಜಾತಿ ಯುವಕರು ಆತನನ್ನು ಅತ್ಯಂತ ಬರ್ಬರವಾಗಿ ಹತ್ಯೆ ಮಾಡುತ್ತಾರೆಂದರೆ ಅವರಲ್ಲಿ ಎಷ್ಟು ಅಸಹಿಷ್ಣುತೆ ತುಂಬಿದೆ ಎಂದು ನೀವೇ ಊಹಿಸಿ. ಇತ್ತೀಚೆಗೆ ಹರಿಯಾಣಾದ ಸನ್‌ಪೇಡ್ ಗ್ರಾಮದಲ್ಲಿ ಎರಡು ಅಮಾಯಕ ದಲಿತ ಹಸುಳೆಗಳ ಸಜೀವ ದಹನ ನಡೆಯಿತು. 'ನ್ಯಾಯಕ್ಕಾಗಿ ದಲಿತರ ರಾಷ್ಟ್ರೀಯ ಚಳವಳಿ' ಎಂಬ ಸಂಸ್ಥೆ ಪ್ರಕಟಿಸಿರುವ ಸತ್ಯಶೋಧನಾ ವರದಿಯ ಪ್ರಕಾರ ಈ ಅಮಾನುಷ ಕೃತ್ಯದ ಹಿಂದೆ ದಲಿತರ ಆರ್ಥಿಕ ಅಭಿವೃದ್ಧಿಯನ್ನು ಸಹಿಸದ ರಜಪೂತರ ಕೈವಾಡ ಇದೆ. ರಜಪೂತರು ಆ ಕುಟುಂಬದ ಮೇಲೆ ಬಹಿಷ್ಕಾರ ಹೇರಿದ್ದರ ಫಲವಾಗಿ ಸ್ಥಳೀಯ ವರ್ತಕರು ಅವರಿಗೆ ಆಹಾರ ಸಾಮಗ್ರಿ ಮಾರಲು ನಿರಾಕರಿಸಿದ್ದರು. ಇತ್ತೀಚಿನ ಮಾಹಿತಿಗಳು ತಿಳಿಸುವಂತೆ ಫರೀದಾಬಾದ್‌ನ ಯಾವ ನ್ಯಾಯವಾದಿಯೂ ಸಂತ್ರಸ್ತರ ಪರವಾಗಿ ವಾದಿಸಬಾರದೆಂದು ಒತ್ತಡ ಹೇರಲಾಗುತ್ತಿದೆ.

"2014ರ ತರುವಾಯ ದಲಿತರನ್ನು ಗುರಿಯಾಗಿಸಿದ ಅಪರಾಧಗಳ ಸಂಖ್ಯೆಯಲ್ಲಿ ಹಿಂದೆಂದೂ ಇರದಷ್ಟು ಹೆಚ್ಚಳವಾಗಿದೆ" ಎನ್ನುತ್ತಾರೆ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಅಧ್ಯಕ್ಷ ಪಿ.ಎಲ್.ಪುನಿಯಾ. ರಾಷ್ಟ್ರೀಯ ಅಪರಾಧ ಮಾಹಿತಿ ಸಂಸ್ಥೆಯ (National Crime Records Bureau, ಎನ್‌ಸಿಆರ್‌ಬಿ) ಅಂಕಿಅಂಶಗಳೂ ಇದಕ್ಕೆ ಪೂರಕವಾಗಿವೆ. ದಲಿತ ದೌರ್ಜನ್ಯ ಪ್ರಕರಣಗಳು ಅಪಾಯಕಾರಿ ಮಟ್ಟಕ್ಕೆ ಏರಿರುವುದನ್ನು ಎನ್‌ಸಿಆರ್‌ಬಿ ದಾಖಲೆಗಳು ಕೂಡ ಖಚಿತಪಡಿಸುತ್ತವೆ. ಅದರ ಪ್ರಕಾರ 2013ರ ಅಂಕಿಅಂಶಗಳ ಜೊತೆ ಹೋಲಿಸಿದರೆ 2014ರಲ್ಲಿ ಇಂತಹ ಪ್ರಕರಣಗಳ ಸಂಖ್ಯೆಯಲ್ಲಿ 19.4 ಪ್ರತಿಶತ ಹೆಚ್ಚಳವಾಗಿದೆ. ನಡೆದಿರುವ ಒಟ್ಟು 47064 ಪ್ರಕರಣಗಳಲ್ಲಿ 3325 ಪ್ರಕರಣಗಳು ಮಹಿಳೆಯರ ಮೇಲೆ ಅತ್ಯಾಚಾರ, ಹಲ್ಲೆ ಮುಂತಾದವುಗಳಿಗೆ ಸಂಬಂಧಿಸಿವೆ.


ಪರಿಸ್ಥಿತಿ ಇಷ್ಟೊಂದು ಉಲ್ಬಣಗೊಳ್ಳುವುದರ ಹಿಂದೆ ಕೇವಲ ಸವರ್ಣೀಯ ಹಿಂದೂಗಳ ಪಾತ್ರವಷ್ಟೆ ಅಲ್ಲ, ದೊಡ್ಡ ಮಟ್ಟದಲ್ಲಿ ಪೊಲೀಸ್ ವ್ಯವಸ್ಥೆಯ ಪಾತ್ರವೂ ಇದೆ. ವಾಸ್ತವವಾಗಿ ಪೊಲೀಸ್ ವ್ಯವಸ್ಥೆಯ ಕತೆ ಹೇಳತೀರದಷ್ಟು ಘೋರವಾಗಿದೆ. 2014ರಲ್ಲಿ ದಾಖಲಾದ ಒಟ್ಟು ದಲಿತ ದೌರ್ಜನ್ಯ ಪ್ರಕರಣಗಳ ಪೈಕಿ ಕೇವಲ 21.3 ಪ್ರತಿಶತ ಪ್ರಕರಣಗಳು ದಲಿತ ದೌರ್ಜನ್ಯ ತಡೆ ಕಾಯ್ದೆಯಡಿ (SC/ST Prevention of Atrocities Act) ದಾಖಲಿಸಲ್ಪಟ್ಟಿವೆ. ಮಿಕ್ಕುಳಿದ ಪ್ರಕರಣಗಳಲ್ಲಿ ಹೆಚ್ಚಿನವು ಅಷ್ಟೊಂದು ಕಠಿಣವಲ್ಲದ ಐಪಿಸಿ ಸೆಕ್ಷನ್‌ಗಳಡಿ ದಾಖಲಿಸಲ್ಪಟ್ಟಿವೆ. ಇದಲ್ಲದೆ ಪೊಲೀಸರು ಉದ್ದೇಶಪೂರ್ವಕವಾಗಿ ತಾಂತ್ರಿಕ ದೋಷಗಳನ್ನು ಎಸಗುವ ಮೂಲಕ ಆರೋಪಿಗಳು ಖುಲಾಸೆ ಆಗುವಂತೆ ನೋಡಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ದೋಷಪೂರಿತ ಪ್ರಥಮ ಮಾಹಿತಿ ವರದಿಗಳು, ಕಾಯ್ದೆಗೆ ವಿರುದ್ಧವಾಗಿ ಡಿವೈಎಸ್‌ಪಿಗಿಂತ ಕೆಳದರ್ಜೆಯ ಅಧಿಕಾರಿಗಳಿಂದ ತನಿಖೆ ಮಾಡಿಸುವುದು ಇತ್ಯಾದಿ. ಇನ್ನು ನ್ಯಾಯದಾನದ ವಿಚಾರಕ್ಕೆ ಬಂದರೆ 2014ರ ಅಂತ್ಯಕ್ಕಾಗುವಾಗ ದಲಿತ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಿಸಲಾದ ಪ್ರಕರಣಗಳ ಪೈಕಿ ಶೇಕಡಾ 85.5ರಲ್ಲಿ ವಿಚಾರಣೆ ಇನ್ನೂ ಬಾಕಿ ಇರುವುದಾಗಿ ತಿಳಿದುಬರುತ್ತದೆ. ಗಮನಾರ್ಹವಾಗಿ ಶೇಕಡಾ 71.6ರಷ್ಟು ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಯಾಗಿದ್ದಾರೆ!



ಅತ್ಯಂತ ಬರ್ಬರ ಹಿಂಸಾಕೃತ್ಯಗಳು ಬಿಜೆಪಿ ಆಡಳಿತ ವಿರುವ ಹರಿಯಾಣ, ರಾಜಸ್ಥಾನ ಮತ್ತು ಮಹಾರಾಷ್ಟ್ರಗಳಲ್ಲಿ ಸಂಭವಿಸಿವೆ ಎಂದು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಅಧಿಕಾರಿಯೊಬ್ಬರು ಹೇಳುತ್ತಾರೆ. ಉದಾಹರಣೆಗೆ ಹರಿಯಾಣ, ರಾಜಸ್ಥಾನಗಳಲ್ಲಿ ಈಗ ಪಂಚಾಯತ್ ರಾಜ್ ಕಾಯ್ದೆಗೆ "ಮಾಧ್ಯಮಿಕ ಶಿಕ್ಷಣ ಕಡ್ಡಾಯ" ಎನ್ನುವ ತಿದ್ದುಪಡಿ ತರುವ ಮೂಲಕ ದಲಿತ ಮಹಿಳೆಯರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸುವ ಅವಕಾಶವನ್ನು ನಿರಾಕರಿಸುವ ಪ್ರಯತ್ನ ನಡೆದಿದೆ. ಇದು ದಲಿತ ದಮನ ಯಾವ್ಯಾವ ರೂಪಗಳನ್ನು ಪಡೆಯುತ್ತಿದೆ ಎಂಬುದಕ್ಕೆ ಕೇವಲ ಒಂದು ನಿದರ್ಶನ ಅಷ್ಟೆ.

ಯುಪಿಎ ಸರ್ಕಾರ 2014ರ ಮಾರ್ಚ್‌ನಲ್ಲಿ, ಅಂದರೆ ಅದರ ಕೊನೆಯ ದಿನಗಳಲ್ಲಿ, ದಲಿತ ದೌರ್ಜನ್ಯಗಳಿಗೆ ಕಡಿವಾಣ ಹಾಕುವ ಮಸೂದೆಯೊಂದನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿತ್ತು, ಆದರೆ ಸುಮಾರು ಎರಡು ತಿಂಗಳ ಬಳಿಕ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಏನು ಮಾಡಿತು? ಅದು ಈ ಮಸೂದೆಯನ್ನು ಕಾಯ್ದೆಯಾಗಿಸಲು ಯಾವುದೇ ಆಸಕ್ತಿ ತೋರಲಿಲ್ಲ, ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವ ಬದಲು ಕಾಲಾವಧಿ ಮೀರಿ ತನ್ನಿಂತಾನೆ ರದ್ದಾಗುವಂತೆ ಮಾಡಿತು. ಆದರೆ ದಲಿತ ಸಂಘಟನೆಗಳ ತೀವ್ರ ಪ್ರತಿರೋಧ ಬಂದ ಹಿನ್ನೆಲೆಯಲ್ಲಿ ಅಂತೂಇಂತೂ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ ಲೋಕಸಭೆ ಅದನ್ನು ಪರಿಶೀಲನೆಗಾಗಿ ಸಮಿತಿಯೊಂದಕ್ಕೆ ಒಪ್ಪಿಸಿತು. ಹೀಗೆ ಸಾಧ್ಯವಾದಷ್ಟು ವಿಳಂಬಿಸಿದ ನಂತರ ಕೊನೆಗೊಮ್ಮೆ ಮಸೂದೆಯನ್ನು ಅಂಗೀಕರಿಸಲಾಯಿತು. ಆದರೇನು, ಅದನ್ನಿನ್ನೂ ರಾಜ್ಯಸಭೆಯ ಮುಂದೆ ಇರಿಸಲಾಗಿಲ್ಲ, ಇತ್ತ ಮೋದಿ ಸರ್ಕಾರದ ದಲಿತ ವಿರೋಧಿ ನೀತಿಗಳೆಲ್ಲ ಪರೋಕ್ಷವಾಗಿ ಜಾರಿಯಾಗತೊಡಗಿವೆ. ಪರಿಣಾಮವಾಗಿ ದಲಿತ ದೌರ್ಜನ್ಯ ತಡೆ ಕಾಯ್ದೆಯ ಜಾರಿಗಾಗಿ ಕೇಂದ್ರ ಸರಕಾರದ ವತಿಯಿಂದ ಎಲ್ಲಾ ರಾಜ್ಯ ಸರಕಾರಗಳಿಗೆ ಕೊಡಮಾಡುವ ವಿಶೇಷ ಅನುದಾನದ ಮೊತ್ತಕ್ಕೆ ಈ ಬಾರಿಯ ಬಜೆಟನಲ್ಲಿ ಕತ್ತರಿಪ್ರಯೋಗ ಮಾಡಲಾಗಿದೆ. ಮಾತ್ರವಲ್ಲದೆ ಎಲ್ಲಾ ರಾಜ್ಯಗಳಲ್ಲಿ ಬಜೆಟನಲ್ಲಿ ಒದಗಿಸಿರುವುದಕ್ಕಿಂತಲೂ ಕಡಮೆ ಹಣವನ್ನು ಖರ್ಚು ಮಾಡಲಾಗಿದೆ.

2010ರಲ್ಲಿ ಗುಜರಾತಿನ ನವಸರ್ಜನ್ ಟ್ರಸ್ಟ್ ಎಂಬ ದಲಿತ ಎನ್‌ಜಿಒ ಅಲ್ಲಿನ ಸಮಾಜದಲ್ಲಿ ಜಾರಿಯಲ್ಲಿರುವ ಅಸ್ಪೃಶ್ಯತೆಯ ಆಚರಣೆ ಕುರಿತಂತೆ ನಡೆಸಿದ ಅಧ್ಯಯನ ಒಟ್ಟು 98 ಬಗೆಯ ಆಚರಣೆಗಳನ್ನು ಪಟ್ಟಿಮಾಡಿತ್ತು. ಮೋದಿ ರಾಜ್ಯದ ಮುಖ್ಯಮಂತ್ರಿ ಆಗಿದ್ದ ಕಾಲವದು. ಆತ ಆಗ "ಪರಿಸರ ಯೋಜನೆ ಮತ್ತು ತಾಂತ್ರಿಕ ವಿಶ್ವ ವಿದ್ಯಾನಿಲಯ"ದಿಂದ ತನ್ನ ಹಿಂಬಾಲಕರ ತಂಡವೊಂದನ್ನು ಹೆಕ್ಕಿ ಅವರ ಮೂಲಕ ತನಗೆ ಅನುಕೂಲಕರವಾದ ಬೇರೊಂದು ವರದಿಯನ್ನು ತಯಾರಿಸಿಕೊಂಡಿದ್ದ. ಅದರಲ್ಲಿ "ಜಾತಿ ತಾರತಮ್ಯ ಮತ್ತು ಹಿಂಸೆಗಳ ವಿಚಾರ ಗ್ರಹಿಕೆಗೆ ಸಂಬಂಧಪಟ್ಟುದಾಗಿದೆ", "ಜಾತಿ ತಾರತಮ್ಯ ಒಂದು ಗ್ರಾಮೀಣ ಸಂಪ್ರದಾಯ" ಎಂದು ಮುಂತಾಗಿ ಬರೆಯಲಾಗಿತ್ತು. ಆ ವರದಿಯನ್ನು ಆಧಾರವಾಗಿಟ್ಟುಕೊಂಡು ನವಸರ್ಜನ್ ಅಧ್ಯಯನ ಸರಿಯಿಲ್ಲ ಎಂದಿದ್ದ ಮೋದಿ. ಗುಜರಾತಿನ ವಾಸ್ತವ ಹೇಗಿದೆಯೆಂದರೆ ಅಲ್ಲಿ ದಾಖಲಿಸಲಾಗುವ ದಲಿತ ದೌರ್ಜನ್ಯ ಪ್ರಕರಣಗಳಲ್ಲಿ ಶೇಕಡಾ 90ಕ್ಕೂ



ಅಧಿಕ ಪ್ರಕರಣಗಳು ಖುಲಾಸೆಗೊಳ್ಳುತ್ತಿವೆ. ಉದಾಹರ[ಣೆಗೆ] 2013ರ ಎನ್‌ಸಿಆರ್‌ಬಿ ದತ್ತಾಂಶಗಳನ್ನು ತೆಗೆದುಕೊಂ[ಡರೆ] ಆ ವರ್ಷ ದಾಖಲಾಗಿದ್ದ ಒಟ್ಟು ಪ್ರಕರಣಗಳ ಪೈಕಿ ಶೇಕ[ಡಾ] 98ರಲ್ಲಿ ಆರೋಪಿಗಳು ಖುಲಾಸೆಗೊಂಡಿ[ರುವುದು] ದ್ದರೆಂ[ದು] ತಿಳಿದುಬರುತ್ತದೆ. ಗುಜರಾತಿನಲ್ಲಿ ದಲಿತ ದೌರ್ಜನ್ಯ ತ[ಡೆ] ಕಾಯ್ದೆಯನ್ನು ಉದ್ದೇಶಪೂರ್ವಕವಾಗಿ ಅಲಕ್ಷಿಸಲಾಗಿ[ದೆ] ಎಂಬುದಕ್ಕೆ ಈ ಕೆಳಗಿನ ವಿದ್ಯಮಾನಗಳೆ ಸಾಕ್ಷಿಯಾಗಿ[ವೆ]:

1. ಇಂತಹ ಪ್ರಕರಣಗಳ ತನಿಖೆಯನ್ನು ಡಿವೈಎಸ್‌ಪಿಗಿ[ಂತ] ಕೆಳಮಟ್ಟದ ಅಧಿಕಾರಿಗಳು ಮಾಡಬಾರದು ಎಂದಿದ್ದ[ರೂ] ಅತ್ಯಧಿಕ ಪ್ರಕರಣಗಳಲ್ಲಿ ಇನ್ಸ್‌ಪೆಕ್ಟರ್, ಸ[ಬ್] ಇನ್ಸ್‌ಪೆಕ್ಟರ್‌ಗಳೆ ತನಿಖೆ ನಡೆಸುತ್ತಾರೆ.
2. ನ್ಯಾಯಾಲಯಗಳಿಗೆ ಬಲಿಪಶುಗಳ ಜ[ಾತಿ] ಪ್ರಮಾಣಪತ್ರಗಳನ್ನು ಒದಗಿಸಲಾಗುತ್ತಿಲ್ಲ.
3. ರಾಜ್ಯ ಸರ್ಕಾರ ಕಾಯ್ದೆಗೆ ತಿದ್ದುಪಡಿ ಮಾಡಿದೆ ಎಂ[ದು] ನ್ಯಾಯಾಲಯಕ್ಕೆ ಸುಳ್ಳು ಹೇಳಲಾಗುತ್ತದೆ.
4. ದಲಿತ ದೌರ್ಜನ್ಯ ತಡೆ ಕಾಯ್ದೆಯ ಅಡಿಯ[ಲ್ಲಿ] ನಿರೀಕ್ಷಣಾ ಜಾಮೀನಿಗೆ ಅವಕಾಶವಿರದ ಹೊರತ[ಾಗ]ಯೂ ಆರೋಪಿಗಳಿಗೆ ಜಾಮೀನು ನೀಡಲಾಗುತ್[ತಿದೆ].

ತಾನು ಬರೆದಿರುವ ಕರ್ಮಯೋಗ (2007) ಎ[ಂಬ] ಪುಸ್ತಕದಲ್ಲಿ ಮೋದಿ ತನ್ನ ನಿಲುವುಗಳನ್ನು ಸ್ಪಷ್ಟ[ವಾಗಿ] ಹೇಳಿದ್ದಾನೆ:

"ಅವರು 'ವಾಲ್ಮೀಕಿಗಳು, ಸಫಾಯಿ ಕರ್ಮಚಾರಿಗ[ಳು] ಈ ಉದ್ಯೋಗವನ್ನು ಕೇವಲ ಹೊಟ್ಟೆಪಾಡಿಗ[ಾಗಿ] ಮಾಡುತ್ತಿರುವರೆಂದು ನಾನು ಭಾವಿಸುವುದಿಲ್ಲ. ಹಾ[ಗಿದ್ದ] ಪಕ್ಷದಲ್ಲಿ ಅವರು ಇದನ್ನು ವಂಶಪಾರಂಪರ್ಯವ[ಾಗಿ] ಮುಂದುವರಿಸಿ ಕೊಂಡು ಬರುತ್ತಿರಲಿಲ್ಲ.... ಸಮಾಜ ಮ[ತ್ತು] ದೇವರುಗಳಿಗಾಗಿ ಕೆಲಸ ಮಾಡುವುದು ವಾಲ್ಮೀಕಿ[ಗಳ] ಕರ್ತವ್ಯವಾಗಿದೆ; ದೇವರುಗಳು ಅವರಿಗೆ ದಯಪಾಲಿ[ಸಿ]ವಂತಹ ಈ ಕಾರ್ಯವನ್ನು ಅವರು ಮಾಡಬೇಕಾ[ಗಿದೆ]. ಈ ಸ್ವಚ್ಛತೆಯ ಕಾರ್ಯ ಒಂದು ಆಂತರಿಕ ಅಧ್ಯಾ[ತ್ಮಿಕ] ಚಟುವಟಿಕೆಯಾಗಿ ಶತಮಾನಗಳ ಕಾಲ ಮುಂದುವರಿ[ಯ]ಬೇಕಾಗಿದೆ ಎಂದು ಯಾವುದೋ ಕಾಲಘಟ್ಟ[ದಲ್ಲಿ] ಯಾರಿಗೋ ಜ್ಞಾನೋದಯ ಆಗಿದೆ. ಅವರ 'ವಾಲ್ಮೀಕಿ' ಪೂರ್ವಜರಿಗೆ ಅನ್ಯ ಉದ್ಯೋಗ ಅಥವಾ ವ್ಯವಹಾರಗ[ಳನ್ನು] ಆಯ್ದುಕೊಳ್ಳಲು ಸಾಧ್ಯವಿರಲಿಲ್ಲವೆಂದರೆ ಅದ[ನ್ನು] ನಂಬಲಾಗುವುದಿಲ್ಲ".

(ಆಧಾರ: *14.11.2015*ರ ತೆಹೆಲ್ಕಾ[ದಲ್ಲಿ] ನಿದೀಶ್ ವಿಲ್ಲತ್ ಲೇ[ಖನ])

ಪ್ರಜಾವಾಣಿ ಹಾಗೂ ಪಿಳಿಜುಟ್ಟು

ನಾವು ಶಾಲಾಕಾಲೇಜುಗಳಲ್ಲಿ ಓದುತ್ತಿದ್ದ ದಿವಸಗಳಲ್ಲಿ ತಮ್ಮ ತಲೆಯನ್ನು ಸೊಗಸಾದ ಕ್ರಾಪಿನಿಂದ ಅಲಂಕರಿಸಿಕೊಳ್ಳಬೇಕೆಂಬ ಆಸೆ ಬೆಟ್ಟದಷ್ಟು ಇದ್ದರೂ ಸಂಪ್ರದಾಯ ಅಡ್ಡ ಬರುತ್ತಿತ್ತು, ತಲೆ ಕೂದಲಿಗೆ ಕತ್ತಿಯ ಅಲುಗಿನ ಸ್ಪರ್ಶಕ್ಕೂ ಅವಕಾಶ ನೀಡದೆ ಪುರುಷ ಪುಂಗರ ಮಹಿಳಾ ಮಣಿಗಳಂತೆಯೇ ಕೂದಲು ಬೆಳೆಸಬೇಕಾಗಿತ್ತು. ಅವರಂತೆಯೇ ಜಡೆಯೋ ಗಂಟೋ ಹಾಕಿಕೊಳ್ಳುವುದು ಅನಿವಾರ್ಯ ಆಗಿತ್ತು, ಇಲ್ಲದಿದ್ದರೆ ತಲೆಯ ಮುಂಭಾಗವನ್ನು ಅರ್ಧಗೋಲಾಕಾರದಲ್ಲಿ ಬೋಳಿಸಿಕೊಂಡು ಉಳಿದ ಭಾಗವನ್ನು ಹಾಗೇ ಬಿಡಬೇಕಾಗಿತ್ತು, ಕತ್ತಿಯ ಅಲುಗಿನ ಆಘಾತವನ್ನು ತಪ್ಪಿಸಿಕೊಂಡ ತಲೆಯ ಕೂದಲು ಜಡೆಯಾಗುವುದರ ಮೂಲಕವೋ ಅಥವಾ ಗಂಟಾಗುವ ಮೂಲಕವೋ ತನ್ನ ಸಾರ್ಥಕತೆಯನ್ನು ಪಡೆಯಬೇಕಾಗಿತ್ತು, ಕೆಲವರು ತಲೆಯ ನೆತ್ತಿನ ಹತ್ತಿರ ಒಂದು ಗೋಪಾದದಷ್ಟು ಜಾಗದಲ್ಲಿ ಪುಲುಸಾಗಿ ಕೂದಲು ಬೆಳೆಯಲು ಬಿಟ್ಟು ಉಳಿದ ಭಾಗವನ್ನು ನುಣ್ಣಗೆ ಬೋಳಿಸಿಕೊಳ್ಳುತ್ತಿದ್ದರು. ಒಟ್ಟಿನಲ್ಲಿ 'ತಲೆಗೆ ಕ್ರಾಪೇ ಭೂಷಣಂ' ಎಂದು ನಂಬಿದ್ದವರಿಗೆ ನಿರಾಸೆ ಮೂಡಿಸುವ ವಾತಾವರಣ ಪ್ರಚಲಿತದಲ್ಲಿತ್ತು, ಹಳ್ಳಿ ಪಟ್ಟಣಗಳಿಂದ ನಗರಕ್ಕೆ ಬಂದ ವಿದ್ಯಾರ್ಥಿಗಳಿಗೆ ಕ್ರಾಪಿಲ್ಲದ ತಮ್ಮ ತಲೆ, ಅನಾಗರಿಕತೆಯ ಕುರುಹು ಎಂದು ತಿಳಿಯಲು ಬಹಳ ದಿವಸಗಳೇನೂ ಬೇಕಾಗುತ್ತಿರಲಿಲ್ಲ, ನಗರಗಳಲ್ಲಿನ ಸರ್ವವ್ಯಾಪಿ ಕ್ರಾಪು ಬಹು ಆಕರ್ಷಣೀಯವಾಗಿ ತೋರುತ್ತಿತ್ತು, ತಮ್ಮ ತಲೆಗಳನ್ನೂ ಹಾಗೆಯೇ ಕ್ರಾಪಿನಿಂದಲಂಕರಿಸಬೇಕೆಂಬ ಉತ್ಕಟೇಚ್ಛೆಯಾದರೂ ಸಂಪ್ರದಾಯ ದೆವ್ವದಂತೆ ಎದುರುನಿಂತು ಅವರ ಆಸೆಗೆ ತಣ್ಣೀರು ಎರಚುತ್ತಿತ್ತು, ಇದರಿಂದ ಪಾರಾಗಲು ಕೆಲವರು ತಮ್ಮ ತಲೆಯನ್ನು ಕ್ರಾಪಿನಿಂದ ಅಲಂಕರಿಸಿಕೊಂಡರೂ ಸಂಪ್ರದಾಯ ಮುರಿಯಬಾರದಲ್ಲ ಅಂತ ನೆತ್ತಿಯ ಬಳಿ ನಾಲ್ಕು ಐದು ಕೂದಲನ್ನು ಕತ್ತರಿಸದೆ ಹಾಗೆಯೇ ನೀಳವಾಗಿ ಬಿಟ್ಟುಕೊಳ್ಳುತ್ತಿದ್ದರು! ಆ ಕಡೆ ಆಧುನಿಕತೆಯೂ ಆಯಿತು ಆ ಕಡೆ ಸಂಪ್ರದಾಯವೂ ಉಳಿಯಿತು!

ಇದು ಯಾಕೆ ನೆನಪಾಯಿತು ಎಂದರೆ ನನ್ನ ಪ್ರೀತಿಯ ಪ್ರಜಾವಾಣಿ ದಿನಪತ್ರಿಕೆಯ ಇತ್ತೀಚಿನ ವರದಿ ವರಸೆ ನೋಡಿ. ಅದು ಯಾವುದು ಅಂದರೆ ನವೆಂಬರ್ 16ರಂದು ಮೌಢ್ಯ ಪ್ರತಿಬಂಧಕ ಕಾನೂನು ಜಾರಿಗೆ ಆಗ್ರಹಿಸಲು ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗಿತ್ತು, ಇದಕ್ಕೆ ನಿಡುಮಾಮುಡಿ ಸ್ವಾಮೀಜಿಯವರು ಬಹಳ ಶ್ರಮಿಸಿದ್ದರು. ಮೊದಲೇ ಯೋಜಿಸಿದಂತೆ ಬನ್ನಪ್ಪ ಪಾರ್ಕಿನಲ್ಲಿ ಸೇರಿ ಅಲ್ಲಿಂದ ಫ್ರೀಡಂಪಾರ್ಕ್‌ಗೆ ತೆರಳಬೇಕಾಗಿತ್ತು, ಆದರೆ ಆವತ್ತು ಧಾರಾಕಾರ ಮಳೆ. ಭಗವಂತನೇ ಅಡ್ಡಿಪಡಿಸಿದ ಎಂದು ಕೆಲವು ವಿಕೃತ ಮನಸ್ಸುಗಳು ಆನಂದಿಸಿರಲೂಬಹುದು. ಆಯೋಜಕರಿಗಂತೂ ತಿಂಗಳ ಶ್ರಮ ವ್ಯರ್ಥವಾಗುವುದಲ್ಲ ಎಂಬ ಸಂಕಟ. ಇದಾವುದಕ್ಕೂ ಎಡೆಮಾಡದಂತೆ ಸುರಿಯುತ್ತಿರುವ ಮಳೆಯಲ್ಲೂ ನಾಡಿನ ಎಲ್ಲೆಡೆಯಿಂದ ಪ್ರಗತಿಪರ ಚಿಂತಕರು, ಸಾಹಿತಿಗಳು, ಬುದ್ಧಿಜೀವಿಗಳು, ಮಠಾಧೀಶರು, ಜನಸಾಮಾನ್ಯರು ಎಲ್ಲರೂ ಸೇರಿದರು. ಮೆರವಣಿಗೆ ತೆಗೆದರು. ಸುಮಾರು ಎರಡು ಸಾವಿರಕ್ಕೂ ಹೆಚ್ಚು ಜನ ಫ್ರೀಡಂ ಪಾರ್ಕಿನಲ್ಲಿ ಸುರಿಯುತ್ತಿರುವ ಮಳೆಯಲ್ಲೂ ಸೇರಿದ್ದ ಅಪರೂಪದ ಅಮೋಘ ಸಮಾರಂಭ ಅದಾಯಿತು.

ನಾನು ಹರಿಸಾರರಂದು ಈ ಸಮಾರಂಭದಲ್ಲಿ ಭಾಗವಹಿಸಿ ಮಂಡ್ಯಕ್ಕೆ ಹಿಂತಿರುಗಿದೆ. ಒಂದು ಒ[ಳ್ಳೆಯ] ಕೆಲಸಕ್ಕಾಗಿ ಅಷ್ಟೊಂದು ಜನರು ಮಳೆಯನ್ನೂ ಲೆ[ಕ್ಕಿಸದೆ] ಸೇರಿದ್ದು ಹೆಮ್ಮೆ ಎನಿಸಿತ್ತು. ಪ್ರಜಾವಾಣಿ ಪತ್ರಿಕೆ[ಯಲ್ಲಿ] ಇದನ್ನು ಕುರಿತು ವಿಸ್ತೃತ ವರದಿ ಬರುತ್ತದೆ [ಎಂಬ] ವಿಶ್ವಾಸವಿತ್ತು; ಯಾಕೆಂದರೆ ಅದು ಜನರನ್ನು ಆವರಿಸ[ಿರುವ] ಮೌಢ್ಯದ ವಿರುದ್ಧ ಸಂಪಾದಕೀಯದಲ್ಲಿ ಅಗ್ರಲೇ[ಖನ] ಬರೆದಿತ್ತು, ಆದರೆ.... ಮಾರನೆ ಬೆಳಗ್ಗೆ ನನ್ನ ಪ್ರೀ[ತಿಯ] ಪ್ರಜಾವಾಣಿ ಪತ್ರಿಕೆ ತೆಗೆದುನೋಡಿದರೆ... ಆ ಸಮಾರಂ[ಭದ] ಬಗ್ಗೆ ಒಂದು ಅಕ್ಷರವೂ ಇರಲಿಲ್ಲ! ಜನಪರವಾದ ಬ[ೃಹತ್] ಬೃಹತ್ ಸಮಾರಂಭ ಪ್ರಜಾವಾಣಿಗೆ ಸುದ್ದಿಯೇ ಆಗದಿ[ದ್ದುದು] ದಿಗ್ಭ್ರಾಂತಿ ತಂದಿತು. ಸಮಾನ ಮನಸ್ಕರೊಡನೆ ಈ ಕ[ುರಿತು] ಮಾತನಾಡಿದೆ. ಆದರೆ ಪ್ರೀತಿಯ ಪ್ರಜಾವಾಣಿ ನ[ನಗೆ] ಸಂಪೂರ್ಣ ಮೋಸ ಮಾಡಿರಲಿಲ್ಲ, ಪತ್ರಿಕಾ ಧ[ರ್ಮ] ಮರೆಯಲಿಲ್ಲ, ಅದರ ಮಾರನೆಯ ದಿನ ಒಳಪುಟ[ದಲ್ಲಿ] ಎರಡು ಕಾಲಂ ಸುದ್ದಿ ಪ್ರಕಟಿಸಿ ಕೈತೊಳೆದುಕೊಂ[ಡಿತು]. ವಿದ್ಯುನ್ಮಾನ ಮಾಧ್ಯಮಗಳ ಈ ಯುಗದಲ್ಲಿ [ಸುದ್ದಿ] ತಂಗಳಾಗಲು ಬಹಳ ಸಮಯ ಬೇಕಿಲ್ಲ, ಎರಡು ದಿ[ನಗಳ] ನಂತರ ಬಂದ ಸುದ್ದಿ ಎಂದರೆ ಅದು ತಂಗಳು [ಮತ್ತು] ಹಳಸಲು ಸುದ್ದಿ, ಅದೂ ಉಪ್ಪು ಹುಳಿ, ಖಾರ ಯಾ[ವುದೂ] ಇಲ್ಲದೆ ಪ್ರಕಟವಾಗಿತ್ತು, ಇದು ಹೇಗಿತ್ತು ಅಂದ್ರೆ [ಮದುವೆ] ಮಾಗುವುದಕ್ಕೆ ಮೊದಲೇ ಗಿಡಕ್ಕೆ ನೀರು ಸಾಲದೆ ಹ[ಣ್ಣಾಗಿ] 'ಸಂಕಟಕ್ಕೆ ಹಣ್ಣಾಗದೆ' ಅಂತಾರಲ್ಲ ಹಂಗಿತ್ತು ಆ ...





ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ದೃಷ್ಟಿ: ಟಚ್ ವುಡ್







ಪ್ರಕೃತಿಯಲ್ಲಿ ಸಹಜವಾಗಿ ಬಾಳ್ವೆ ಮತ್ತು ಬದುಕು ಮಾಡುತ್ತಿರುವಂತಹ ಜೀವಿಗಳಿಗೆ ನೈಸರ್ಗಿಕವಾಗಿ ಇರುವಂತಹ ಸಹಜ ಸಂವೇದನೆಗಳಿರುತ್ತವೆ. ಒಂದು ವೇಳೆ ಯಾವುದೇ ಹೊರಗಿನ ಶಕ್ತಿಯು ಆ ಸಂವೇದನೆಯನ್ನು ತಡುತ್ತದೆ ಎಂದರೆ ಆ ಜೀವಿಗಳಿಗೆ ಗ್ರಹಿಸಲಾಗುವಂತಿರುತ್ತದೆ. ಅದರಿಂದ ತಮಗುಂಟಾಗುವ ನಕಾರಾತ್ಮಕ ಅನುಭವಗಳ ಮುನ್ಸೂಚನೆಗಳನ್ನು ತರಂಗಗಳ ಮೂಲಕ ಗ್ರಹಿಸುತ್ತವೆ. ಆಗ ತಮಗೆ ಅಹಿತವಾಗುವಂತಹ ಅನುಭವ ಉಂಟಾಗುತ್ತದೆಯೋ ಅಂತಹ ನೆಲೆಗಳನ್ನು ಬಿಟ್ಟು ಅಲ್ಲಿಂದ ಹೊರಟುಹೋಗುತ್ತವೆ.

ಆದರೆ ಪ್ರಾಣಿಗಳಿಗೆ ಇರುವಂತಹ ಇಂಥಾ ಗ್ರಹಿಕೆಯ ಶಕ್ತಿಯಂತಲ್ಲ ಮನುಷ್ಯನಿಗೆ ಇರುವುದು. ಪ್ರಾಣಿಗಳಿಗೆ ಇರುವಷ್ಟು ಸೂಕ್ಷ್ಮವಾಗಿಯೂ ಇರುವುದಿಲ್ಲ, ಅದೂ ಅಲ್ಲದೇ ಎಲ್ಲಾ ಪ್ರಾಣಿಗಳಲ್ಲೂ ಇಂಥಾ ಗ್ರಹಿಕೆಯ ಶಕ್ತಿ ಒಂದೇ ಸಮನಾಗಿರುವುದಿಲ್ಲ. ಉದಾಹರಣೆಗೆ ನಾಯಿಗಳಿಗೆ ಘ್ರಾಣಶಕ್ತಿ ಹೆಚ್ಚೆಂದು ಹೇಳುತ್ತೇವೆ. ಆದರೆ ಕುದುರೆಗಳಿಗೆ ಅವುಗಳಿಗಿಂತ ಹೆಚ್ಚಾಗಿರುತ್ತದೆ. ಅಂದರೆ ಸಾಮಾನ್ಯವಾಗಂತೂ ಒಂದು ಬಗೆಯ ಗ್ರಹಿಕೆಯ ಶಕ್ತಿಯಂತೂ ಅವುಗಳಲ್ಲಿ ಇದ್ದೇ ಇರುತ್ತವೆ. ಆದರೆ ಮನುಷ್ಯನಲ್ಲಿ ನೈಸರ್ಗಿಕವಾಗಿ ಅವು ಇರುವುದೋ ಇಲ್ಲವೋ ಅದು ಬೇರೆ ಮಾತು. ಆದರೆ, ಪ್ರಾಣಿಗಳು ನೈಸರ್ಗಿಕವಾಗಿ ಉಳಿಯುವಂತೆ ಮನುಷ್ಯನ್ನ ಬೆಳವಣಿಗೆಯ ಹಂತಗಳಲ್ಲಿ ಉಳಿದಿರುವುದಿಲ್ಲ ಎಂಬುದಂತೂ ನಿಜ. ಆದರೆ ಮನುಷ್ಯನಿಗೆ ಕೂಡಾ ಈ ಗ್ರಹಿಕೆಯ ಶಕ್ತಿ ಒಂದು ಹಂತಕ್ಕೆ ಅಥವಾ ಒಂದಷ್ಟರ ಪ್ರಮಾಣಕ್ಕೆ ಇರುವುದು ಎಂಬುದಂತೂ ಸುಳ್ಳಲ್ಲ.

ಕೆಲವೊಮ್ಮೆ ಬೆಳಗ್ಗೆಯೇ ಎದ್ದಾಗ ಏನೊಂದು ಕಾಣುವಂತಹ ಹೊರಗಿನ ಕಾರಣವಿಲ್ಲದಿದ್ದರೂ ಬೇಸರವೋ ಅಥವಾ ಕೆಲಸಕಾರ್ಯಗಳಲ್ಲಿ ನಿರುತ್ಸಾಹವೋ ಇರುವುದು. ತಿನ್ನುವುದಕ್ಕೆ ಮನಸ್ಸಿರದೇ, ಮಲಗಿದರೆ ನಿದ್ರೆ ಬಾರದೇ, ಯಾರೊಂದಿಗೂ ಮಾತಾಡಲು ಉತ್ಸಾಹವಿರದೇ ದಿನವಿಡೀ ಮಂಕಾಗಿರುವುದು. ಅಂತಹ ದಿನದ ಕೊನೆಯಲ್ಲೋ ಅಥವಾ ಒಂದೆರಡು ದಿನಗಳಲ್ಲೋ ಯಾವುದೋ ಕೆಟ್ಟ ಸುದ್ದಿಯೊಂದು ಬರಬಹುದು ಅಥವಾ ಅಪಘಾತವೋ, ಆಕಸ್ಮಿಕವೋ, ಇನ್ನೇನೋ ಆಗುವಂತಹ ಘಟನೆಗಳು ನಡೆಯಬಹುದು. ಯಾರಾದರೂ ತಮಗೆ ತುಂಬಾ ಬೇಕಾದ ಸ್ನೇಹಿತರ, ಸಂಬಂಧಿಕರ, ಆತ್ಮೀಯರ ಸಾವು ಸಂಭವಿಸಬಹುದು. ಇಂತಹ ವಿಷಯಗಳನ್ನು ಗಮನದಲ್ಲಿಟ್ಟುಕೊಂಡೇ ಶಕುನಗಳನ್ನು ಗ್ರಹಿಸುವ ವಿಷಯಗಳು ಆರಂಭವಾಗಿರುತ್ತವೆ.

ನಿದ್ರೆಯ ಸಮಯವಲ್ಲದಿದ್ದರೂ ಒಂದೇ ಸಮನೆ ಆಕಳಿಕೆ ಬರುತ್ತಿದ್ದರೆ ಯಾರಾದರೂ ನೆನೆಸಿಕೊಳ್ಳುತ್ತಿದ್ದಾರೆ ಎನ್ನುವುದೋ ಅಥವಾ ತಿನ್ನುವಾಗ ನೆತ್ತಿಗೆ ಹೋದರೆ ತಮ್ಮನ್ನು ಯಾರಾದರೂ ಬೈದುಕೊಳ್ಳುತ್ತಿದ್ದಾರೆ ಎಂದುಕೊಳ್ಳುವುದೋ ಚಾಲ್ತಿಯಲ್ಲಿದೆ.

ಇಲ್ಲಿ ಎರಡು ಬಗೆಯ ವಿಷಯಗಳನ್ನು ಗ್ರಹಿಸಲು ಸಾಧ್ಯ. ಅಸಾಮಯಿಕ ಆಕಳಿಕೆಯಿಂದ ಯಾರಾದರೂ ತಮ್ಮನ್ನು ನೆನೆಸಿಕೊಳ್ಳುತ್ತಿದ್ದಾರೆ ಎಂಬುದು ನಿಜವೇ? ಹಾಗಾದರೆ ಸಿನಿಮಾ ಕಲಾವಿದರು, ರಾಜಕಾರಣಿಗಳು, ಸೆಲೆಬ್ರಿಟಿಗಳು, ಸಾರ್ವಜನಿಕ ಜೀವನದಲ್ಲಿ ತೊಡಗಿಕೊಂಡಿರುವ ವ್ಯಕ್ತಿಗಳೆಲ್ಲಾ ತಮಗುಂಟಾಗುವ ಆಕಳಿಕೆಯಿಂದಾಗಿ ಬಾಯಿ ಮುಚ್ಚಲಾಗದು. ಅವರ ಕುರಿತು ಒಂದಲ್ಲಾ ಒಂದು ರೀತಿಯಲ್ಲಿ, ಒಂದಲ್ಲಾ ಒಂದು ಮೂಲೆಯಲ್ಲಿ ನೆನೆಸಿಕೊಳ್ಳುತ್ತಿರುತ್ತಾರೆ. ಅವರ ಬಗ್ಗೆ ಸಕಾರಾತ್ಮಕವಾಗಿಯೋ, ನಕಾರಾತ್ಮಕವಾಗಿಯೋ ಮಾತುಕತೆಗಳು ನಡೆಯುತ್ತಲೇ ಇರುತ್ತವೆ. ಯಾರಸ್ನಾದರೂ ಯಾರಾದರೂ ನೆನೆಸಿಕೊಳ್ಳುತ್ತಲಿರುತ್ತಾರೆ ಎಂದರೆ ಆಕಳಿಕೆ ಉಂಟಾಗುವುದು ನಿಜ ಅಂತೇನಲ್ಲ, ಆದರೆ, ಈ ಶಕುನವನ್ನು ಒಪ್ಪುವವರು ಪ್ರತಿಪಾದಿಸುವುದು ಹೇಗೆ? ನೆನೆಸಿಕೊಂಡಾಗೆಲ್ಲಾ ಆಕಳಿಕೆ ಬರುವುದೇನಿಲ್ಲ ನಿಜ. ಆದರೆ, ಅಂತಹ ಅಸಾಂದರ್ಭಿಕ ಆಕಳಿಕೆಯು ಅಂತಹದ್ದಕ್ಕೊಂದು ಸೂಚನೆ ಎನ್ನುತ್ತಾರೆ. ಹಾಗೆಯೇ ಇದು ಎಲ್ಲರಿಗೂ ಅನ್ವಯಿಸುವುದಿಲ್ಲ, ಯಾವ ವ್ಯಕ್ತಿಯಲ್ಲಿ ಭಾವನಾತ್ಮಕವಾದಂತಹ ಅಥವಾ ಆತ್ಮೀಯವಾಗಿರುವಂತಹ ಗಾಢ ಸಂಬಂಧವಿರುತ್ತದೆಯೋ ಅವರೀರ್ವರಲ್ಲಿ ನಡೆಯುವಂತಹ ಸೆಳೆತ ಅಥವಾ ಸೆಳೆತದ ಸೂಚನೆ ಇದಾಗಿರುತ್ತದೆ ಎಂದು. ಅವರಿಬ್ಬರಲ್ಲಿ ಪರಸ್ಪರ ಇರುವಂತಹ ಸಂಬಂಧದ ಗಾಢತೆ ಮತ್ತು ಆಪ್ತತೆಯಿಂದ ಸೂಚನೆಗಳು ಸಿಗುವುದು ಎಂದು ಹೇಳುತ್ತಾರೆ. ಅದಕ್ಕೆ ಮಿಗಿಲಾಗಿ ಇನ್ನು ಯಾರು ಯಾರೋ ಸಂಬಂಧವೇ ಇಲ್ಲದವರು ಸುದ್ದಿಗಳ ಮೇಲೆ ಅಥವ ಹೊರಗಿನ ಗ್ರಹಿಕೆಯಿಂದ ಇಂತಹ ನೆನೆಸಿಕೊಳ್ಳುವಿಕೆಯ ಕ್ರಿಯೆಯಲ್ಲಿ ತೊಡಗಿದಾಗ ಅಂಥಾ ಸೂಚನೆಗಳನ್ನು ಏನೂ ಕೊಡುವುದಿಲ್ಲ ಎಂದು ಹೇಳುತ್ತಾರೆ.

ದೃಷ್ಟಿಯಾಗುವುದು

ಭಾರತದಲ್ಲಷ್ಟೇ ಅಲ್ಲದೇ ಇತರ ದೇಶದ ಸಂಸ್ಕೃತಿಗಳಲ್ಲೂ "ಕೆಟ್ಟ ಕಣ್ಣು" ಎಂಬ ಪರಿಕಲ್ಪನೆ ಇದೆ. ಸುಂದರವಾಗಿ ಕಾಣುವ ಅಥವಾ ಇತರರಿಗೆ ಅಸೂಯೆ ಹುಟ್ಟಿಸುವಷ್ಟು ಆಡಂಬರ ಮತ್ತು ವೈಭವಗಳಿಂದ ಕೂಡಿದ ಒಡವೆ, ವಸ್ತು, ಸಮಾರಂಭ, ವ್ಯಕ್ತಿ ಪ್ರದರ್ಶನಗಳಾದರೆ ಕೆಟ್ಟಕಣ್ಣು ಬೀಳುವುದು ಅಥವಾ ದೃಷ್ಟಿಯಾಗುವುದು ಎಂದು ಹೇಳುತ್ತಾರೆ. ಒಟ್ಟಾರೆ ಒಂದರ ಸೌಂದರ್ಯ ಅಥವಾ ವೈಭವವನ್ನು ಮತ್ಸರದಿಂದ ನೋಡುವವರ ನೋಟದಿಂದಾಗಿ, ನಕಾರಾತ್ಮಕ ದೃಷ್ಟಿಗೆ ಬಿದ್ದು ಏನಾದರೂ ಕೆಡುಕು ಸಂಭವಿಸುವುದು ಎಂದು ಅವರ ಗ್ರಹಿಕೆ. ಅದೇನೇ ಇರಲಿ, ಬುಡಕಟ್ಟು, ಗ್ರಾಮ್ಯ ಧಾರ್ಮಿಕ, ನಗರ- ಹೀಗೆ ಎಲ್ಲಾ ಸಂಸ್ಕೃತಿಗಳಲ್ಲೂ ಈ ದೃಷ್ಟಿ ದೋಷವೆಂಬ ಪರಿಕಲ್ಪನೆಯನ್ನು ಹೊಂದಿರುತ್ತಾರೆ. ಇಂಥಾ ಮೌಢ್ಯಾಚರಣೆಗಳನ್ನು ಸಮ್ಮತಿಸದ ಮುಸಲ್ಮಾನರಲ್ಲೂ ಇದು ಗಾಢವಾಗಿ ಕಾಣುತ್ತದೆ.

ಕೆಟ್ಟ ಕಣ್ಣು ಬೀಳಬಾರದೆಂದೇ ಅಥವಾ ದೃಷ್ಟಿದೋಷ ತಗುಲಬಾರದೆಂದೇ ಕರಿಯ ಮಸಿಯನ್ನು ಹಣೆ, ಕೆನ್ನೆ ಅಥವಾ ಗದ್ದ ಅಂಗಾಲು ಮತ್ತು ಅಂಗೈ ಹೀಗೆ ಪ್ರಾದೇಶಿಕ ರೂಢಿಗನುಸಾರ ಹಚ್ಚುತ್ತಾರೆ.

ಒಮ್ಮಿಂದೊಮ್ಮೆಲೆ ಇದೊಂದು ಮೂಢನಂಬಿಕೆ ಎನ್ನುವುದು ನನ್ನ ನಿಲುವು ಮತ್ತು ಚಿಂತನೆಯಾದರೂ ಗಮನಿಸಬೇಕಾದ ಅನೇಕ ಅಂಶಗಳಿವೆ.

ಯಾವುದೇ ಮಗುವನ್ನೋ, ದೊಡ್ಡವರನ್ನೋ ನೋಡಿದಾಗ "ದೃಷ್ಟಿ ಆಗಿಬಿಡುತ್ತದೆ" ಎಂದು ನಾವು ನೆಟಿಕೆ ತೆಗೆಯುವುದನ್ನು ಮಾಡಿದರೆ ಅವರಿಗೆ ಸಂತೋಷವಾಗುತ್ತದೆ. ಇದೊಂದು ರೀತಿಯ ಸೌಂದರ್ಯ ಪ್ರಶಂಸೆಯಾಗಿ ಅಭಿವ್ಯಕ್ತವಾಗುತ್ತದೆ. ನಾನೂ ಕೂಡ ಹಾಗೆ ಮಾಡುವುದಕ್ಕೆ ಹಿಂಜರಿಯುವುದಿಲ್ಲ, ಇದು "ನೀನು ಚೆನ್ನಾಗಿ ಕಾಣುತ್ತಿದ್ದೀಯಾ" ಎನ್ನುವ ಪ್ರಶಂಸೆಯನ್ನು ಅಭಿವ್ಯಕ್ತಗೊಳಿಸಲು ಅನುಸರಿಸುವ ಗ್ರಾಮ್ಯ ಸಂಸ್ಕೃತಿಯಷ್ಟೇ.

ಮಗುವೋ ಅಥವಾ ದೊಡ್ಡವರೋ ಸರಿಯಾಗಿ ಊಟ ಮಾಡದಿದ್ದರೆ, ಹಸಿವಾಗದಿದ್ದರೆ ದೃಷ್ಟಿ ಆಗಿದೆ ಎನ್ನುತ್ತಾರೆ. ಊಟದ ನಂತರ ಹೊಟ್ಟೆ ನೋಯುತ್ತಿದ್ದರೆ ಬಟ್ಟೆ ಬಿದ್ದಿದೆ ಎನ್ನುತ್ತಾರೆ. ಇದು ಕಾಲು ಧೂಳಾಗಿರುವುದಕ್ಕೆ ಸೇರುವುದು.

ನಾನಾರೀತಿಯಲ್ಲಿ ದೃಷ್ಟಿ ತೆಗೆಸಿಕೊಳ್ಳುತ್ತಾರೆ. ನಮ್ಮಲ್ಲಿ ಬಹಳ ಜನಪ್ರಿಯವಾಗಿರುವ ದೃಷ್ಟಿ ತೆಗೆಯುವ ವಿಧಾನವೆಂದರೆ ಪೊರಕೆಯ ಕಡ್ಡಿಗಳನ್ನು ವ್ಯಕ್ತಿಯ ಮುಂದೆ ನೀವಳಿಸಿ ಅದನ್ನು ಮೂಲೆಗಿಟ್ಟು ಸುಡುವುದು. ಆಗ ಸುಡುವಾಗ ಹೆಚ್ಚು ಚಟಪಟಗುಟ್ಟಿದರೆ ಹೆಚ್ಚು ದೃಷ್ಟಿಯಾಗಿದೆ ಎಂದು ಹೇಳುವುದು. ಇನ್ನೂ ಕೆಲವು ಕಡೆ ಪೊರಕೆಯ ಕಡ್ಡಿಗಳಿಗೇ ಬೆಂಕಿ ಹಚ್ಚಿ ನೀವಳಿಸುವುದು ಕೂಡಾ ಮಾಡುವುದುಂಟು.

ಇದ್ದಕ್ಕಿದ್ದಂತೆ ಕಾಯಿಲೆ ಬಿದ್ದರೆ, ಔಷಧಿ ತೆಗೆದುಕೊಂಡರೂ ಜ್ವರ ವಾಸಿಯಾಗದೇ ಇದ್ದರೆ, ಸುಂದರವಾಗಿ ಒತ್ತಾಗಿರುವ ಕೂದಲು ಇದ್ದಕ್ಕಿದ್ದಂತೆ ಉದುರಲಾರಂಭಿಸಿದರೆ, ವ್ಯಾಪಾರ ವಹಿವಾಟುಗಳು ಕುಂಠಿತವಾದರೆ, ಊಟ ಸೇರದೇ ಇದ್ದರೆ, ಚೆನ್ನಾಗಿರುವ ಗಂಡಹೆಂಡತಿ ಅದೇ ಚರ್ವಿತಾಚರ್ವಣ ಪ್ರೇಮದ ಮಾತುಗಳನ್ನು ಆಡದೇ ಜಗಳವಾಡಲು ತೊಡಗುವುದು, ಸಂಬಂಧಗಳು ಇದ್ದಕ್ಕಿದ್ದಂತೆ ಮುರಿಯುವುದು ಇತ್ಯಾದಿಗಳೆಲ್ಲಾ ದೃಷ್ಟಿ ದೋಷದ ವಲಯದೊಳಗೇ ಪ್ರವೇಶಿಸುತ್ತವೆ.

ದೃಷ್ಟಿ ತೆಗೆಸುವುದು

ಈ ದೃಷ್ಟಿಯನ್ನು ತೆಗೆಸುವುದು ಬಹಳ ಗಂಭೀರವಾದ ವಿಷಯ!

ಬೆಂಗಳೂರಿನ ಗಾಯತ್ರಿ ನಗರ ಮತ್ತು ಸುಬ್ರಹ್ಮಣ್ಯ ನಗರದ ನಡುವೆ ಚಾಮುಂಡೀ ದೇವಿಯ ದೇವಸ್ಥಾನವೊಂದಿದೆ. ಅಲ್ಲಿ ಅಮಾವಾಸ್ಯೆಯ ದಿನ ಮತ್ತು ಮಂಗಳವಾರಗಳಂದು ದೃಷ್ಟಿ ತೆಗೆಸಿಕೊಳ್ಳುವ ಜನಜಾತ್ರೆ ಇರುತ್ತದೆ. ದೃಷ್ಟಿ ದೋಷ ಪರಿಹರಿಸುವ ವಿಧಾನವೆಂದರೆ, ಅದೊಂದು ಹಳೆಯ ಕಬ್ಬಿಣದ ಕತ್ತಿ ಇರುತ್ತದೆ. ಅದನ್ನು ಮೆಟ್ಟುವುದೋ, ದಾಟುವುದೋ ಏನೋ ಇದೆ. ಹಾಗಾದರೆ ದೃಷ್ಟಿ ದೋಷ ಪರಿಹಾರ. ಅದಕ್ಕೆ ನೂರು ರುಪಾಯಿಯ ಶುಲ್ಕ. ಆ ಕತ್ತಿಯನ್ನು ಇಟ್ಟುಕೊಂಡಿರುವವರ ಹೊಟ್ಟೆಪಾಡು ಅದು. ಆದರೆ ಇದನ್ನು ನಂಬಿಕೊಂಡು ಹೋಗುವ ಜನರ ಪಾಡನ್ನು ಕಂಡು ನನಗೆ ಆಶ್ಚರ್ಯ.

ಮದುವೆಯಾದ ನವ ವಧೂವರರಿಗೆ ಕೆಂಪಿನಾರತಿ ತೆಗೆಯುವುದು, ಹೊಸ ಗಾಡಿಗಳಿಗೆ ಪೂಜೆ ಮಾಡಿಸಿ ನಿಂಬೆಹಣ್ಣು ಸೀಳುವಂತೆ ಅಥವಾ ಜಜ್ಜುವಂತೆ ಚಕ್ರ ಹರಿಸುವುದು, ಮೆಣಸಿನ ಕಾಯಿ, ನಿಂಬೆಹಣ್ಣು, ಇದ್ದಿಲು, ಕರಿದಾರ (ಕಂಬಳಿದಾರಿ) ಇತ್ಯಾದಿಗಳನ್ನೆಲ್ಲಾ ಪೋಣಿಸಿ ಕಟ್ಟುವುದು, ಈಗ ಹೊಸ ದೇವರೊಬ್ಬ ಸೃಷ್ಟಿಯಾಗಿದ್ದಾನೆ "ದೃಷ್ಟಿ ಗಣಪತಿ". ಅವನ ಫೋಟೋವನ್ನು ಇಡುವುದು, ಚೀನಾದ ಅಷ್ಟ ಮೂಲೆಯ ಉಬ್ಬು ಕನ್ನಡಿಯನ್ನಿಡುವುದು; (ಇವುಗಳಂತೂ ತೀರಾ ಹೊಸತು) ಹೀಗೆ ಸಿಕ್ಕಾಪಟ್ಟೆ ದೃಷ್ಟಿ ನಿವಾರಣ ಕ್ರಮಗಳನ್ನು ನೋಡುತ್ತೇವೆ, ಯಾರೋ ಒಬ್ಬರ ಸಂಬಂಧವು ಚೆನ್ನಾಗಿದೆಯೆಂದು ಪ್ರಶಂಸೆ ಮಾಡುವಾಗ ಕೂಡಲೇ 'ಟಚ್ ವುಡ್' ಎಂದು ನಗರಿಗರು ಹತ್ತಿರದ ಯಾವುದೋ ಒಂದು ಮರದ ಭಾಗವನ್ನು ಮುಟ್ಟುವುದು ಕೂಡ ಇದೇ ಸಂಸ್ಕೃತಿಯ ಭಾಗವಾಗಿದೆ. ಮನೆ ಕಟ್ಟುವಾಗ ಬೆಚ್ಚಪ್ಪನನ್ನು ಇಡುವುದು ಆರಂಭದ ಹಂತದಲ್ಲಾದರೆ, ಆಮೇಲೆ ಕೋರೆದಾಡೆಗಳ ಮುಖವನ್ನು ಇಡುವುದು ಕೂಡ ದೃಷ್ಟಿ ದೋಷದ ಪರಿಹಾರಕ್ಕಾಗಿಯೇ. ವಾಸ್ತವವಾಗಿ ಕೋರೆದಾಡೆ ಮತ್ತು ಮೀಸೆಯ ಈ ಮುಖಗಳು ದೇವಸ್ಥಾನದ ಪ್ರಭಾವಳಿಯಲ್ಲಿ ಇರುವ ಸಿಂಹಮುಖದ ಬದಲಾದ ರೂಪವಾಗಿದೆ. ಅದನ್ನು ಮುಂದೆ ನೋಡೋಣ.

ಆದರೆ, ದೃಷ್ಟಿ ತೆಗೆಯುವ ವಿಚಾರದಲ್ಲಿ ಕೆಲವೊಮ್ಮೆ ನಮಗೆ ಅನುಕೂಲಕರವಾಗಿ ನಡೆಯುವುದು ಈ ನಂಬಿಕೆಯನ್ನು ಮತ್ತಷ್ಟು ಗಂಭೀರಗೊಳಿಸುತ್ತದೆ.

ಚಿಕ್ಕಬಳ್ಳಾಪುರದ ಸಮೀಪದಲ್ಲಿರುವ ಹಳ್ಳಿಗಳಲ್ಲಿ ಸೋಬಾನೆ ಪದಗಳ ಸಂಗ್ರಹಕ್ಕಾಗಿ ಅಲೆದಾಡುತ್ತಿದ್ದಾಗ ಒಂದು ಮನೆಯಲ್ಲಿ ತರಹೇವಾರಿ ಅಡುಗೆಗಳನ್ನು ಸವಿದೆ. ಅವರ ಪ್ರೀತಿ ಮತ್ತು ಅಭಿಮಾನದ ಒತ್ತಡಕ್ಕೆ ನನ್ನ ಸಾಮರ್ಥ್ಯಕ್ಕಿಂತಲೂ ಹೆಚ್ಚು ಒತ್ತಾಯಿಸಿಕೊಂಡೆ. ಸ್ವಲ್ಪ ಹೊತ್ತಿಗೇ ಹೊಟ್ಟೆ ನೋವೆಂದು ಹೇಳಿದಾಗ ಆ ಮನೆಯ ಹೆಂಗಸು ದೃಷ್ಟಿಯಾಗಿದೆ, ತೆಗೆಯುತ್ತೇನೆ ಬನ್ನಿ ಎಂದು ನನ್ನ ಹೊರಗೆ ಕೂರಿಸಿದರು. ನಂತರ ಕೈಯಲ್ಲಿ ಉಪ್ಪು, ಒಣಮೆಣಸಿನ ಕಾಯಿ, ಸುಣ್ಣ ಇತ್ಯಾದಿಗಳನ್ನು ಹಿಡಿದು ನನ್ನ ಮುಖದ ಮುಂದೆ ತಂದು ದಿಕ್ಕುದಿಕ್ಕುಗಳಿಂದ ನೀವಳಿಸಿ ಪ್ರತಿ ದಿಕ್ಕಿನಿಂದ ಕೈಯನ್ನು ನೀವಳಿಸಿ ತಂದಾಗಲೂ ನನ್ನ ಮುಖದ ಮುಂದೆ ಹಿಡಿದು ಮೂರುಸಲ ಆ ಹಿಡಿದ ಮುಷ್ಟಿಗೆ 'ಥೂ ಥೂ ಥೂ' ಎಂದು ಅನ್ನಿಸುತ್ತಿದ್ದರು. ಜೊತೆಗೆ 'ನಾಯಿ ಕಣ್ಣು, ನರೀ ಕಣ್ಣು, ಗೂಬೆ ಕಣ್ಣು, ಹಾದಿ ಬೀದಿಯಲ್ಲಿ ಹೋಗುವವರ ಕಣ್ಣು' ಇನ್ನೂ ಏನೇನೋ ಹೇಳುತ್ತಾ ಕೊನೆಗೆ ಹತ್ತಿರದ, ತೆರೆದ ಬಾವಿಗೆ ಹಾಕಿಸಿ, ಹಿಂದಕ್ಕೆ ತಿರುಗಿ ನೋಡದಂತೆ ಬರುವುದಕ್ಕೆ ಹೇಳಿದರು. ಅವರು ಹೇಳಿದ ಪ್ರಕಾರ ಬಾವಿಯ ನೀರಿನಲ್ಲಿ ಹಾಕಿರುವ ಸುಣ್ಣವು ಕರಗುತ್ತಿದ್ದಂತೆ ನನ್ನ ಹೊಟ್ಟೆಯ ನೋವೂ ಶಮನವಾಗುತ್ತಾ ಬಂದು, ಅದು ಪೂರ್ತಿ ವಿಲೀನವಾಗುವ ಹೊತ್ತಿಗೆ ಹೊಟ್ಟೆನೋವು ಹೋಗುವುದೆಂದು.


ಆದರೆ ನನ್ನ ಹೊಟ್ಟೆಯ ನೋವು ದೃಷ್ಟಿ ತೆಗೆದ ವಸ್ತುಗಳು ಬಾವಿಗೆ ಬೀಳುವ ಮುನ್ನವೇ ಹೊರಟುಹೋಗಿತ್ತು, ನೋವು ಇಲ್ಲವಾಗಿತ್ತು.

ಇದು ಹಾಗೆ ಆಗಿದ್ದಾದರೂ ಹೇಗೆ?

ನನಗೆ ಹೊಸತು ಎನಿಸಿರುವ ಅಥವಾ ನಮ್ಮ ಮನೆಯಲ್ಲಿ ಮಾಡದಂತಹ ಆ ದೃಷ್ಟಿ ತೆಗೆಯುವ ವಿಧಾನವನ್ನು ನಾನು ಬಹಳ ಕುತೂಹಲದಿಂದ ಗಮನಿಸತೊಡಗಿದ್ದೆ. ಜೊತೆಗೆ ಆ ಹೆಂಗಸರು ತಮಗೆ ತಿಳಿದಿರುವ ಒಂದು ವಿಧಾನವನ್ನು ಅಭಿಮಾನದಿಂದ ಪ್ರದರ್ಶಿಸುವಾಗ ಅದಕ್ಕೆ ಗೌರವಿಸುವುದಲ್ಲದೇ, ಅವರು ಹೇಗೆ ಏನು ಮಾಡುತ್ತಾರೆ ಎಂಬುದನ್ನು ಗಮನಿಸುತ್ತಾ ಅವರ ಕೈಗಳ ಚಲನವಲನಗಳನ್ನು ಗಮನಿಸುತ್ತಿದ್ದೆ. ಅವರು ಹೇಳುವ ಮಾತುಗಳನ್ನು ಗಮನವಿಟ್ಟು ಆಲಿಸುತ್ತಿದ್ದೆ. ಇಷ್ಟೆಲ್ಲಾ ಮಾಡುವಾಗ ನನ್ನ ಮನಸ್ಸಿನ ಗಮನವು ಪೂರ್ತಿ ಅತ್ತ ಕಡೆಗೆ ತಿರುಗಿತ್ತು, ಹೊಟ್ಟೆನೋವಿನ ಕಡೆಗೆ ಗಮನವೇ ಇರಲಿಲ್ಲ, ಒಟ್ಟಾರೆ ಗಮನ ಪಲ್ಲಟವೇ ನೋವು ಅದೃಶ್ಯವಾಗುವುದಕ್ಕೆ ಕಾರಣ. ಭಾವನಾತ್ಮಕವಾಗಿಯೋ, ನಂಬಿಕೆಯಿಂದಾಗಿಯೋ ಅಥವಾ ಗಮನದ ಕೇಂದ್ರೀಕರಣ ಬೇರೊಂದು ಕಡೆಗೆ ಆಗುವುದೋ; ಒಟ್ಟಾರೆ ಅದು ಆಚರಣೆಯಲ್ಲಿ ಅಥವಾ ವಸ್ತುಗಳಲ್ಲಿ ಏನೂ ಇಲ್ಲ.

ಹಾಗೆಯೇ ಸುಂದರವಾದ ವಸ್ತು ಅಥವಾ ವಿಷಯಗಳಿಂದ ಕಣ್ಣಿನ ಗಮನವನ್ನು ಸೆಳೆಯುವುದಕ್ಕೇ ಹುಲ್ಲು, ಬೊಂಬುಗಳಿಂದ ಮಾಡಿದ ಬೆಚ್ಚಪ್ಪನನ್ನೋ, ಆಕರಾಳ ವಿಕರಾಳ ಮುಖವನ್ನು ಇಡುವುದೋ ಮಾಡುವುದು. ಏಕೆಂದರೆ ನೋಡುಗರ ಗಮನ ಅತ್ತ ಸೆಳೆದಾಗ ಕಣ್ಣೋಟಗಿನ ಮಾತ್ಸರ್ಯದ ದೃಷ್ಟಿಯೂ ಅದರ ಮೇಲೆ ಬಿದ್ದು ವಸ್ತುವಿನ ಮೇಲೆ ಬೀಳುವುದಿಲ್ಲ, ಕೆಡುಕುಂಟಾಗುವುದಿಲ್ಲ ಎಂಬುದು.

ಆದರೆ ದೃಷ್ಟಿದೋಷವೆನ್ನುವುದು ಬಹಳ ಅನಾದಿಕಾಲದ ಪರಿಕಲ್ಪನೆಯಾಗಿದ್ದು, ವಿವಿಧ ಸಂಸ್ಕೃತಿಗಳಲ್ಲಿ ಇದು ಬಹಳ ಪ್ರಧಾನ ಪಾತ್ರವಹಿಸುತ್ತದೆ. ಬಹಳ ಕುತೂಹಲಕರವಾದ ಅಂಶಗಳನ್ನು ಇದು ಒಳಗೊಂಡಿದೆ. ವೈಜ್ಞಾನಿಕವಾಗಿ ಮತ್ತು ವೈಚಾರಿಕವಾಗಿ ಇದು ಪ್ರತಿಶತ ಮೂಢನಂಬಿಕೆಯೇ ಆಗಿದ್ದರೂ ಭಾವನಾತ್ಮಕವಾಗಿ ಇದು ಬಹಳ ಗಂಭೀರವಾಗಿ ಜನಸಂಸ್ಕೃತಿಯಲ್ಲಿ ಬೇರೂರಿದೆ. ಅದೊಂದು ಸುಂದರ ಅಧ್ಯಯನ. ಇದು ಪ್ರಮಾದಿಸುವ, ಮೈ ಮೇಲೆ ದೇವರು, ದೆವ್ವ ಬರುವ, ಇನ್ನೂ ಹಲವು ವಿಷಯಗಳಿಗೆ ಕೊಂಡಿಯಾಗುತ್ತದೆ ಎಂದರೆ ಆಶ್ಚರ್ಯವಾದರೂ ಸತ್ಯ. ■



ಟಿಪ್ಪು, ಪೇಜಾವರ ಮತ್ತು ಸಲಾಮ್‌ಗಳ

ಮುಸಲ್ಮಾನ ಎನ್ನುವ ಕಾರಣಕ್ಕೆ ಆಮಿರ್‌ಖಾನ್‌ನ ಜನಪರ ಕಾಳಜಿಯ 'ಸತ್ಯಮೇವ ಜಯತೆ' ಕಾರ್ಯಕ್ರಮವನ್ನೇ ಅನುಮಾನದಿಂದ ಕೆಲವರು ನೋಡಿದಂತೆ ಚಿಮೂ, ಪೇಜಾವರರಂತವರು ಪೂರ್ವಾಗ್ರಹಪೀಡಿತವಾಗಿ ಟಿಪ್ಪುವಿನ ಕುರಿತಾಗಿ ಏನೇ ಹೇಳಿಕೊಂಡರೂ ಟಿಪ್ಪು ಸುಲ್ತಾನ ಹಿಂದೂ ದೇವರುಗಳನ್ನು ಗೌರವಿಸುತ್ತಿದ್ದ ಎನ್ನುವುದಕ್ಕೆ ಇಂದಿಗೂ ಹಲವೆಡೆ ಸಾಕ್ಷ್ಯಾಧಾರಗಳಿವೆ. ಅವುಗಳಲ್ಲೊಂದು ಉಡುಪಿ ಜಿಲ್ಲೆಯ ಕೋಟೇಶ್ವರ ದೇಗುಲದಲ್ಲಿ ಟಿಪ್ಪು ಗೌರವಾರ್ಥ ನಡೆಯುತ್ತಿರುವ "ಸಲಾಮ್ ಪೂಜೆ". ಹಾಗೆಯೇ ಶಂಕರನಾರಾಯಣ ದೇಗುಲದಲ್ಲಿರುವ ಟಿಪ್ಪು ನೀಡಿರುವ ಬೃಹತ್ ಗಂಟೆಗಳೇ ಸಾಕ್ಷಿ. ಟಿಪ್ಪುವಿನ ಕಾಲದಲ್ಲಿ ಈಗಿನ ಕರ್ನಾಟಕವೆಂಬ ರಾಜ್ಯ ಇದ್ದಿರಲಿಲ್ಲ, ಸ್ವಾತಂತ್ರ್ಯದ ಬಳಿಕವೂ ಈಗಿನ ದಕ ಜಿಲ್ಲೆ ಮದ್ರಾಸ್ ಸರಕಾರದ ಅಧೀನದಲ್ಲಿತ್ತು, ಮೈಸೂರನ್ನಾಳಿದ ಟಿಪ್ಪು ಸಂಬಂಧವಿಲ್ಲದಿದ್ದರೂ ಕರಾವಳಿಯ ಕೆಲದೇಗುಲಗಳಿಗೆ ದೇಣಿಗೆಯನ್ನು ನೀಡಿ ಗೌರವಿಸಿದ್ದನೆಂಬುದು ಐತಿಹಾಸಿಕ ಸತ್ಯ. ಕಳೆದ ಸಂಚಿಕೆಯಲ್ಲಿ ಹರೀಶ್.ಎಂ.ಆರ್ ಅವರು ಅಂದಂತೆ ಉಡುಪಿಗೂ ಟಿಪ್ಪುವಿನ ದೇಣಿಗೆ ಸಂದಿರುವ ಸಾಧ್ಯತೆಯಿದೆ. (ಉಡುಪಿ ದೇಗುಲದೊಳಗೆ ಮುಸಲ್ಮಾನ ದೊರೆಯೊಬ್ಬ ದೇಗುಲಕ್ಕೆ ನೀಡಿದ ಸಂಪತ್ತಿನ ಬಗ್ಗೆ ಉಲ್ಲೇಖವಿದೆಯಾದರೂ ಅದು ಮಧ್ವನ ಕಾಲದ ಕಥೆಯೆಂದು ಚಿತ್ರಮುಖೇನ ಹೇಳಲಾಗಿದೆ.) ತಮ್ಮ ಬದ್ಧ ವೈರಿಯಾದ ಶಂಕರ ಸ್ಥಾಪಿಸಿದ ಶೃಂಗೇರಿಗೆ ಕೊಟ್ಟಷ್ಟು ಮಾನ್ಯತೆ ತಮಗೆ ಟಿಪ್ಪು ನೀಡಿಲ್ಲ ಎಂಬ ಕೊರಗು ಮಾಧ್ವ ಯತಿಗಳಿಗಿದ್ದಿರಬಹುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲೂ ಮುಸ್ಲಿಮರನ್ನು ಎಳೆದು ತರದೇ "ಬೇಕೆನಿಸಿದರೆ ಗೋಮಾಂಸ ತಿನ್ನುವೆ" ಎಂದದ್ದಕ್ಕೆ ಮಸೀದಿ ಮತ್ತು ಹಂದಿಮಾಂಸವನ್ನು ವಿನಾಕಾರಣ ಎಳೆದುತಂದು ರಂಪಾಟ ಮಾಡಿದ ಪೇಜಾವರರಿಗೆ ಅಬ್ದುಲ್ ಸಲಾಮ್ ಎನ್ನುವಾತ ಫೇಸ್‌ಬುಕ್‌ನಲ್ಲಿ ತನ್ನದೇ ರೀತಿಯಲ್ಲಿ 'ಸಲಾಮ್ ಪೂಜೆ' ಮಾಡಿದ್ದ (ಜನರನ್ನು ಕೆರಳಿಸಲು ಫೇಕ್ ಅಕೌಂಟ್ ಮೂಲಕ ಹಿಂದೂಗಳೇ ಇದನ್ನ ಮಾಡಿರುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು.) ನಿಜಕ್ಕೂ ಪೇಜಾವರರಿಗೆ ಟಿಪ್ಪು ಹಾಗು ಮುಸಲ್ಮಾನರೆಂದರೆ ಯಾಕಿಷ್ಟು ಅಸಮಾಧಾನವೆಂಬುದೇ ಅರ್ಥವಾಗುತ್ತಿಲ್ಲ.

ನನ್ನಣ್ಣ ಬಾದಾಮಿ ಸಮೀಪದಲ್ಲಿ ಕೆಲಸದಲ್ಲಿದ್ದಾಗ ಕೆಲಬಾರಿ ನಾನಲ್ಲಿಗೆ ಹೋಗಿದ್ದೆ. ಬಾದಾಮಿಯ ಚಾಲುಕ್ಯರು ಅದೂಇದೂ ಕೇಳಿದ್ದ ನನಗೆ ನಿಜಕ್ಕೂ ಇದು ರಾಜ ಮಹಾರಾಜರು ಓಡಾಡಿದಂತ ಊರೆಂಬುದನ್ನ ನಂಬಲಿಕ್ಕೇ ಆಗಲಿಲ್ಲ. ದೇಗುಲಗಳಂತಹ ಕೆಲ ಸ್ಮಾರಕಗಳನ್ನ ಬಿಟ್ಟರೆ ಆ ಊರಲ್ಲಿ ರಾಜತ್ವದ ಕಳೆ ಕಾಣಿಸಲೇ ಇಲ್ಲ. ಶತಶತಮಾನಗಳಿಂದ ಹೆಸರೇ ಇಲ್ಲದಂತಹ ಬಾಂಬೆ ಎಂಬ ಊರು ಬ್ರಿಟಿಷರ ಮಹಾಹತಿನ ಕಾರಣದಿಂದಾಗಿ ಇಂದು ಯಾವ ರೀತಿ ಬೆಳೆದಿದೆ ಎಂಬುದು ಎಲ್ಲರಿಗೂ ಗೊತ್ತು, ಮಂಗಳೂರೆಂಬುದು ಕೃತಕ ಬಂದರಿನ ಊರು. ಅದು ಬಿಟ್ಟು ನೂರು ಕಿಮೀ ಉತ್ತರದ ಬಂದರಿಗೆ ಪ್ರಶಸ್ತವಿರುವ ಗಂಗೊಳ್ಳಿಯಲ್ಲಿ ಬ್ರಿಟಿಷರು ಬಂದರು ಕಟ್ಟಿದ್ದರೆ ಇವತ್ತು ಮಂಗಳೂರು ಗಂಗೊಳ್ಳಿಯಂತಿರುತ್ತಿತ್ತು, ಗಂಗೊಳ್ಳಿ ಮಂಗಳೂರಿನಂತಿರುತ್ತಿತ್ತು, ಆಯಾ ಕಾಲದ ಸಾಂದರ್ಭಿಕ ಪ್ರಭಾವಗಳು ಊರು ಮತ್ತು ಸಮಾಜಗಳನ್ನು ಹೇಗೆ ಪ್ರಭಾವಿಸಿ ಪರಿವರ್ತಿಸುತ್ತವೆ ಎನ್ನುವುದಕ್ಕೆ ಇವು ಕೆಲ ಉದಾಹರಣೆಗಳಷ್ಟೆ.



ಒಂದು ವೇಳೆ ಬಾದಾಮಿಯಲ್ಲಿ ರಾಜರ ಆಳ್ವಿಕೆ ಇನ್ನೂ ಇದ್ದಿದ್ದರೆ ನಾನು ಮೇಲಿನ ಮಾತನ್ನು ಆಡುತ್ತಿರಲಿಲ್ಲ. ಅದೇ ರೀತಿ ಬ್ರಿಟಿಷರಾಗಲೀ ಟಿಪ್ಪುವಿನಂತಹ ಮುಸಲ್ಮಾನ ದೊರೆಗಳಾಗಲಿ ಇಂದೂ ಕೂಡ ನಮ್ಮನ್ನಾಳುತ್ತಿದ್ದರೆ ಪೇಜಾವರರಂತವರೂ ಇಂತಹ ಮಾತುಗಳನ್ನು ಆಡುತ್ತಿರಲಿಲ್ಲ. ಅಂದರೆ, ಹೆದರಿಕೆಯ ಕಾರಣಕ್ಕಲ್ಲ ಕಾರಣಿಕ- ಶಾನುಭೋಗ ಇತ್ಯಾದಿತ್ಯಾದಿ ಪೇಜಾವರ ಕುಲದವರು ಈ ಆಂಗ್ಲರ ಅಥವ ಮುಸಲ್ಮಾನರ ನಿಷ್ಠರಾಗಿ ಅವರ ಸೇವೆಯಲ್ಲಿ ಇಂದಿಗೂ ಇರುತ್ತಿದ್ದರು.

ಆದರೀಗ ದರಿದ್ರ ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ರೋಗ (ಕಾರಂತರಂತ ಕಾರಂತರ ಅಣ್ಣ ಜಿಗುಟು ಸನಾತನವಾದಿ ವಾಸುದೇವ ಕಾರಂತರು ತಮ್ಮ ಪುಸ್ತಕದಲ್ಲಿ ಇವನ್ನೆಲ್ಲ



ಇದೇ ದಾಟಿಯಲ್ಲಿ ಜರಿದಿದ್ದರು) ಎಂಬುದೆಲ್ಲ ಬಂದಿದೆ. ಹಾಗಾಗಿ ಮೊದಲಿನಂತೆ ಇವರ ಪರೋಕ್ಷ ಆಳ್ವಿಕೆ ಹಾಗು ಹಿಡಿತ ಸಾಧ್ಯವಿಲ್ಲವೆಂಬುದೇ ಇಂತಹ ಮಾಜಿ ಶಾನುಭೋಗದವರ ಅಳಲು. ಗೀತೆಯಲ್ಲೇ ಹೇಳಿಲ್ಲವೇ? "ಪರಿವರ್ತನೆಯೇ ಜಗದ ನಿಯಮ" ಎಂದು. ಆದರೆ ತಮ್ಮ ಮೂಗಿನ ನೇರದ ಪರಿವರ್ತನೆಯನ್ನಷ್ಟೇ ಇವರು ಒಪ್ಪುವಂತವರು. ಕೆಳವರ್ಗದವರು ತಮ್ಮ ಸ್ಥಾನವನ್ನಾಕ್ರಮಿಸುವುದು ಕೃಷ್ಣ ಹೇಳಿದ 'ಪರಿವರ್ತನೆ'ಯ ಲಿಸ್ಟ್‌ನಲ್ಲಿ ಬರುವುದಿಲ್ಲವಂತೆ.

ಟಿಪ್ಪುವಿನಂತಹ ವಿವಾದಿತ ವ್ಯಕ್ತಿಯ ಜನ್ಮದಿನಾಚರಣೆ ತಪ್ಪು ಎನ್ನುವ ಪೇಜಾವರರು ತಮ್ಮ ಬಹುವಿವಾದಿತ ಮಾಧ್ವನ ಹೆಸರನ್ನು ನಾಡಗೀತೆಯಲ್ಲಿ ಸೇರಿಸಲು ಎಂತಹ ಲಡಾಯಿಗೂ ಸಿದ್ಧ ಎಂದು ತೋರಿಸಿದ್ದಾರೆ. ಹಿಂದೂಗಳಿಗಲ್ಲ, ಎಲ್ಲಾ ಬ್ರಾಹ್ಮಣರಿಗೂ ಅಲ್ಲ, ಕೇವಲ ಮಾಧ್ವರಿಗಷ್ಟೇ ಸೀಮಿತವಿದ್ದ, ಇಲ್ಲಿನ ಬಹುಜನರನ್ನ ನಿತ್ಯನಾರಕಿಗಳೆಂದು ಅವಮಾನಿಸಿದ ಬಹುವಿವಾದಿತ ಮಧ್ವಾಚಾರ್ಯ ರೂಪಿಸಿದ ಅಧಿಕಾರ ಬದಲಾವಣೆಯ "ಪರ್ಯಾಯ ಪೀಠಾರೋಹಣ"ವನ್ನು 'ನಾಡಹಬ್ಬ'ವನ್ನಾಗಿಸಬೇಕೆಂದು ತನ್ನ ಸಹವರ್ತಿಗಳ ಮೂಲಕ ಇವರು ಕರೆಕೊಡಿಸಬಹುದು. ಆದರೆ, ಈತನಕ ಜನರೇ ಲಾವಣಿ ಇತ್ಯಾದಿಗಳ ಮೂಲಕ ಕೊಂಡಾಡುತ್ತಿದ್ದ ನಾಡನ್ನಾಳಿದ ಟಿಪ್ಪುವಿನ ದಿನಾಚರಣೆ ತಪ್ಪಂತೆ. ವಿಚಿತ್ರವಾಗಿದೆ ಪೇಜಾವರರ ತರ್ಕ.

"ಸಿದ್ದರಾಮಯ್ಯನವರ ಸಿದ್ಧಾಂತಕ್ಕೆ ನನ್ನ ಬೆಂಬಲವಿದೆ ಆದರೆ ಅಹಿಂದದಲ್ಲಿನ 'ಅ' ತೆಗೆಯಬೇಕು" ಎಂದಿದ್ದ ಪೇಜಾವರರಿಗೆ ಟಿಪ್ಪು ಹಾಗು ಮುಸಲ್ಮಾನರನ್ನು ಕಂಡರೆ ಏನೋ ಅಳುಕಿದ್ದಂತಿದೆ. ಇಸ್ರೇಲ್ ಮೂಲದ ಬಿಳಿಕಣ್ಣಿನ ಚಿತ್ಪಾವನ ಬ್ರಾಹ್ಮಣರಂತೆ ಟಿಪ್ಪುವಿಗೆ ಭಯಪಡುವ ಪೇಜಾವರರು ಬ್ರಿಟಿಷ್ ಮೂಲದ ಆಂಗ್ಲೋ ಇಂಡಿಯನ್ನರೇ ಹೇಗೆ ಎಂಬ ಪ್ರಶ್ನೆಯೂ ಕಾಡುತ್ತದೆ.

ಮಧ್ವಾಚಾರ್ಯ ಪೇಜಾವರರ ಮೂಲ ಗುರುಗಳು. ಅವರ ನಂತರ ಬಂದ ಶಂಕರಾಚಾರ್ಯರನ್ನಂತೂ ಅವರಿಗೆ ಕಂಡರೇ ಆಗದು. ಆದರೂ ಮಠ ಹಾಗು ದೇಗುಲದ ವಿಚಾರದಲ್ಲಿ ಮಧ್ವನ ಬಳಿಕ ಯಾರನ್ನಾದರೂ ಗೌರವಿಸುವುದಿದ್ದರೆ ಅಲ್ಲಿ ಮುಸಲ್ಮಾನರೇ ಎದ್ದು ಕಾಣುತ್ತಾರೆಂಬುದು ವಿಚಿತ್ರವಾದರೂ ಸತ್ಯ. ಆದರೂ ಮುಸಲ್ಮಾನರೆಂದರೆ ಪೇಜಾವರರಿಗೆ ಅಲರ್ಜಿ ಯಾಕೋ..!!?

ಮಧ್ವಾಚಾರ್ಯರಿಗೆ ಕೃಷ್ಣನ ಮೂರ್ತಿಯಿದ್ದ ಗೋಪಿ ಚಂದನದ ಉಂಡೆಯನ್ನು ನೀಡಿದ್ದು ಮುಸಲ್ಮಾನ ವರ್ತಕನಾದರೆ, ಉಡುಪಿ ಮಠದ ಕಷ್ಟಕಾಲದಲ್ಲಿ ದೀಪದೆಣ್ಣೆಗೂ ಗತಿಯಿಲ್ಲದ ಸಮಯದಲ್ಲಿ ದೇಗುಲಕ್ಕೆ ಎಲ್ಲಾ ರೀತಿಯಲ್ಲಿ ನೆರವಿತ್ತವರು ಉಡುಪಿಯ ಹಾಜಿ ಅಬ್ದುಲ್ಲಾ ಸಾಹೇಬರು.

ಉಡುಪಿಯಲ್ಲಿ ಕೃಷ್ಣ ಮಠದವರು ಕಟ್ಟಿದ ದೇಗುಲಕ್ಕೆ ಭಕ್ತರನ್ನಾಕರ್ಷಿಸುವ ದೊಡ್ಡ ಸ್ವಾಗತ ಕಮಾನಿದೆ. ಜಿಲ್ಲೆಯಾಗಿ ಬೆಳೆಯುತ್ತಿರುವ ಉಡುಪಿಯಲ್ಲಿ ಹೊಸದಾದ ರಸ್ತೆವ್ಯವಸ್ಥೆಯನ್ನು ಈ ಕಮಾನಿಗೆ ತೊಂದರೆಯಾಗದ ರೀತಿಯಲ್ಲಿ ರಚಿಸಲಾಗುತ್ತಿದೆ. (ಅದೇ ಪಕ್ಕದ ಬ್ರಹ್ಮಾವರದಲ್ಲಿ ಒಂದು ಸಣ್ಣ ಸಮುದಾಯದ ಜನರು ಹಣ ಕಲೆಹಾಕಿ ಕಟ್ಟಿದ ಬಾರಕೂರಿಗೆ ಹೋಗುವ ಸ್ವಾಗತ ಕಮಾನು ಹೊಸರಸ್ತೆ ರಚನೆಯಿಂದಾಗಿ ಅಗೋಚರ ಸ್ಥಿತಿಯಲ್ಲಿದೆ.) ಉಡುಪಿ ಇತಿಹಾಸದ ಮಹಾಧಾನಿಯಾದ ಆಸ್ಪತ್ರೆ, ಶಾಲೆ ಮೊದಲಾದವುಗಳಿಗೆ ನೆರವಿತ್ತ ಜಮೀನು ದಾನ ಮಾಡಿದ ಹಾಜಿ ಅಬ್ದುಲ್ಲಾರ ಹೆಸರಿನಲ್ಲಿರುವ ಅನೇಕ ಬೋರ್ಡುಗಳು ಇದೀಗ ಕಾಣೆಯಾಗಿವೆ. (ಉದಾ: ಅಲಂಕಾರ್ ಥಿಯೇಟರ್ ಬಳಿ ಇದ್ದ ಆಸ್ಪತ್ರೆಯ ಹೆಸರು ಬದಲಿಸಿ ಅಬ್ದುಲ್ಲಾರ ಹೆಸರನ್ನು ಕಾಣದಂತೆ ಯಾವುದೋ ಮೂಲೆಗೆ ತಳ್ಳಲಾಗಿದೆ.) ಒಟ್ಟಾರೆ ಇಡೀ ಉಡುಪಿಯೆಂದರೆ ಎಲ್ಲವೂ ಮಠಾಧೀನ ಎನ್ನುವಂತೆ ಬಿಂಬಿಸಲಾಗುತ್ತಿದೆ. ಆದರೆ ಉಡುಪಿಗೆ ಮುಸಲ್ಮಾನರ ಹಾಗು ಕ್ರಿಶ್ಚಿಯನ್ನರ (ಪ್ರಖರ ಹಿಂದೂವಾದಿ ಎಮ್.ವಿ. ಕಾಮತ್ ಅಕ್ಷರ ಕಲಿತದ್ದು ಕಿರಿಸ್ತಾನರ ಕಾನ್ವೆಂಟ್‌ನಲ್ಲೇ) ಕೊಡುಗೆ ಮಾಧ್ವರಿಗೂ ಅಧಿಕಮಟ್ಟದಲ್ಲಿದೆಯೆಂಬುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ..

ಅನ್ಯಧರ್ಮೀಯರನ್ನು ತೆಗಳುತ್ತಾ ಅವರ ವಿರುದ್ಧ ಅಮಾಯಕರನ್ನ ಎತ್ತಿಕಟ್ಟುವ ಹಾಗು ಮಾತೆತ್ತಿದರೆ ಹಿಂದೂಗಳ ಉದ್ಧಾರಕ್ಕಾಗೇ ತಮ್ಮ ಹೋರಾಟ ಎನ್ನುವ ಇವರು ರಾಜ್ಯದಲ್ಲಿ ಭೂ ಸುಧಾರಣಾ ಶಾಸನ ಬಂದಾಗ ಭೂಮಿ ತಮ್ಮ ಜಮೀನಿನಲ್ಲಿ ದುಡಿಯುತ್ತಿರುವ ಹಿಂದುಳಿದವರ ಹಾಗು ದಲಿತರ ಪಾಲಾಗುವುದೆಂದು ಹಣವಂತರಾದ ಕ್ರಿಶ್ಚಿಯನ್ನರಿಗೆ ಮಾರಾಟ ಮಾಡಿಕೊಂಡ ಎಷ್ಟೋ ಉದಾಹರಣೆಗಳಿವೆ. ಉದ್ಯಾವರ ಮೊದಲಾದೆಡೆಗಳಲ್ಲಿ ಕ್ರಿಶ್ಚಿಯನ್ನರು ಮನೆ ಕಟ್ಟಿಕೊಂಡಿರುವುದು ಇಂತಹ ಮಠದ ಜಮೀನಿನಲ್ಲೇ. ಇವರ ದ್ವೇಷ, ಸ್ನೇಹ, ವ್ಯವಹಾರಗಳಿಗೆಲ್ಲ ಆದರದ್ದೇ ಆದ ಲೆಕ್ಕಾಚಾರಗಳಿರುತ್ತವೆ. ಅದನ್ನು ಅರ್ಥೈಸಿಕೊಳ್ಳುವುದು ಸ್ವಲ್ಪ ಕಷ್ಟ. ಇವರ ಟಿಪ್ಪುವಿನ ದ್ವೇಷವನ್ನೂ ವ್ಯಾವಹಾರಿಕ (ಲಾಭ-ನಷ್ಟ) ರೀತಿಯಲ್ಲೇ ಗ್ರಹಿಸಿಕೊಳ್ಳಬೇಕಷ್ಟೆ.

- ಶಶಿ ಪುತ್ತೂರು, ದಕ

ಕರಾವಳಿಯಲ್ಲಿ ನಮ್ಮ ಪತ್ರಿಕೆ ಮೇಲೆ ಹಿಂದೂತ್ವವಾದಿಗಳ ಕಣ್ಣು

ದಕ್ಷಿಣ ಕನ್ನಡ ಹಾಗೂ ಉಡುಪಿ ಅವಳಿ ಜಿಲ್ಲೆಯಲ್ಲಿ ಪತ್ರಿಕೆ ಮಾರುವ ಸಾವಿರಾರು ಸ್ಟಾಲುಗಳಿವೆ. ಜತೆಗೆ ಸಾವಿರಾರು ಪಾನ್-ಬೀಡ ಅಂಗಡಿಗಳೂ ದಿನಪತ್ರಿಕೆ ವಾರಪತ್ರಿಕೆಗಳನ್ನು ಮಾರುತ್ತವೆ. ಆದರೆ ಈ ಎರಡೂ ಜಿಲ್ಲೆಗಳಲ್ಲಿ ಒಂದೇ ಒಂದು ಪತ್ರಿಕೆಯ ಸ್ಟಾಲ್ ಸಹ ಗೌರಿ ಲಂಕೇಶ್ ವಾರಪತ್ರಿಕೆಯನ್ನು ಎದುರಿನ ಸ್ಟಾಂಡಿನಲ್ಲಿ ಪ್ರದರ್ಶಿಸುವುದೇ ಇಲ್ಲ. ಎಲ್ಲಾ ಬಿಟ್ಟು ದಿನಾಲೂ ಸಾವಿರಾರು ಪರವೂರಿನ ಪ್ರಯಾಣಿಕರು ಓಡಾಡುವ ಮಂಗಳೂರಿನ ಬಿಜೈಯಲ್ಲಿರುವ ಕೇಂದ್ರ ಬಸ್ ನಿಲ್ದಾಣದ ಪತ್ರಿಕಾಸ್ಟಾಲ್‌ನಲ್ಲಿಯೂ ಬೇರೆ ಎಲ್ಲಾ ತರದ ಪತ್ರಿಕೆಗಳನ್ನು ಎದುರಿಗೆ



ನೇತು ಹಾಕಿದರೂ ಗೌರಿ ಲಂಕೇಶ್ ವಾರಪತ್ರಿಕೆಯನ್ನು ಮಾತ್ರ ಸ್ಟಾಂಡಿನಲ್ಲಿ ಎದುರಿಗೆ ನೇತು ಹಾಕುವುದಿಲ್ಲ.

ನಿಯಮಿತ ಗ್ರಾಹಕರು ಕೇಳಿದಾಗ ಮಾತ್ರ ತಮ್ಮ ಟೇಬಲ್ಲಿನ ಅಡಿಯಿಂದ ಮೆಲ್ಲಗೆ ತೆಗೆದುಕೊಡುತ್ತಾರೆ. ಸಾಮಾನ್ಯವಾಗಿ ಜನರು ಪರವೂರಿಗೆ ಹೋಗುವಾಗ ಬಸ್ಸಿನಲ್ಲಿ ಓದಲು ಏನಾದರೂ ಇರಲಿ ಎಂದು ಪತ್ರಿಕೆಯ ಸ್ಟಾಲಿಗೆ ಹೋಗಿ ಸ್ಟಾಂಡಿನಲ್ಲಿರುವ ಎಲ್ಲಾ ನಿಯತಕಾಲಿಕೆಗಳ ಮೇಲೆ ಕಣ್ಣಾಡಿಸಿ ಕೊನೆಗೆ ಕುತೂಹಲಕಾರಿ ವಿಷಯದ ಟೈಟಲ್ ಇರುವ ನಿಯತಕಾಲಿಕೆಯನ್ನು ಕೊಳ್ಳುವುದು ಹಳೆಯ ರೂಢಿ. ಅಂತಹ ಪ್ರಯಾಣಿಕರಿಗೆ ಕಾಣದಿರಲೆಂದು ಈ ಸ್ಟಾಲಿನ ಬ್ರಾಹ್ಮಣ ಮಾಲೀಕ ಟೇಬಲ್ಲಿನ ಅಡಿ ಲಂಕೇಶ್ ಅಡಗಿಸಿಡುತ್ತಿರಬೇಕು.

ಎರಡು ದಿನಗಳ ಹಿಂದೆ ಒಬ್ಬ ಪತ್ರಿಕಾ ಸ್ಟಾಲಿನವನನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾನು ವಿಚಾರಿಸಿದಾಗ ಕೇಸರಿಪಡೆಗಳ ಕಿರುಕುಳದ ಭಯದಿಂದ ಹೀಗೆ ಗೌರಿ ಲಂಕೇಶ್ ಅಡಗಿಸಿಟ್ಟು ಮಾರಬೇಕಾಗುತ್ತದೆ ಎಂದನು. "ಪೇಪರ್ ಸ್ಟಾಂಡಿನಲ್ಲಿ ಬಹಿರಂಗವಾಗಿ ಪ್ರದರ್ಶಿಸಿದರೆ ಹೆಚ್ಚು ಪ್ರತಿಗಳು ಮಾರಾಟವಾಗುತ್ತವೆ ನಿಜ, ಆದರೆ ಅದರ ಜತೆ ಜತೆಗೆ ಕೇಸರಿ ಗೂಂಡಾಗಳಿಗೂ ನಮ್ಮ ಮೇಲೆ ಕಣ್ಣಾಗುತ್ತದೆ.

ಯಾಕೆಂದರೆ ಇಡೀ ಕನ್ನಡ ಪತ್ರಿಕಾ ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಹಾಗೂ ರಾಷ್ಟ್ರಮಟ್ಟದ ಸಂಘ ಪರಿವಾರ ಕೊಳಕು ತಂತ್ರಗಳನ್ನೆಲ್ಲಾ ಬಯಲಿಗೆಳೆಯುವ ಏಕೈಕ ಕ ಪತ್ರಿಕೆಯೆಂದರೆ ಗೌರಿ ಲಂಕೇಶ್ ಮಾತ್ರ. ಹಾಗಾಗಿ ಕೇ ಪಡೆಗಳಿಗೆ ಅದರ ಮೇಲೆ ಬಹಳ ಕಣ್ಣಿದೆ. ಆದುದರಿ ನಾವು ಈ ಪತ್ರಿಕೆಯನ್ನು ಬಹಿರಂಗ ಪ್ರದರ್ಶನಕ್ಕಿಡುವುದಿ ಎಂದು ಆ ಅಂಗಡಿಯವ ಹೇಳಿದನು.

ದೈನಿಕಗಳ ವಿಷಯದಲ್ಲಿ ಹೇಳಬೇಕೆಂದರೆ ಹಿಂದೆ ಮಂಗಳೂರಿನಲ್ಲಿ ಕೇವಲ ಹಿಂದೂತ್ವವಾದಿ ದಿನಪತ್ರಿಕೆಗಳ ಉದಯವಾಣಿ, ವಿಜಯವಾಣಿ ಮತ್ತು ಹೊಸದಿಗ ಸ್ಟಾಂಡಿನಲ್ಲಿ ಪ್ರದರ್ಶಿಸುತ್ತಿದ್ದರು. ಸೆಕ್ಯುಲರ್ ದಿನಪತ್ರಿಕೆಗಳ ಪ್ರಜಾವಾಣಿ ಮತ್ತು ವಾರ್ತಾ ಭಾರತಿಯನ್ನು ಪೇಪ ಸ್ಟಾಲಿನವರು ಸ್ಟಾಂಡಿನಲ್ಲಿ ಪ್ರದರ್ಶಿಸುತ್ತಿರಲಿಲ್ಲ. ಗ್ರಾ ಕೇಳಿದರೆ ಮಾತ್ರ ಟೇಬಲ್ ಅಡಿಯಿಂದ ತೆಗೆದು ಕೊಡು ದ್ದರು. ಆದರೆ ವಿಷಭಟ್ಟ ಕನ್ನಡಪ್ರಭದಿಂದ ಹೊರದೂ ಕೊಂಡ ಮೇಲೆ ದೈನಿಕ ಪತ್ರಿಕೆಗಳ ವಿಷಯದಲ್ಲಿ ಪರಿ ಸ್ವಲ್ಪ ಬದಲಾಗಿದ್ದು ಈಗ ನಿಷ್ಪಕ್ಷ ದಿನಪತ್ರಿಕೆಗಳನ್ನೂ ಸ್ಟಾ ನಲ್ಲಿ ನಿರಾಳವಾಗಿ ಅಂಗಡಿಯವರು ಪ್ರದರ್ಶಿಸುವು ಸಾಧ್ಯವಾಗುತ್ತಿದೆ. ಆದರೆ ಗೌರಿ ಲಂಕೇಶ್‌ನಂತಹ ನಿರ್ಭೀ ವಾರಪತ್ರಿಕೆಗಳ ವಿಷಯದಲ್ಲಿ ಮಾತ್ರ ಕೇಸರಿಗಳ ಬೆದ ಇನ್ನೂ ಇದೆಯಂತೆ. ಇದು ಕರಾವಳಿಯನ್ನು ಕೇಸರಿ ಪಡೆ ಹಿಂದೂತ್ವದ ಲ್ಯಾಬ್ ಮಾಡಿರುವುದಕ್ಕೆ ಪಕ್ಕಾ ಸ ಮೇಲಾಗಿ ಗೌರಿ ಲಂಕೇಶ್‌ನಿಂದಾಗಿ ತಮ್ಮ ಹುಳ ಕರಾವಳಿಯ ಹೆಚ್ಚು ಹೆಚ್ಚು ಜನರಿಗೆ ತಿಳಿದು ಹಿಂದು ವರ್ಗದ ದಾರಿ ತಪ್ಪಿದ ಯುವಕರು ಸಂಘ ಪರಿವಾರದಿ ವಿಮುಖವಾಗದಿರಲೆಂದು ಮುಂಜಾಗ್ರತೆಯಾಗಿ ತ ನಿರ್ಭೀತ ವಾರಪತ್ರಿಕೆಯ ಕತ್ತು ಹಿಸುಕಲು ಕೆಟ್ಟ ಪ್ರಯ ಕರಾವಳಿಯಲ್ಲಿ ನಡೆಯುತ್ತಿದೆ.

ಮುಂದುವರಿದ ಜಾತಿಯ ಬಂಟರು ಕೇವಲ ಮತ್ತು ಅಧಿಕಾರ ಸಿಕ್ಕುವಲ್ಲಿ ಮಾತ್ರ ಆಸಕ್ತಿ ತೋರಿ ಚಾಣಾಕ್ಷರು. ಆದುದರಿಂದ ಅವರು ಹಣ ಅಧಿ ಸಿಗುವವರೆಗೆ ಮಾತ್ರ ಹಿಂದೂ-ಹಿಂದುತ್ವ ಎನ್ನುತ ನಂತರ ಬೆನ್ನು ತೋರಿಸುತ್ತಾರೆ ಎಂಬುದು ಸಂಘಿಗಳ ಅಭಿಪ್ರಾಯ. ದಿನೇಶ್ ಅಮೀನ್ ಮಟ್ಟು ಅವರು ಕ ವಾರ ತಮ್ಮ ಒಂದು ಲೇಖನದಲ್ಲಿ ಹೇಳಿರುವ ದೂರದೃಷ್ಟಿಯ ಕೇಸರಿ ಸ್ಟ್ರಾಟೆಜಿಸ್ಟ್‌ಗಳು ಸೆಕ್ಯು ಮಾಧ್ಯಮಗಳ ಉಸಿರು ಕಟ್ಟಿಸಿ ಮುಗ್ಧ ಅರೆಸಾಕ್ಷರ ಬಿ ಮತ್ತು ಮೊಗವೀರ ಯುವಕರನ್ನು ದಾಳವಾಗಿಸಿ ಮು ನೂಕಿ ಈ ಪ್ರದೇಶದಲ್ಲಿ ತಮ್ಮ ಹಿಂದೂತ್ವದ ಲ್ಯಾಬ್ ಯಶಸ್ವಿ ಮಾಡಲು ತಂತ್ರ ರೂಪಿಸಿದ್ದಾರೆ.

ನಾನೇ ಇತ್ತೀಚೆಗೆ ಗಮನಿಸಿರುವಂತೆ ಕರಾವ ಅತಿ ಜನಪ್ರಿಯ ಜನಪದ ಕಲೆಯಾದ ಯಕ್ಷಗಾನ ವ ತಾಳಮದ್ದಳೆ ಮೇಳಗಳಲ್ಲಿ ಹಿಂದೂತ್ವವಾದಿಗಳು ನು ಹಳೆಯ ಕಥಾಪ್ರಸಂಗಗಳನ್ನು ಒಳಗಿಂದೊಳಗೆ ನಯ


ಬದಲಿಸಿ ಗೋರಕ್ಷಣೆ, ಧರ್ಮರಕ್ಷಣೆ ಮತ್ತು ಸನಾ ಸಂಸ್ಕೃತಿಯ ರಕ್ಷಣೆ ಇವುಗಳ ಬಗ್ಗೆ ಸಂಭಾಷಣೆ ತ ಮತ್ತು ದೃಶ್ಯಗಳನ್ನು ಸೇರಿಸುತ್ತಿದ್ದಾರೆ. ಗೋಮಾಂಸ ಭ ಎಲ್ಲರೂ ದಾನವರು-ಅಸುರರು-ರಾಕ್ಷಸರು ಎಂಬಂತೆ ಹೊಸ ದೃಶ್ಯ ಹೆಣೆಯಲಾಗುತ್ತಿದೆ (ಪೆರ್ಡೂರು ಇದರಲ್ಲಿ ಕುಪ್ರಸಿದ್ಧ!). ಹೀಗೆ ಮೊಟ್ಟಮೊದಲ ಬ ಒಂದು ಜಾನಪದ ಕಲೆಯನ್ನು ಬಳಸಿ ಕೇಸರಿ ಅಜೆಂಡ ಅನುಷ್ಠಾನಕ್ಕೆ ಮನೋವೈಜ್ಞಾನಿಕ ಕಾರ್ಯತಂತ್ರ ಕರಾವಳಿಯಲ್ಲೇ ರೂಪುಗೊಳ್ಳುತ್ತಿರುವುದು ಅತ್ಯಂತ ಆ ದ ವಿಷಯ. ಈ ಗಂಭೀರ ವಿಷಯದ ಬಗ್ಗೆ ರಾಜ್ಯ ಮಟ ಚರ್ಚೆಯಾಗಬೇಕಾಗಿದೆ.

- ಆರ್.ಬಿ.ಶೇಣವ, ಮಂಗಳ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗ
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು
ಪ್ರತಿಕ್ರಿಯೆಗಳನ್ನು 9980331427 ನಂಬರ
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ

ಶಂಕರಾಚಾರ್ಯರೂ ವಿವಾದಿತರೇ!

ಶಂಕರಾಚಾರ್ಯರ ಜಯಂತಿಯನ್ನು ಇನ್ನು ಮುಂದೆ ವಿಶ್ವ ದಾರ್ಶನಿಕರ ದಿನವಾಗಿ ಆಚರಿಸಬೇಕೆಂದು ಶೃಂಗೇರಿ ಮಠವು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಅದು ಮುಂದಿನ ವರ್ಷದಿಂದ ಜಾರಿಯಾಗುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. ಕರ್ನಾಟಕ ಮತ್ತು ಕೇರಳ ರಾಜ್ಯ ಸರಕಾರಗಳು ಈ ಪ್ರಸ್ತಾವನೆಗೆ ಈಗಾಗಲೇ ಅನುಮೋದನೆ ಕೊಟ್ಟಿವೆಯಂತೆ.



ಆದರೆ 'ವಿವಾದಿತರ' ಜಯಂತಿಯನ್ನು ಸರಕಾರವೇ ಆಚರಿಸುವುದು ಸರಿಯಲ್ಲ ಎಂದು ಕಳೆದ ವಾರವೇ ಅನೇಕ ಮಠಾಧೀಶರು ಮತ್ತು ಬಿಜೆಪಿ ನೇತಾರರು ಟಿಪ್ಪು ಜಯಂತಿಯನ್ನು ವಿರೋಧಿಸಿ ಬೀದಿಗಿಳಿದು ಕೊಡಗು ಹಾಗೂ ಕರಾವಳಿಯಲ್ಲಿ ಜನರ ಸಾವು-ನೋವು ಹಾಗೂ ಅಪಾರ ಆಸ್ತಿಪಾಸ್ತಿ ನಷ್ಟಕ್ಕೆ ಕಾರಣರಾಗಿದ್ದರು. ಶಂಕರಾಚಾರ್ಯರು ಸಹ ಇತಿಹಾಸಕಾರರ ದೃಷ್ಟಿಯಲ್ಲಿ ಗಾಢ ವಿವಾದಿತರೇ ಆಗಿದ್ದಾರೆ.

ಶಂಕರರು ಹಾಗೂ ಅವರ ಶಿಷ್ಯರ ದಂಡು ಆಂಧ್ರದ ನಾಗರ್ಜುನಕೊಂಡದಲ್ಲಿ ಎಲ್ಲಾ ಬೌದ್ಧ ವಿಹಾರಗಳನ್ನು ನಾಶಮಾಡಿ ಬೌದ್ಧ ಧರ್ಮೀಯರ ಸಾಮೂಹಿಕ ಹತ್ಯೆಗೆ ಕಾರಣವಾಗಿದ್ದರು ಎಂಬ ಆಪಾದನೆಗಳಿವೆ. ನಮ್ಮ ಕರಾವಳಿಯಲ್ಲೂ ಅವರು ಅನೇಕ ಬೌದ್ಧ ಚೈತ್ಯಾಲಯ ಮತ್ತು ಜೈನರ ಜಿನಾಲಯಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಂಡು ಅವುಗಳನ್ನು ಹಿಂದೂ ದೇವಸ್ಥಾನಗಳನ್ನಾಗಿ ಪರಿವರ್ತಿಸಿದರು ಎನ್ನಲಾಗಿದೆ. ಕೊಲ್ಲೂರು ಮೂಕಾಂಬಿಕೆ ಮೊದಲು ಬೌದ್ಧ ಯಕ್ಷಿ ಅಂಬಿಕೆಯ ಮಂದಿರವಾಗಿತ್ತು, ಮಂಗಳೂರಿನ ಕದ್ರಿ ದೇವಳ ಮಂಜುಶ್ರೀ ಮತ್ತು ಅವಲೋಕಿತೇಶ್ವರ ಎಂಬ ಬೌದ್ಧ ಯಕ್ಷರ ಆಲಯವಾಗಿತ್ತು, ಕುಕ್ಕೆ ಸುಬ್ರಹ್ಮಣ್ಯ ಇದು ಧರಣೇಂದ್ರ ಎಂಬ ಹಾವಿನ ರೂಪದ ಜೈನ ಯಕ್ಷಾಲಯವಾಗಿತ್ತು ಹಾಗೂ ಕಟೀಲು ಮುಂತ ಕರಾವಳಿಯ ಹೆಚ್ಚಿನ ದುರ್ಗಾಪರಮೇಶ್ವರಿ ದೇವಸ್ಥಾನಗಳು ಜೈನರ ಪದ್ಮಾವತಿದೇವಿ ಎಂಬ ಯಕ್ಷಿಯ ಮಂದಿರಗಳಾಗಿದ್ದವು ಎಂಬ ಪುರಾವೆಗಳು ಈಗಲೂ ಸಿಗುತ್ತವೆ. ಇವನ್ನೆಲ್ಲಾ ಬಲಾತ್ಕಾರದಿಂದ ಹಿಂದೂ ದೇವಳಗಳನ್ನಾಗಿ ಪರಿವರ್ತಿಸಿದ ಆಚಾರ್ಯರೆಲ್ಲಾ ವಿವಾದಿತರೇ ಅಲ್ಲವೇ? ಇಂತಹ ವಿವಾದಿತ ಆಚಾರ್ಯರ ಹೆಸರಲ್ಲಿ ವಿಶ್ವ ದಾರ್ಶನಿಕರ ದಿನ ಆಚರಿಸುವುದು ಸರಿಯೇ?

- ಜೆ.ರವಿಕಿರಣ, ಮೈಸೂರು

ಬುದ್ಧಿಬಲಿಗಳು ಕುಟ್ಟಪ್ಪನನ್ನ ಕೊಂದಿದ್ಯಾಕೆ?

ಕಟ್ಟಪ್ಪ ಬಾಹುಬಲಿಯನ್ನು ಕೊಂದಿದ್ಯಾಕೆ? ಇದು ಈ ವರ್ಷ ತೆರೆಕಂಡು ಸದ್ದು ಮಾಡಿದ 'ಬಾಹುಬಲಿ' ಸಿನಿಮಾ ಹುಟ್ಟುಹಾಕಿದ್ದ ಪ್ರಶ್ನೆಯಾಗಿತ್ತು, ಅದು ತಂದೆ-ಮಗನ ಫ್ಲ್ಯಾಶ್ ಬ್ಯಾಕ್ ಕಥೆಯೋ? ಇನ್ನೇನೋ ಕಾರಣಕ್ಕೆ ನಿಜಕ್ಕೂ ಬಾಹುಬಲಿಯೇ ಸತ್ತನೋ ಎನ್ನುವುದಕ್ಕೆ ಸದ್ಯದಲ್ಲೇ ತೆರೆಕಾಣುವ ಆ ಸಿನಿಮಾದ ಮುಂದುವರೆದ ಭಾಗದಲ್ಲೇ ಉತ್ತರ ಸಿಗಲಿದೆ. ಆದರೆ ಈಗ ಹುಟ್ಟಿದ ಬುದ್ಧಿಬಲಿಗಳು ಮಡಿಕೇರಿಯಲ್ಲಿ ಕುಟ್ಟಪ್ಪನನ್ನ ಕೊಂದಿದ್ಯಾಕೆ? ಎನ್ನುವ ಪ್ರಶ್ನೆಗೆ ಎಂದಾದರೂ ಉತ್ತರ ಸಿಗಲಿದೆಯೇ? ಕ್ಷಮಿಸಿ ಉತ್ತರ ಸಂಭವವಿಲ್ಲ.

ಚಾಣಕ್ಯ ಸಿದ್ಧಾಂತದಲ್ಲಿ ಒಂದು ಶ್ಲೋಕವಿದೆ. ಒಂದು ಕುಟುಂಬವನ್ನು ಉಳಿಸಲು ಒಬ್ಬನನ್ನು ಬಲಿ ಕೊಡಬಹುದು, ಒಂದು ಊರನ್ನು ಉಳಿಸಲು ಒಂದು ಕುಟುಂಬವನ್ನು ಬಲಿ ಕೊಡಬಹುದು, ಅದೇರೀತಿ ಒಂದು ದೇಶವನ್ನು ಉಳಿಸಲು ಒಂದು ಊರನ್ನೇ ಬಲಿಕೊಟ್ಟರೆ ತಪ್ಪಿಲ್ಲ ಎಂದು. ಈ ಶ್ಲೋಕವನ್ನು ಯಜ್ಞದಲ್ಲಿ ನರಬಲಿಕೊಡುವಾಗ ಆ ಬಲಿ ಪಶುವಿನ ರೊಳ್ಳೆ ತೆಗೆಯುವುದನ್ನು ಒಪ್ಪಿಸಲು ಸಮರ್ಥನೆಗಾಗಿ ಬಳಸಲಾಗುತ್ತಿತ್ತಂತೆ) ಅದೇ ರೀತಿ ಇನ್ನೊಂದು ಸುಭಾಷಿತ ಈ ರೀತಿ ಇದೆ: ಅಶ್ವಂ ನೈವ ಗಜಂ ನೈವ ವ್ಯಾಘ್ರಂ ನೈವ ಚ ನೈವ ಚ ಅಜಾಪುತ್ರಾ ಬಲಿಂ ದದ್ಯಾತ್? ಎಂದು. 'ಬಲಿಗಾಗಿ ಆನೆ ಕುದುರೆಯನ್ನು ಬಳಸುವುದಿಲ್ಲ, ಹುಲಿಯನ್ನಂತು ಖಂಡಿತಾ ಇಲ್ಲ, ಎಲ್ಲಾ ಬಿಟ್ಟು ಕೊನೆಗೆ ಬಲಿಯಾಗುವುದು ಅದೇ ಮರಿಯಷ್ಟೆ' ಎಂದು ಇದರರ್ಥ. ಈ ಕಾರ್ಯಸಾಧನೆಗೆ ತೊಡರಾಗಬಹುದಾದ ಸಿದ್ಧು ಸರ್ಕಾರಕ್ಕೆ ಕಿಚ್ಚು ಹಚ್ಚಲು ತರುವುದರ ಜೊತೆಗೆ ಉನ್ಮಾದವನ್ನು ಹಬ್ಬಿಸಿ ತಮ್ಮಯ ತಳಗಟ್ಟನ್ನು ಗಟ್ಟಿ ಮಾಡಿಕೊಳ್ಳಲು ಹೊಂಚುತ್ತಿರುವ ಸಂಘಪರಿವಾರದ ತಂತ್ರಗಳಿಗೆ ಈ 'ಅಜಾಪುತ್ರ'ರಂತೆ ಬಲಿಯಾಗುವ ಮೂಡಬಿದ್ರೆಯ ಪ್ರಶಾಂತ್ ಪೂಜಾರಿ, ಮಡಿಕೇರಿಯ ಕುಟ್ಟಪ್ಪ, ಬಿಸಿರೋಡಿನ ಹರೀಶ್ ಪೂಜಾರಿಯಂತವರ ಸಾವುಗಳಿಗೆ ಯಾರು ಹೊಣೆ?

ಯಾಕಿಲ್ಲಿ ಬರೀ ಪೂಜಾರಿ, ಶೆಟ್ಟಿ, ಹಿಂದುಳಿದವರು, ದಲಿತರಷ್ಟೇ (ಕೆಲವಾರದ ಹಿಂದೆ ಗಲಭೆಗಳಲ್ಲಿ ಗುರುತಿಸಿ ಕೊಂಡಿರುವ ಹಿಂದೂ ಸಂಘಟನೆಯ ಪಂಟರ್‌ಗಳೆಂದು ಕೆಲ ದಲಿತ ಯುವಕರನ್ನು ಕುಂದಾಪುರದ ಕಂಡ್ಲೂರು ಎಂಬಲ್ಲಿ ಗುಂಪೊಂದು ಹಿಡಿದು ಕೈಕಾಲು ಮುರಿಯುವಂತೆ ಚಚ್ಚಿತ್ತು) ಹಿಂದೂತ್ವದ ಹಿಕ್ಮತ್ತುಗಳಿಗೆ ಬಲಿಯಾಗುತ್ತಿದ್ದಾರೆ? ಗಲಭೆಗಳ ಹಿಂದಿರುವ, ಉದ್ರೇಕಿಸುವ, ಫೈನಾನ್ಸ್ ಮಾಡುವ ಕಾರಂತ, ಭಟ್ಟ, ಜಿಎಸ್‌ಬಿಗಳ ಮಕ್ಕಳು ಹರೀಶ್ ಪೂಜಾರಿ ಯಂತೆ ಬಲಿಯಾಗುವುದಾಗಲೀ, ಭುವಿತ್ ಶೆಟ್ಟಿಯಂತೆ ಜೈಲು ಪಾಲಾಗುವುದಾಗಲೀ ಯಾಕಾಗುತ್ತಿಲ್ಲ? ಉತ್ತರ ಇದೆಯೇ?

ಇತ್ತೀಚೆಗೆ ವಿದ್ಯಾರ್ಥಿಗಳಲ್ಲಿ ಕೋಮುವಿಷ ತುಂಬುವ ಎಬಿವಿಪಿ ಸದಸ್ಯ ಎಂದುಕೊಂಡು ಲವ್ ಜಿಹಾದ್‌ನ ಅಸಲಿಯತ್ತಿನ ಕುರಿತಾಗಿ 'ಆಪರೇಷನ್ ಜ್ಯೂಲಿಯೆಟ್' ಹೆಸರಲ್ಲಿ ಕುಟುಕು ಕಾರ್ಯಾಚರಣೆ ನಡೆಸಿದ ಕೋಬ್ರಾ ಪೋಸ್ಟ್ ಪ್ರಕರಣದಲ್ಲಿ ಅಮಾಯಕರನ್ನು "ಬಲಿ" ಹಾಕುವ ಹಿಂದೂತ್ವವಾದಿ ನಾಯಕರುಗಳ ಅಸಲಿಯತ್ತು ಹೊರಬಿದ್ದಿತ್ತು, ಬಿದ್ದರೂ ಮೀಸೆ ಮಣ್ಣಾಗಲಿಲ್ಲ; ನಾವದಕ್ಕೆ ತಲೆಕೆಡಿಸಿಕೊಂಡೇ ಇಲ್ಲ ಅನ್ನೋ ತರಹದ ಹೇಳಿಕೆ ನೀಡಿದ ಜನಿವಾರೀ ಕುಲದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಎಂಬ ಆಸಾಮಿ "ಕುಟುಕು ಕಾರ್ಯಾಚರಣೆ ನಡೆಸದೇ ನೇರವಾಗಿ ಕೇಳಿದ್ದರೂ ನಾವು ಹೇಳುತ್ತಿದ್ದೇವಪ್ಪ" ಎಂದಿದ್ದಾನೆ. ಹೇಗೂ ಬಂಡವಾಳ ಹೊರಬಂತಲ್ಲ ಇನ್ನು ಯಾವ ರೀತಿ ಮಾತಾಡಿದರೂ ನಮಗೇನು? ಎನ್ನುವ ಒಳ ಅರ್ಥದ ಚಾಣಕ್ಯ ಮಾತಿದು. ಇದೇ ಕಾರ್ಣಿಕ್ ಈ ಕುಟುಕು ಕಾರ್ಯಾಚರಣೆಯಲ್ಲಿ "ಯುವ ಕಾನ್‌ಸ್ಟೇಬಲ್‌ಗಳ ಪೈಕಿ ಶೇ 60 ರಷ್ಟು ಆರೆಸ್ಸೆಸ್ ತರಬೇತಿ ಪಡೆದವರಿದ್ದಾರೆ. ಅವರು ಯಾವತ್ತಿಗೂ ನಮ್ಮ ಜೊತೆ ಸಹಕರಿಸುವಂತವರು. ಈ ಕಾರಣಕ್ಕೇ ನಮ್ಮ ಹುಡುಗರಿಗೆ ಪೊಲೀಸ್ ಇಲಾಖೆಗೆ ಸೇರುವಂತೆ ನಾವು ಹೆಚ್ಚು ಪ್ರೋತ್ಸಾಹಿಸುತ್ತೇವೆ" ಎಂದಿದ್ದ.


ಸಹವರ್ತಿಯೊಂದಿಗಿನ ಕತ್ತಿಮಸೆಯುವಿಕೆಯ ಕಾರಣ ಈಗ ಉಚ್ಚಾಟನೆಗೊಳಗಾಗಿರುವ ಮಾಜಿ ಮುಖಂಡ ಶ್ರೀಕರ ಪ್ರಭು- "ಮುಸ್ಲಿಮನೊಂದಿಗೆ ಮದುವೆಯಾದವಳನ್ನು ಒತ್ತಾಯಪೂರ್ವಕವಾಗಿಯಾದರೂ ತಂದೇ ತರುತ್ತೇವೆ. ನಮ್ಮ ಒತ್ತಡತಂತ್ರಗಳು ಯಾವ ಮಟ್ಟದಲ್ಲಿರುತ್ತವೆಯೆಂದರೆ ಒಂದು ಪ್ರಕರಣದಲ್ಲಿ ಇದಕ್ಕಾಗಿ ತಂದೆಯೇ ಆ ಮಗಳನ್ನು ಕೊಂದೇ ಹಾಕಿದ್ದ. ನಾವು ಆ ತಂದೆಗೆ 'ಎಲ್ಲಾ ರೀತಿ' ಯಲ್ಲೂ ಬೆಂಬಲಿಸಿ ಆ ಊರಿನಲ್ಲಿ ಮತ್ತೊಂದು ಅನ್ಯಧರ್ಮೀಯ ಮದುವೆ ನಡೆಯದಂತೆ ಮಾಡುವಲ್ಲಿ ಯಶಸ್ವಿಯಾದೆವು" ಎಂದು ಹೇಳುವ ಮೂಲಕ ತಮ್ಮವರ ನೀಚತನ ಎಂಥಾದ್ದೆಂದು ಬಹಿರಂಗ ಪಡಿಸಿದ್ದ.

ಈ ಆಪರೇಷನ್ ಜೂಲಿಯೆಟ್ ಕಾರ್ಯಾಚರಣೆ ಲವ್ ಜಿಹಾದನ್ನು ಮುಖ್ಯವನ್ನಾಗಿಸಿಕೊಂಡಿದ್ದರೂ ತಮ್ಮ ಎಲ್ಲಾ ತರಹದ ಕಾರ್ಯಸಾಧನೆಗಾಗಿ ಸಂಘಿಗಳು ಎಂತಹ ನೀಚ ಮಟ್ಟಕ್ಕೂ ಇಳಿಯಲು ಹೇಸರೆಂಬುದಿಲ್ಲಿ ಸಾಬೀತಾಗಿತ್ತು, ಅದೇ ಟಿಪ್ಪು ಸುಲ್ತಾನ ಹೆಸರಲ್ಲಿ ರಾಜ್ಯದಲ್ಲಿ ಗಲಭೆ ಹಬ್ಬಿಸಲು ಮಡಿಕೇರಿಯಲ್ಲಿ ಸತ್ತ ಕುಟ್ಟಪ್ಪನ ಸಾವನ್ನು ಸಂಘಿಗಳು ದೊಡ್ಡ ಮಟ್ಟದಲ್ಲೇ ಸಂಭ್ರಮಿಸಿದ್ದವು. ಬಳಿಕ ಭಗವಾನರನ್ನು ಕೊಲ್ಲುತ್ತೇನೆಂದು ಕರೆಕೊಟ್ಟ ಭುವಿತ್ ಶೆಟ್ಟಿ ಮರುದಿನ ಕೋಮುಗಲಭೆ ಪ್ರೇರೇಪಿಸುವ ಸಲುವಾಗಿ ಬಿಸಿರೋಡಿನಲ್ಲಿ ಹರೀಶ್ ಪೂಜಾರಿಯನ್ನು ಕೊಂದು ಅದನ್ನ ಮುಸಲ್ಮಾನರ ತಲೆಗೆ ಕಟ್ಟಿ ಆ ಮೂಲಕ ಕರಾವಳಿಯಲ್ಲಿ ಬಂದ್ ನಡೆದು ಜನಜೀವನದ ಅಸ್ತವ್ಯಸ್ತಕ್ಕೆ ಕಾರಣನಾದನಾದರೂ ಬಿಟ್ಟ ಬಾಣ ತಿರುಗು ಬೆನ್ನಟ್ಟಿದ್ದ ಕಾರಣ ಸಂಘಿಗಳ ಆಟಕ್ಕೆ ಬ್ರೇಕ್ ಬಿತ್ತು.

ಕೋಮು ಅಮಲನ್ನು ತುಂಬಿಸಲ್ಪಟ್ಟ ಭುವಿತ್ ಶೆಟ್ಟಿಯ ಈ ಕಡಿ-ಕೊಲ್ಲು ತಂತ್ರ ತಮಗೇ ತಿರುಗುಬಾಣವಾಗು ತ್ತದೆಂದರಿತ ಸಂಘ ಪರಿವಾರದ ನಾಯಕರುಗಳು ಮೃತನ ಕುಟುಂಬಕ್ಕೆ ತಕ್ಷಣ 10 ಲಕ್ಷ ಘೋಷಿಸಿದ್ದರಲ್ಲದೇ ಮೂಡಬಿದ್ರೆಯಲ್ಲಿ ಸತ್ತ ಬಜರಂಗಿ ಪ್ರಶಾಂತನ ತಂದೆಯಿಂದಲೂ ಹರೀಶನ ಕುಟುಂಬಕ್ಕೆ ಪರಿಹಾರ ಕೊಡಿಸಿ ಆತ ಹಿಂದೂತ್ವಕ್ಕಾಗಿ ಸತ್ತ "ಹುತಾತ್ಮ" ಎಂಬಂತೆ ಬಿಂಬಿಸಲು ನೋಡಿದ್ದರು. (ಮೂಡಬಿದ್ರೆಯಲ್ಲಿ ಪ್ರಶಾಂತ್ ಕೊಲೆಯನ್ನು ಕಣ್ಣಾರೆ ಕಂಡಿದ್ದ ವಾಮನ ಪೂಜಾರಿ ಎಂಬಾತ ಒಂದೆರಡು ದಿನದಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದ ಅದಕ್ಕೆ ಕಾರಣ ದುಃಖತಪ್ತ ಪ್ರಶಾಂತನ ಹೆತ್ತವರನ್ನು ದ್ವೇಷ ಕಾರಲು ಮೀಡಿಯಾದವರು ಎಳೆತಂದು ಬೇಳೆ ಬೇಯಿಸಿಕೊಂಡ ಸಂಘಿಗಳ ಒತ್ತಡ ಎಂಬ ಮಾತೂ ಇದೆ) ಇಲ್ಲಿ ಪ್ರಶಾಂತನೋ... ಕುಟ್ಟಪ್ಪನೋ... ಹರೀಶನೋ? ಸತ್ತವನು ಯಾರೇ ಇರಲಿ ತಮ್ಮ ಬೇಳೆ ಬೆಂದರಷ್ಟೇ ಸಾಕಿವರಿಗೆ. ಕುಟ್ಟಪ್ಪ ಗಲಭೆಯಲ್ಲಿ ಸತ್ತಿರಬಹುದು ಆದರೆ ಕೊಂದವರು ಯಾರು? ಇದನ್ನು ಅರಿಯದ ಅಮಾಯಕ ಶೆಟ್ಟಿ, ಕೊಡವ, ಪೂಜಾರಿ ಮೊದಲಾದ ಅಮಾಯಕ ಬಲಿಪಶು ವರ್ಗಗಳಿಗಿದೆ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಕೋಮಲ್ ಕಾಲ್ ಎಳೆಯಲ್ಲ!!



ಕೋಮಲ್ ಈವರೆಗೂ ಐವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ಇವರ ಚೊಚ್ಚಲು ಚಿತ್ರ 'ಮಿ.ಗರಗಸ' ಅತೀ ಹೆಚ್ಚು ಬಾರಿ ಟಿವಿಯಲ್ಲಿ ಪ್ರಸಾರ ಕಂಡು ದಾಖಲೆ ಬರೆದಿದೆ. ಅಲ್ಲದೇ 'ಗೋವಿಂದಾಯ ನಮಃ' ಚಿತ್ರ ಟೆಲಿವಿಷನ್‌ನಲ್ಲೇ ಅತಿಹೆಚ್ಚು ದುಡ್ಡು ಮಾಡಿದ ದಾಖಲೆಗೆ ಪಾತ್ರವಾಗಿದೆ. ಸದ್ಯ 'ಕತೆ, ಚಿತ್ರಕತೆ, ನಿರ್ದೇಶನ ಪುಟ್ಟಣ್ಣ' ಸಿನಿಮಾದಲ್ಲಿ ನಟಿಸಿರುವ ಇವರು ಈ ಚಿತ್ರದ ಪಾತ್ರದಿಂದಾಗಿ ಸುದ್ದಿ ಆಗಿದ್ದಾರೆ.

* **ಕೋ**ಮಲ್ ಸೈಲೆಂಟ್ ಅನ್ನುವ ಮಾತಿತ್ತು. ಇದೇನಿದು ಭಯಂಕರ ಸುದ್ದಿ ಮಾಡಿದ್ದೀರಿ?

ನಾನು ಸುದ್ದಿ ಮಾಡಿಲ್ಲ, ನಾನು ಸುದ್ದಿಯನ್ನು ಮಾಡುವುದೂ ಇಲ್ಲ, ಸಿನಿಮಾಗಳೇ ಸದ್ದು ಮಾಡಬೇಕು ಅನ್ನುವುದು ನನ್ನ ಉದ್ದೇಶ. ಹೀಗಾಗಿ ಚಿತ್ರಗಳು ಸುದ್ದಿ ಮಾಡುತ್ತವೆ.


* ನೀವು ಯಾವತ್ತೂ ಬೇರೆಯವರ ತಂಟೆಗೆ ಹೋದವರು ಅಲ್ಲ, ಬೇರೆ ಕಲಾವಿದರ ಬಗ್ಗೆಯೂ ಮಾತಾಡುವವರು ಅಲ್ಲ. 'ಪುಟ್ಟಣ್ಣ' ಸಿನಿಮಾದಲ್ಲಿ ಎಲ್ಲರ ಕಾಲು ಎಳೆದಿದ್ದೀರಿ?

ಯಾಕೆ ಹಾಗೆ ಅಂದುಕೊಳ್ಳುತ್ತಾರೋ ಗೊತ್ತಿಲ್ಲ. ಸಾಮಾಜಿಕ ಜಾಲತಾಣದಲ್ಲಿ 'ಕತೆ ಚಿತ್ರಕತೆ ನಿರ್ದೇಶನ ಪುಟ್ಟಣ್ಣ' ಸಿನಿಮಾದ ಟ್ರೇಲರ್ ಇದೆ. ಎಲ್ಲರೂ ಅದನ್ನು ನೋಡಬಹುದು. ಅದರಲ್ಲಿ ಖಂಡಿತಾ ಕಾಲೆಳೆಯುವಂಥ ಅಂಶಗಳು ಇಲ್ಲ, ತಮಾಷೆಯಾಗಿರುವ ಸಂಭಾಷಣೆ ಇದೆ. ಅಲ್ಲದೇ ಪಂಚಿಂಗ್ ಡೈಲಾಗ್‌ಗಳಿವೆ. ಅದನ್ನು ಕಾಲೆಳೆಯುವಿಕೆ ಅನ್ನುತ್ತಿದ್ದಾರೆ. ಇವತ್ತಲ್ಲ, ಯಾವತ್ತೂ ನಾನು ಬೇರೆಯವರ ಬಗ್ಗೆ ಮಾತಾಡುವುದಿಲ್ಲ.

* 'ಎಲ್ಲರನ್ನೂ ಕಾಲೆಳಿತಿದೆ ಕಾಲ' ಅನ್ನುವ ಮಾತು ನಿಮ್ಮ ಸಿನಿಮಾದ ಡೈಲಾಗ್. ನೀವು ಅದನ್ನೇ ಮಾಡಿದ್ದೀರಿ ಅನ್ನುವುದು ಹಲವರ ಆಕ್ಷೇಪಕ್ಕೆ ಏನು ಹೇಳುತ್ತೀರಿ?

ನಾನು ಮತ್ತೇ ಅದೇ ಉತ್ತರವನ್ನು ಕೊಡುತ್ತೇನೆ. ಟ್ರೇಲರ್‌ನ್ನು ಸೂಕ್ಷ್ಮವಾಗಿ ಕೇಳಲಿ. ಅದರ ಹಿಂದಿರುವ ಉದ್ದೇಶ ಅರ್ಥ ಆಗುತ್ತದೆ. ಅಲ್ಲದೇ ನಾನೊಬ್ಬ ನಟ. ನಿರ್ದೇಶಕರು ಪಾತ್ರವನ್ನು ಹೇಗೆ ಕಲ್ಪಿಸಿಕೊಂಡಿರುತ್ತಾರೋ ಅದರಂತೆ ನಟಿಸಬೇಕು. ನಾನು ಅಷ್ಟೇ ಕೆಲಸ ಮಾಡಿದ್ದೇನೆ. ಅಲ್ಲದೇ, ನನ್ನ ಸಿನಿಮಾಗಳಲ್ಲಿ ಸಾಮಾನ್ಯವಾಗಿ ಅಂತಹ ಡೈಲಾಗ್ ಇದ್ದೇ ಇರುತ್ತವೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ.

* ಪುಟ್ಟಣ್ಣ ಸಿನಿಮಾಗೂ ನಿರ್ದೇಶಕ ಪುಟ್ಟಣ್ಣ ಅವರ ಬದುಕಿಗೂ ಸಂಬಂಧವಿದೆಯಾ?



ಖಂಡಿತಾ ಇಲ್ಲ, ಪುಟ್ಟಣ್ಣ ಕನ್ನಡದ ಬಹುದೊಡ್ಡ ನಿರ್ದೇಶಕರು. ನಮ್ಮ ಪುಟ್ಟಣ್ಣ ಸಿನಿಮಾದೊಳಗಿನ ನಿರ್ದೇಶಕ. ಪಾತ್ರಕ್ಕೂ ಪುಟ್ಟಣ್ಣ ಅವರಿಗೂ ಸಂಬಂಧವಿಲ್ಲ, ಆದರೆ, ಅಂಥದ್ದೊಂದು ಹೆಸರು ಇಡೋಕೆ ಕಾರಣ ಇದೆ. ಅದನ್ನು ಹೇಳಿದರೆ, ಸಿನಿಮಾ ನೋಡುವವರಿಗೆ ಸ್ವಾರಸ್ಯ ಉಳಿಯುವುದಿಲ್ಲ, ಹೀಗಾಗಿ ಅದನ್ನು ಸಿನಿಮಾದಲ್ಲೇ ನೋಡಿ ಅನ್ನುತ್ತೇನೆ. ಇಬ್ಬರು ಪುಟ್ಟಣ್ಣರಿಗೆ ಹೋಲಿಕೆ ಅಂದರೆ, ಅದೊಂದೇ.. ಇಬ್ಬರೂ ನಿರ್ದೇಶಕರು.

* ಪ್ರಿಯಾಮಣಿ ಮತ್ತು ನಿಮ್ಮ ಕಾಂಬಿನೇಷನ್ ಬಗ್ಗೆ ಹೇಳಿ?

ಈಗಾಗಲೇ ನಮ್ಮಿಬ್ಬರ ಸಿನಿಮಾಗಳನ್ನು ಪ್ರೇಕ್ಷಕರು ನೋಡಿದ್ದಾರೆ. ಹಾಗಾಗಿ, ಪ್ರೇಕ್ಷಕರೇ ನಮ್ಮ ಕಾಂಬಿನೇಷನ್ ಬಗ್ಗೆ ಯೋಚಿಸಿದ ಆಗಿದೆ. ಪ್ರತಿಯೊಬ್ಬರೂ ಹೇಳುವುದು ಒಂದೇ, ಯಾವಾಗ ಚಿತ್ರವನ್ನು ಬಿಡುಗಡೆ ಮಾಡುತ್ತೀರಿ ಅಂತ. ಇಂಥ ಅಪರೂಪದ ಜೋಡಿಗಳು ತೆರೆಯ ಮೇಲೆ ಕಾಣಿಸಿಕೊಂಡಾಗ, ಸಹಜವಾಗಿಯೇ ಕುತೂಹಲ ಇರುತ್ತದೆ. ಪುಟ್ಟಣ್ಣ ಸಿನಿಮಾ ಕೂಡ ಕುತೂಹಲ ಮೂಡಿಸಿದೆ.

* ತಮಿಳು ಸಿನಿಮಾದಲ್ಲಿ ನಟಿಸುತ್ತಿದ್ದೀರಿ ಅನ್ನುವ ಸುದ್ದಿ ಇತ್ತು. ಆ ಜರ್ನಿ ಎಲ್ಲಿಗೆ ಬಂದಿದೆ?

ಒಂದು ಸಿನಿಮಾದಲ್ಲಿ ನಟಿಸಿದ್ದೇನೆ. ಅದಿನ್ನೂ ಪೂರ್ಣವಾಗಿಲ್ಲ, ಅಲ್ಲದೇ ಇನ್ನಷ್ಟು ಚಿತ್ರಗಳಿಗೆ ಆಫರ್ ಇದೆ. ಕನ್ನಡದಲ್ಲಿಯ ಸಿನಿಮಾಗಳು ಮುಗಿದನಂತರ ಮತ್ತೆ ತಮಿಳು ಜರ್ನಿಯನ್ನು ಮುಂದುವರೆಸುತ್ತೇನೆ.

* ಕನ್ನಡದಲ್ಲಿ ಸಿನಿಮಾವನ್ನೇ ಮಾಡುವುದಿಲ್ಲ ಎನ್ನುವ ಮಾತುಗಳನ್ನು ಆಡಿದ್ದೀರಿ. ಯಾಕೆ ಆ ರೀತಿಯ ಮಾತುಗಳು ಬಂದವು?

ನಾನು ಆ ಅರ್ಥದಲ್ಲಿ ಮಾತಾಡಿರಲಿಲ್ಲ, ನಾನೇ ದುಡ್ಡು ಹಾಕಿ ನಿರ್ಮಾಣ ಮಾಡಿರುವ ಚಿತ್ರವನ್ನು ಪ್ರೇಕ್ಷಕರು ಸ್ವೀಕರಿಸಲಿಲ್ಲ, ಅಲ್ಲದೇ ಸಿನಿಮಾಗಾಗಿ ನಾನು ಎಷ್ಟೆಲ್ಲ ಕಷ್ಟಪಡುತ್ತೇನೆ. ಅದು ಸಿನಿಮಾ ಮಂದಿಗೆ ಕಾಣುವುದಿಲ್ಲ, ಈ ನೋವನ್ನು ನಾನು ಹೇಳಿಕೊಂಡಿದ್ದು, ಅದನ್ನು ಬೇರೆ ಅರ್ಥ ಬರುವಂತೆ ಗಾಸಿಪ್ ಮಾಡಲಾಯಿತು. ಆಮೇಲೆ ನಾನೇ ಸ್ಪಷ್ಟನೆ ಕೊಟ್ಟೆ. ಕನ್ನಡ ಸಿನಿಮಾ ರಂಗ ನನ್ನನ್ನು ಮತ್ತು ನನ್ನ ಅಣ್ಣನನ್ನು ಸಾಕಿದೆ. ಯಾವತ್ತಿಗೂ ನಾನು ಕನ್ನಡ ಸಿನಿಮಾ ರಂಗವನ್ನು ಮರೆಯೋದಿಲ್ಲ.

* ಸಿನಿಮಾಗಳು ಕಡಿಮೆ ಆಗುತ್ತಿವೆಯಾ? ಯಾಕೆ ಹೆಚ್ಚೆಚ್ಚು ಚಿತ್ರಗಳನ್ನು ಒಪ್ಪಿಕೊಳ್ಳುತ್ತಿಲ್ಲ?

ನನಗೆ ಯಾವತ್ತಿಗೂ ಸಿನಿಮಾಗಳು ಕಡಿಮೆ ಆಗಿಲ್ಲ, ನಾನೇ ಚ್ಯೂಸಿ ಆಗಿದ್ದೇನೆ. ಅಲ್ಲದೇ ವಿಭಿನ್ನ ಪಾತ್ರಗಳು ಸಿಕ್ಕಿದ್ದರಿಂದ ಅದಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಸದ್ಯ ಎರಡು ಚಿತ್ರಗಳು ಬಿಡುಗಡೆ ಸಿದ್ಧವಾಗಿವೆ. ಅಲ್ಲದೇ ಇನ್ನೊಂದು ಸಿನಿಮಾ ಶೂಟಿಂಗ್ ಹಂತದಲ್ಲಿದೆ. ಒಪ್ಪಿಗೆ ಆಗುವ ಕತೆ ಇದ್ದರೆ ನಟಿಸುತ್ತಲೇ ಇರುತ್ತೇನೆ.

* ಕಾನೂನು ಪದವಿ ಮುಗಿಸಿದವರು ನೀವು. ಲಾಯರ್ ಆಗಿಯೇ ಮುಂದುವರೆದಿದ್ದರೆ?

ನನಗೆ ಲಾ ಮಾಡುವುದರಲ್ಲಿ ಆಸಕ್ತಿ ಇರಲಿಲ್ಲ, ಸಿಕ್ಕಾಪಟ್ಟೆ ಅಂಕಗಳನ್ನು ತೆಗೆದುಕೊಳ್ಳುತ್ತಿದ್ದೆ ಅನ್ನುವ ಕಾರಣಕ್ಕೆ ಕಾನೂನು ಓದು ಅಂತ ಕಳುಹಿಸಿದರು. ಅಣ್ಣ ಸಿನಿಮಾರಂಗದಲ್ಲಿ ಆಗಲೇ ಗುರುತಿಸಿಕೊಂಡಿದ್ದರು. ನನಗೂ ಕೂಡ ಸಿನಿಮಾದ ಕಡೆಯೇ ಹೆಚ್ಚು ಆಸಕ್ತಿ ಬೆಳೆಯಿತು. ಓದುತ್ತಲೇ ಪುಟ್ಟಪುಟ್ಟ ಪಾತ್ರ ಮಾಡುತ್ತಿದ್ದೆ, ಶೂಟಿಂಗ್‌ನಲ್ಲಿ ಭಾಗವಹಿಸುತ್ತಿದ್ದರಿಂದ ಹಾಜರಾತಿ ಕಡಿಮೆ ಇರುತ್ತಿತ್ತು, ಹೀಗಾಗಿ ಲಾಯರ್ ಆಗಿ ಮುಂದುವರೆಯುವ ಆಸೆ ಏನೂ ಇರಲಿಲ್ಲ.

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 09-12-2015 RNI No. KARKAN2



ದನ ಕಾದೋನ ಪ್ರೇಮಪ್ರಕರಣ

ದುನಿಯಾ ವಿಜಯ್ ಜತೆ ದನಕಾದ ನಿರ್ದೇಶಕ ಯೋಗರಾಜ್ ಭಟ್, ಸದ್ಯ ಚಳಿಯ ಹೊಡೆತ ತಾಳದೇ ಬೆಂಕಿಕಾಯಿಸುತ್ತಾ ಮನೆಯಲ್ಲಿ ಕೂತಿದ್ದಾರೆ. ಹಾಗಂತ ಅವರು ಸುಮ್ಮನೆ ಕೂತಿಲ್ಲ, 'ದನಕಾಯೋನು' ಸಿನಿಮಾವನ್ನು ಬೆಚ್ಚಗೆ ಡಬ್ಬಾದಲ್ಲಿಟ್ಟು, ಹೊಸ ಪ್ರೇಮ ಪ್ರಕರಣ ಕೈಗೆತ್ತಿಕೊಂಡಿದ್ದಾರೆ. ಒಳ್ಳೆಯ ಟೈಮ್ ಸಿಕ್ಕಾಗ ದನಕಾಯೋನನ್ನು ಥಿಯೇಟರ್‌ಗೆ ಕಳುಹಿಸುವ ಪ್ಲಾನ್ ಮಾಡಿ, ಭಟ್ಟರು ಹೊಸ ಚಿತ್ರಕ್ಕೆ ಕತೆ ಹೊಸೆಯುತ್ತಿದ್ದಾರೆ.

ಭಟ್ಟರಿಗೂ ಪ್ರೇಮಕತೆಗೂ ಬಿಡದ ನಂಟಿದೆ. ಉಡಾಫೆ ಪ್ರೇಮವೇ ಅವರ ಪರಮಾನ್ನ. ಈ ಬಾರಿಯೂ ಅಂಥದ್ದೇ ಪ್ರೇಮಕತೆಯನ್ನು ತೆಗೆದುಕೊಂಡು ಸಿನಿಮಾ ಮಾಡುತ್ತಿದ್ದಾರೆ. ಇವರ ಸಿನಿಮಾದಲ್ಲಿ ಕತೆಗೆ ಜಾಗವೇ ಇಲ್ಲದಿದ್ದರೂ, ಕತೆ ಬರೆಯುವುದಕ್ಕಾಗಿ ಮೂರ್‍ನಾಲ್ಕು ತಿಂಗಳು ತೆಗೆದುಕೊಳ್ಳುತ್ತಾರೆ.

ಈ ಹೊಸ ಸಿನಿಮಾದಲ್ಲಿ ಎಂದಿನಂತೆ ಹಲವು ವಿಶೇಷತೆಗಳು ಇರಲಿವೆಯಂತೆ. ಅದನ್ನು ನೀವು ಸಿನಿಮಾದಲ್ಲೇ ನೋಡಬೇಕಂತೆ. ಮತ್ತೊಂದು ಖುಷಿ ವಿಚಾರ ಅಂದರೆ, ಈ ಬಾರಿ ಹೊಸ ಹುಡುಗನಿಗೆ ಮಣೆ ಹಾಕಿದ್ದಾರೆ. ಆಕಾಶ್ ನಾಗಪಾಲ್ ಎಂಬ ಕಲಾವಿದನನ್ನು ಸಿನಿಮಾರಂಗಕ್ಕೆ ಪರಿಚಯಿಸುತ್ತಿದ್ದಾರೆ. ಈ ಹುಡುಗ ಕಲಾ ನಿರ್ದೇಶಕ ಶಶಿಧರ್ ಅಡಪ ಅವರ ಸಂಬಂಧಿಯಂತೆ.

ಶಿವಲಿಂಗನಲ್ಲಿ ಕಬಾಲಿ

ಇತ್ತೀಚೆಗಷ್ಟೇ ರಜನಿಕಾಂತ್ ಅಭಿನಯದ 'ಕಬಾಲಿ' ಫಸ್ಟ್‌ಲುಕ್ ಪೋಸ್ಟರ್ ರಿಲೀಸ್ ಆಗಿದೆ. ಡಿಫರೆಂಟ್ ಗೆಟಪ್‌ನ ಈ ಪೋಸ್ಟರ್ ಹಲವು ಕಾರಣಗಳಿಂದಾಗಿ ಗಮನ ಸೆಳೆದಿದೆ. ಈಗದು ಶಿವರಾಜ್‌ಕುಮಾರ್ ನಟನೆಯ 'ಶಿವಲಿಂಗ' ಚಿತ್ರದ ಪೋಸ್ಟರ್‌ನಂತೆಯೇ ಇರುವುದರಿಂದ ವಿವಾದಕ್ಕೆ ಕಾರಣವಾಗಿದೆ.

ಮೊನ್ನೆಯಷ್ಟೇ 'ಶಿವಲಿಂಗ' ಸಿನಿಮಾದ ಜಾಹೀರಾತೊಂದು ಬಿಡುಗಡೆ ಆಗಿದೆ. ಅಲ್ಲಿ ಶಿವರಾಜ್‌ಕುಮಾರ್ ಎಡಗೈಯನ್ನು ತಲೆಯ ಬಳಿ ಇಟ್ಟುಕೊಂಡು,



ಕಾಲಿನ ಮೇಲೆ ಕಾಲು ಹಾಕಿಕೊಂಡು ಕೂತಿದ್ದಾರೆ. ಇವೆಲ್ಲವೂ ರಜನಿ ಅವರ 'ಕಬಾಲಿ' ಪೋಸ್ಟರ್‌ನಲ್ಲೂ ಇವೆ. ಹೀಗಾಗಿ 'ಶಿವಲಿಂಗ' ತಂಡದವರು 'ಕಬಾಲಿ'ಯ ಪೋಸ್ಟರ್ ಕದ್ದಿದ್ದಾರೆಂದು ಸುದ್ದಿ ಆಗಿದೆ. ಈ ಬಗ್ಗೆ 'ಶಿವಲಿಂಗ' ನಿರ್ಮಾಪಕ ಸುರೇಶ್ ಗರಂ ಆಗಿಯೇ ಉತ್ತರಿಸಿದ್ದಾರೆ. 'ಕಬಾಲಿ' ಪೋಸ್ಟರ್‌ಗೂ 'ಶಿವಲಿಂಗ' ಪೋಸ್ಟರ್‌ಗೂ ಸಂಬಂಧವೇ ಇಲ್ಲ ಅಂದಿದ್ದಾರೆ. ಅಲ್ಲದೇ 'ಶಿವಲಿಂಗ' ಶುರುವಾಗಿ ಒಂದು ವರ್ಷ ಆಗಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಫೋಟೋಶೂಟ್ ಮಾಡಿದ್ದು ಎಂದು ಸ್ಪಷ್ಟಪಡಿಸಿದ್ದಾರೆ.

ಈ ಮಧ್ಯೆ ನಿರ್ಮಾಪಕರಿಗೆ ಇನ್ನೊಂದು ಕಿರಿಕಿರಿ ಶುರುವಾಗಿದೆ. 'ಶಿವಲಿಂಗ' ಹಾಗೂ 'ಕಿಲ್ಲಿಂಗ್ ವೀರಪ್ಪನ್' ಚಿತ್ರಗಳು ರಿಲೀಸ್‌ಗೆ ರೆಡಿ ಇರುವ ಕಾರಣ, ಯಾವುದನ್ನು ಮೊದಲು ಬಿಡುಗಡೆ ಮಾಡಬೇಕು ಎಂಬುದು ತಲೆನೋವಾಗಿದೆ. ಏನೇ ಆದರೂ, ಡಿಸೆಂಬರ್‌ನಲ್ಲಿ 'ಶಿವಲಿಂಗ' ಬಿಡುಗಡೆ ಆಗಲಿದೆ ಅಂದಿದ್ದಾರೆ ನಿರ್ದೇಶಕರು.

ತೆಲುಗಿನ ಪವರ್‌ಸ್ಟಾರ್ ಜತೆ ಸಂಜನಾ

ವಿವಾದಗಳ ಮೂಲಕವೇ ಸದಾ ಸುದ್ದಿಯಲ್ಲಿರುವ ಸಂಜನಾ, ಈ ಬಾರಿ ಸಿನಿಮಾಗಾಗಿ ಸದ್ದು ಮಾಡಿದ್ದಾರೆ. ತೆಲುಗಿನ ಸೂಪರ್ ಸ್ಟಾರ್ ಪವನ್ ಕಲ್ಯಾಣ್ ನಟನೆಯ 'ಸರ್ದಾರ್ ಗಬ್ಬರ್ ಸಿಂಗ್' ಸಿನಿಮಾದಲ್ಲಿ ಇವರು ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ಅಧಿಕೃತವಾಗಿ ಚಿತ್ರತಂಡದಿಂದ ಈ ಮಾಹಿತಿ ಬರದೇ ಹೋದರೂ, ಸಂಜನಾ ಮಾತ್ರ ಈ ವಿಷಯವನ್ನು ಹೇಳಿಕೊಂಡು ಸಖತ್ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ.

ಸಾಕಷ್ಟು ಸಿನಿಮಾಗಳಲ್ಲಿ ನಟಿಸಿರುವ ಸಂಜನಾಗೆ ಈವರೆಗೂ ಯಾವ ಚಿತ್ರಗಳೂ ಸರಿಯಾದ ಬ್ರೇಕ್ ನೀಡಿಲ್ಲ. 'ಗಂಡ ಹೆಂಡತಿ' ಸಿನಿಮಾದಲ್ಲಿ ಸಿಕ್ಕ ಪ್ರಚಾರವೇ ಇವತ್ತಿಗೂ ಅವರಿಗೆ ಅವಕಾಶ ತಂದು ಕೊಡುತ್ತಿದೆ. 'ಮಹಾನದಿ' ಎಂಬ ಮಹಿಳಾ ಪ್ರಧಾನ ಸಿನಿಮಾದಲ್ಲಿ ಒಂದೊಳ್ಳೆ ಪಾತ್ರ ಸಿಕ್ಕರೂ, ಅದಕ್ಕೆ ಇವರು ನ್ಯಾಯ ಸಲ್ಲಿಸಲಿಲ್ಲ. ಹೀಗಾಗಿ ಗೆಸ್ಟ್ ಅಪೀರಿಯನ್ಸ್, ಸ್ಪೆಷಲ್ ಸಾಂಗ್‌ಗೆ ಇವರು ಸೀಮಿತ ಆಗಿದ್ದಾರೆ. ಇದೇ ಮೊದಲ ಬಾರಿಗೆ ಸೂಪರ್ ಸ್ಟಾರ್ ಜತೆ ನಟಿಸುವ ಅವಕಾಶ ಸಿಕ್ಕಿದ್ದರಿಂದ ಈ ಚಿತ್ರವಾದರೂ ಅವರನ್ನು ಕೈ ಹಿಡಿಯುತ್ತಾ ನೋಡಬೇಕು..

ಮೊನ್ನೆಯಷ್ಟೇ 'ಬೆಂಗಳೂರು 23' ಸಿನಿಮಾದ ನಿರ್ದೇಶಕರ ಜತೆ ಇವರು ಗಲಾಟೆ ಮಾಡಿಕೊಂಡಿದ್ದಾರೆ. ಸಂಜನಾ ಮಾತಿಗೆ ಬೇಸತ್ತಿರುವ ಈ ನಿರ್ದೇಶಕರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮೆಟ್ಟಿಲೇರುವ ಮಾತುಗಳನ್ನೂ ಆಡಿದ್ದರು. ಕೆಲವರ ಮಧ್ಯಸ್ಥಿಕೆಯಿಂದಾಗಿ ಗಲಾಟೆ ತಣ್ಣಗಾಗಿದೆ.





ಪ್ರಕಾಶ್ ಸಿನಿಮಾ ಪಕ್ಕಾ ಆಯಿ

ಬಹುಭಾಷಾ ನಟ ಪ್ರಕಾಶ್ ರೈ ಕನ್ನಡದಲ್ಲಿ ಮತ್ತೊಂದು ನಿರ್ದೇಶನ ಮಾಡುತ್ತಾರೆ ಎಂಬ ಸುದ್ದಿ ಆಗಿತ್ತು, ಈಗದು ಪಕ್ಕಾ ಸಿನಿಮಾದ ಮೊದಲ ಪೋಸ್ಟರ್ ಕೂಡ ಸಿದ್ಧವಾಗಿದ್ದು ಸದ್ಯದಲ್ಲೇ ಸೆಟ್ಟೇರಲಿದೆ.

ಇದು ಮಲೆಯಾಳಂ ಸಿನಿಮಾ 'ಶಟ್ಟರ್'ದ ರೀಮೇಕ್ ಚಿತ್ರ. ಹಕ್ಕಿಗಿದ್ದ ತೊಡಕು ನಿವಾರಣೆ ಆಗಿರುವ ಕಾರಣ ಪಾತ್ರಗಳ ಆ ನಡೆದಿದೆ. ಪ್ರಿಯಾಮಣಿ ನಾಯಕಿ. ಪ್ರಮುಖ ಪಾತ್ರದಲ್ಲಿ ಪ್ರಕ ಅಚ್ಯುತ್‌ಕುಮಾರ್, ಸಂಚಾರಿ ವಿಜಯ್ ಇದ್ದಾರೆ. ಕನ್ನಡ ಮತ್ತು ತ ಈ ಸಿನಿಮಾ ನಿರ್ಮಾಣ ಆಗಲಿದೆ.


ಕತೆಯೇ ಸಿನಿಮಾದ ಜೀವಾಳ. ಹೀಗಾಗಿ ಕನ್ನಡಕ್ಕೆ ಅದನ್ನು ಒಗ್ಗಿ ಚಿತ್ರ ಮಾಡುತ್ತಿದ್ದಾರೆ ಪ್ರಕಾಶ್. 'ಒಗ್ಗರಣೆ' ಸಿನಿಮಾದ ಹಾಡುಗ ಆಗಿದ್ದರಿಂದ ಆ ಚಿತ್ರದ ಸಂಗೀತ ನಿರ್ದೇಶಕರನ್ನು ಇಲ್ಲಿಯೂ ಮಾಡಿದ್ದಾರೆ. ಇಳಯರಾಜ 'ಮ್ಯೂಸಿಕ್ ನೀಡುತ್ತಿದ್ದು,' ಪತ್ರಕರ್ತ ಸಂಭಾಷಣೆ ಬರೆಯುತ್ತಿದ್ದಾರೆ. ಶಶಿಧರ್ ಅಡಪ ಅವರ ಕಲಾ ನಿರ್ದೇ

ಸುದೀಪ್ ಗರ

ತಮ್ಮ ಹೆಸರಿನಲ್ಲಿ ಬಿಟ್ಟಿ ಪ್ರಚಾರ ಪಡೆಯುತ್ತಿರುವ ನಿರ್ದೇ ನಿರ್ಮಾಪಕರ ವಿರುದ್ಧ ಸುದೀಪ್ ಅಸಮಾಧಾನಗೊಂಡಿದ್ದಾರೆ. ಸು ಸುದ್ದಿ ಮಾಡಿದರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಮಾ ಅವರ ಆಪ್ತರೆದುರು ಆಡಿದ್ದಾರೆ.

ಸುದೀಪ್ ಸದ್ಯ 'ಕೋಟಿಗೊಬ್ಬ' ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಆನಂತರ ಇವರು 'ಮುಂಗಾರು ಮಳೆ' ಕೃಷ್ಣ ನಿರ್ದೇಶನದ ಚಿತ್ರದಲ್ಲಿ ನ ಇದರ ನಂತರ ರಾಮ್‌ಗೋಪಾಲ್ ವರ್ಮಾ ಚಿತ್ರದಲ್ಲಿ ನಟಿಸಬೇ ಮಧ್ಯ ಇನ್ನೆರಡು ಚಿತ್ರಗಳ ಹೆಸರು ಕೇಳಿಬಂದಿವೆ. ಜೋಗಿ ಪ್ರೇ ಕೋಟಿಯಲ್ಲಿ ಸಿನಿಮಾ ಮಾಡುವುದಾಗಿ ಹೇಳಿದ್ದಾರೆ. ಅ ಚಿತ್ರದಲ್ಲಿ ಸುದೀಪ್ ಮತ್ತು ಶಿವರಾಜ್‌ಕುಮಾರ್ ನಟಿಸಲಿದ್ದಾ ಹೇಳಿಕೊಂಡಿದ್ದಾರೆ. ಅಲ್ಲದೇ ರವಿ ಚಂದ್ರನ್ ಮತ್ತು ಸುದೀಪ್ ಮತ್ತೊಂದು ಚಿತ್ರದಲ್ಲಿ ಒಂದಾಗಲಿದ್ದಾರೆ ಎಂಬ ವಿಷಯವೂ ಕೇಳಿಬರುತ್ತಿದೆ. ಈ ಎರಡೂ ಚಿತ್ರಗಳ ಬಗ್ಗೆಯೂ ಸುದೀಪ್‌ಗೆ ಗೊತ್ತಿಲ್ಲವಂತೆ. ಹೀಗಾಗಿ ಸುದೀಪ್‌ಗೆ ಸಹಜವಾಗಿ ಸಿಟ್ಟು ಬಂದಿದೆ.

ತಾವೇ ಹೇಳಿಕೊಳ್ಳುವವರೆಗೂ ಇಂತಹ ಸುದ್ದಿಗಳಿಗೆ ಕಿವಿಗೊಡಬೇಡಿ ಎಂದು ಮಾಧ್ಯಮದ ಸ್ನೇಹಿತರಿಗೂ ತಿಳಿಸಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com